ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 31 ಭಾನುವಾರ 2025


₹4

ಸಂಪುಟ: 46 | ಸಂಚಿಕೆ: 134 | ಪುಟಗಳು: 12+VIII

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




Happy Birthday
ಚಾಮರಾಜನಗರ ಹೆಮ್ಮೆಯ ಸಂಸದರಾದ
ಶ್ರೀ ಸುನಿಲ್ ಬೋಸ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
VISMAYA PRINTS
ಪ್ರಕಟಣೆ: ಶ್ರೀ ಸುನೀಲ್ ಬೋಸ್ ಅಭಿಮಾನಿಗಳ ಬಳಗ ಹಾಗೂ ಎಸ್.ಎಂ. ಇಂಟೀರಿಯರ್ಸ್, ಮೈಸೂರು


ನಿಮ್ಮ ಪ್ರೀತಿ, ವಿಶ್ವಾಸ, ಸ್ನೇಹ, ಬಾಂಧವ್ಯ, ಆತ್ಮೀಯತೆ, ಸಜ್ಜನಿಕೆ ನಮ್ಮ ಬದುಕಿನ ಆದರ್ಶಗಳಾಗಿವೆ.
ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರು ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಮತ್ತು JHBCS President ಆದ
ಡಾ|| ಹೆಚ್.ವಿ.ರಾಜೀವ್ ಅಣ್ಣರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
29-8-2025
ಶುಭ ಕೋರುವವರು:
ಆರ್. ರಾಜೇಂದ್ರ B.Sc. BE
ಸಪ್ತಗಿರಿ ಎಂಟರ್‌ಪ್ರೈಸಸ್
ಸೆಕ್ಯೂರಿಟಿ ಸರ್ವೀಸಸ್, MPDR ಗ್ರೂಪ್
ಶ್ರೀ ಕುಮಾರ್
ರಾಜೀವ್ ಸ್ನೇಹಬಳಗ


ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದ ಸಂಸದರಾದ
ಸನ್ಮಾನ್ಯ ಶ್ರೀ ಸುನೀಲ್ ಬೋಸ್ ರವರಿಗೆ
ಹುಟ್ಟು ಹಬ್ಬದ ಶುಭಾಶಯುಗಳು
ಶ್ರೀ ಚಂದ್ರಶೇಖರ್
ಮಾಜಿ ಅಧ್ಯಕ್ಷರು
ಚಿದರವಳ್ಳಿ ಗ್ರಾಮ ಪಂಚಾಯಿತಿ
ಪ್ರಕಟಣೆ: ಚಿದರವಳ್ಳಿ ಗ್ರಾಮಪಂಚಾಯಿತಿ
ಅಧ್ಯಕ್ಷರು, ಉಪಾಧ್ಯಕ್ಷರು, ಎಲ್ಲಾ ಸದಸ್ಯರುಗಳು
ಗ್ರಾಮದ ಯಜಮಾನರು ಗ್ರಾಮಸ್ಥರು ಮತ್ತು ಕಾಂಗ್ರೆಸ್ ಮುಖಂಡರುಗಳು
ಶ್ರೀಮತಿ ರಾಜೇಶ್ವರಿ ಚಂದ್ರಶೇಖರ್
ಅಧ್ಯಕ್ಷರು
ಚಿದರವಳ್ಳಿ ಗ್ರಾಮ ಪಂಚಾಯಿತಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 31 ಭಾನುವಾರ 2025

₹4

ಸಂಪುಟ: 46 | ಸಂಚಿಕೆ: 134 | ಪುಟಗಳು: 12+VIII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*







ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಚಪಾತಿ ಜೊತೆ ಜೇನು ತುಪ್ಪ ಕೊಡ್ಲಾ?

ಗಂಡ : ಥೀ ಬೇಡ ಕಣೆ, ಅದು ಜೇನು ಹುಳದ ಬಾಯಿಂದ ಬಂದಿರುತ್ತೆ. ನಾನು ಬಾಯಿಂದ ಬಂದಿದ್ದನ್ನು ತಿನ್ನಲ್ಲ.

ಹೆಂಡತಿ : ಹಾಗಾದ್ರೆ ಮೊಟ್ಟೆ ಕೊಡ್ಲಾ?

ಮೈಸೂರು ಮಿತ್ರ

ಭಾನುವಾರ, 31 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಿಂದಿಸುವವರಿಗೆಲ್ಲ ಉತ್ತರಿಸುತ್ತ ಕುಳಿತರೆ ನೀವು ಅದೇ ಕೆಲಸ ಮಾಡುತ್ತಿರಬೇಕು. ನಿಂದಕರನ್ನು ಹಿಂದೆ ಬಿಡಿ, ನೀವು ಮುಂದೆ ನಡೆಯಿರಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುತ್ತ ಬಡಿದರೆ ಹಾವು ಸಾಯೋದಿಲ್ಲ

ನಿಮ್ಮ ಪತ್ರಗಳು

■ ಮೈಸೂರು ನಗರ ಪೊಲೀಸ್ ಆಯುಕ್ತರ ಗಮನಕ್ಕೆ!

ಮಾನ್ಯರೆ,

ಯಾವುದೇ ವಾಹನ ಸವಾರ ಮಾನವ ಜೀವಕ್ಕೆ ಅಪಾಯ ಉಂಟು ಮಾಡುವ ರೀತಿಯಲ್ಲಿ ವ್ಹೀಲಿಂಗ್ ಮಾಡುತ್ತಾ ವಾಹನ ಸವಾರಿ ಮಾಡುವುದು ಭಾರತೀಯ ನ್ಯಾಯ ಸಂಹಿತೆ 2023 ಸೆಕ್ಷನ್ 125 ರ ಅನ್ವಯ ಶಿಕ್ಷಾರ್ಹ ಅಪರಾಧ.

ಈ ರೀತಿ ವ್ಹೀಲಿಂಗ್ ಮಾಡುವ ಸಂದರ್ಭದಲ್ಲಿ ಅಪಘಾತ ಸಂಭವಿಸದಿದ್ದರೂ ಸಹ ನ್ಯಾಯಾಲಯವು ಅಂತಹ ಸವಾರನಿಗೆ 3 ತಿಂಗಳ ಸೆರೆವಾಸ ಹಾಗೂ ರೂ.2,500 ದಂಡ ವಿಧಿಸಬಹುದು. ವ್ಹೀಲಿಂಗ್ ಮಾಡಿ ಅಪಘಾತ ಸಂಭವಿಸಿ ಯಾವುದೇ ವ್ಯಕ್ತಿಗೆ ಗಾಯ ಉಂಟಾದರೆ ಅಂತಹ ಸವಾರನಿಗೆ ನ್ಯಾಯಾಲಯವು 6 ತಿಂಗಳ ಸೆರೆವಾಸ ಹಾಗೂ ರೂ.5000 ದಂಡ ವಿಧಿಸಬಹುದು.

ವ್ಹೀಲಿಂಗ್ ಮಾಡಿ ಅಪಘಾತ ಸಂಭವಿಸಿ ಯಾವುದೇ ವ್ಯಕ್ತಿಗೆ ಗಂಭೀರ ಸ್ವರೂಪದ ಗಾಯ ಉಂಟಾದರೆ ಅಂತಹ ಸವಾರನಿಗೆ ನ್ಯಾಯಾಲಯವು 3 ವರ್ಷ ಸೆರೆವಾಸ ಹಾಗೂ ರೂ.10,000 ದಂಡ ವಿಧಿಸಬಹುದು.

ವ್ಹೀಲಿಂಗ್ ಮಾಡುವುದು ಸಂಜ್ಞೇಯ ಅಪರಾಧ (cognizable offence). ವ್ಹೀಲಿಂಗ್ ಮಾಡಿದ ವಾಹನ ಸವಾರ, ಚಾಲಕನನ್ನು ಪೊಲೀಸರು ಯಾವುದೇ ವಾರಂಟ್ ಇಲ್ಲದೇ ಬಂಧಿಸಬಹುದು. ವ್ಹೀಲಿಂಗ್ ಮಾಡಿದ ಪ್ರಕರಣದಲ್ಲಿ ಅಂತಹ ವಾಹನಗಳನ್ನು ಪೊಲೀಸರು ತಕ್ಷಣ ಜಪ್ತಿ ಮಾಡಬೇಕಾಗುತ್ತದೆ.

ವ್ಹೀಲಿಂಗ್ ಮಾಡುವುದು ಇತ್ತೀಚೆಗೆ ಟ್ರೆಂಡಿಂಗ್ ಆಗಿದೆ. ಇದರಿಂದ ವ್ಹೀಲಿಂಗ್ ಮಾಡುವ ಸವಾರ ಹಾಗೂ ಸಾರ್ವಜನಿಕರ ಜೀವಕ್ಕೂ ಅಪಾಯ ಉಂಟಾಗುತ್ತದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯವೇ ಕಳವಳ ವ್ಯಕ್ತಪಡಿಸಿದೆ. ವ್ಹೀಲಿಂಗ್ ಮಾಡುವುದು ಭಂಡತನದ ಪ್ರದರ್ಶನ ಮಾತ್ರವಲ್ಲ ಇದು ಮಾನವ ಜೀವಕ್ಕೆ ಎರವಾಗುವ ಕೃತ್ಯ ಎಂದು ಹೈಕೋರ್ಟ್ ಕೂಡಾ ಎಚ್ಚರಿಸಿದೆ.ಈ ವಿಚಾರವಾಗಿ ಸರಕಾರವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನವನ್ನೂ ನೀಡಿದೆ. ಈ ವಿಚಾರವಾಗಿ ಪೊಲೀಸರು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕೆಂದೂ ಕೋರ್ಟ್ ಸಲಹೆ ನೀಡಿದೆ. ಪೊಲೀಸರೂ ಸಹ ವ್ಹೀಲಿಂಗ್ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ.

ಸಾರ್ವಜನಿಕ ರಸ್ತೆಗಳಲ್ಲಿ ಅಪಾಯಕಾರಿ ವ್ಹೀಲಿಂಗ್ ಮಾಡುವ ವ್ಯಕ್ತಿಗಳ ವಿರುದ್ಧ ದೂರು ದಾಖಲಿಸಿ ಅವರ ವಾಹನ ಚಾಲನ ಪರವಾನಗಿಯನ್ನು ಖಾಯಂ ಆಗಿ ರದ್ದು ಗೊಳಿಸಿ ಎಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರೂ ಸೂಚಿಸಿದ್ದಾರೆ.

ವ್ಹೀಲಿಂಗ್ ಮಾಡುವುದು ಹೇಗೆ ಶಿಕ್ಷಾರ್ಹ ಅಪರಾಧವೋ ಅಂತೆಯೇ ಇಂತಹ ಅಪರಾಧ ಮಾಡಲು ಪ್ರೇರೇಪಿಸುವುದೂ ಸಹ ಭಾರತೀಯ ನ್ಯಾಯ ಸಂಹಿತೆ, 2023 ಸೆಕ್ಷನ್ 45ರ ಪ್ರಕಾರ ಶಿಕ್ಷಾರ್ಹ ಅಪರಾಧ.

ಹತ್ತು ಅಥವಾ ಅದಕ್ಕಿಂತ ಹೆಚ್ಚು ಜನರನ್ನು ಯಾವುದೇ ಅಪರಾಧ ಮಾಡಲು ಪ್ರೇರೇಪಿಸುವುದು,ಪ್ರೋತ್ಸಾಹ ನೀಡುವುದು ಹಾಗೂ ದುಷ್ಪ್ರೇರಣೆ ನೀಡುವುದು ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 57 ರ ಪ್ರಕಾರ ಶಿಕ್ಷಾರ್ಹ ಅಪರಾಧ.ಈ ಅಪರಾಧ ಎಸಗಿದವರಿಗೆ ನ್ಯಾಯಾಲಯವು ಏಳು ವರ್ಷಗಳವರೆಗೆ ಸೆರೆವಾಸ ಶಿಕ್ಷೆಯ ಜೊತೆಗೆ ದಂಡವನ್ನೂ ವಿಧಿಸಬಹುದು.

ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ಮೈಸೂರು ಮಹಾನಗರ ಪಾಲಿಕೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಒಂದು ಜಾಹೀರಾತು ಫಲಕವನ್ನು ಪ್ರದರ್ಶಿಸಲಾಗಿದೆ.ಇದರಲ್ಲಿ ಓರ್ವ ಸವಾರ ವ್ಹೀಲಿಂಗ್ ಮಾಡುತ್ತಾ ಅಪಾಯಕಾರಿ ರೀತಿಯಲ್ಲಿ ಸವಾರಿ ಮಾಡುವ ಚಿತ್ರ ಇದೆ. ಇದು ಸಾಮೂಹಿಕವಾಗಿ ವ್ಹೀಲಿಂಗ್ ಮಾಡಲು ಪ್ರೋತ್ಸಾಹ,ಪ್ರಚೋದನೆ ಹಾಗೂ ಪ್ರೇರಣೆ ನೀಡುತ್ತಿದೆ. ದ್ವಿಚಕ್ರ ವಾಹನದ ಈ ಜಾಹೀರಾತಿನಲ್ಲಿ ವಾಹನ ಸವಾರ ವ್ಹೀಲಿಂಗ್ ಮಾಡುವ ಚಿತ್ರವನ್ನು ಪ್ರಕಟಿಸಿ ವ್ಹೀಲಿಂಗ್ ಮಾಡಲು ಪ್ರೇರೇಪಿಸುವ ಮತ್ತು ಪ್ರಚೋದಿಸುವ ಮೂಲಕ ಈ ವಾಹನದ ಕಂಪನಿಯೂ ಅಪರಾಧ ಎಸಗಿದೆ.

ಇದು ಭಾರತೀಯ ನ್ಯಾಯ ಸಂಹಿತೆ,2023 ಸೆಕ್ಷನ್ 57ರ ಪ್ರಕಾರ ಶಿಕ್ಷಾರ್ಹ ಅಪರಾಧ ಈ ಕೂಡಲೇ ಮೈಸೂರು ನಗರದ ಪೊಲೀಸ್ ಆಯುಕ್ತರು ಎಚ್ಚೆತ್ತು ವ್ಹೀಲಿಂಗ್ ಮಾಡಲು ಪ್ರೇರೇಪಿಸುವ ಈ ಜಾಹೀರಾತು ಪ್ರಕಟಿಸಿದ ಸಂಸ್ಥೆ ಮತ್ತು ಇದಕ್ಕೆ ಅವಕಾಶ ನೀಡಿದ ಪಾಲಿಕೆ ಮತ್ತು ಪ್ರಾಧಿಕಾರದ ವಿರುದ್ಧ ಭಾರತೀಯ ನ್ಯಾಯ ಸಂಹಿತೆ,2023 ಸೆಕ್ಷನ್ 57 ರ ಅನ್ವಯ ಪ್ರಕರಣ ದಾಖಲಿಸಿ ಅಪಾಯಕಾರಿ ವ್ಹೀಲಿಂಗ್ ಕೃತ್ಯಕ್ಕೆ ಬ್ರೇಕ್ ಹಾಕಬೇಕಾಗಿದೆ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು.

■ ಸಂಚಾರಿ ದೀಪ ಸರಿಪಡಿಸಿ

ಮಾನ್ಯರೆ,

ಹುಣಸೂರು ರಸ್ತೆಯ ಐಶ್ವರ್ಯ ಪೆಟ್ರೋಲ್ ಬಂಕ್ ಬಳಿ ಇರುವ ಸಂಚಾರಿ ಸಿಗ್ನಲ್‌ನಲ್ಲಿ ಹುಣಸೂರು ಕಡೆಯಿಂದ ಬರುವ ವಾಹನಗಳಿಗೆ ಕೆಂಪು ದೀಪವಿದ್ದಾಗ ಬಾಣದ ಗುರುತಿನಲ್ಲಿ ಬಲಗಡೆಗೆ ಹಸಿರು ದೀಪ ತೋರಿಸುತ್ತಾ ಇರುತ್ತದೆ. ಆದರೆ ಮೈಸೂರು ನಗರದಿಂದ ಬರುವ ವಾಹನಗಳಿಗೆ ಗ್ರೀನ್ ಸಿಗ್ನಲ್ ಇರುತ್ತದೆ. ಆದ್ದರಿಂದ ನಗರದ ಸಂಚಾರ ಪೊಲೀಸರು ಈ ದೀಪವನ್ನು ಸರಿಪಡಿಸಿ.

–ಸೋಮಶೇಖರ್, ಇಲವಾಲ.

■ ಬೀದಿ ದೀಪಗಳನ್ನು ಅಳವಡಿಸಿ

ಮಾನ್ಯರೆ,

ಬೋಗಾದಿ– ಗದ್ದಿಗೆ ರಸ್ತೆಯಲ್ಲಿ ಬರುವ ರೂಪಾ ನಗರದಿಂದ ಮರಟಿಕ್ಯಾತನ ಹಳ್ಳಿಯ ತನಕ ಇರುವ ಜೋಡಿ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸದೇ ಇರುವುದರಿಂದ ಆಗಿಂದಾಗ್ಗೆ ಅನಾಹುತಗಳು ನಡೆಯುತ್ತಿರುವುದು ಸರ್ವೇಸಾಮಾನ್ಯವಾಗಿದೆ. ರಾತ್ರಿ 7 ಗಂಟೆಯ ನಂತರ 10 ಗಂಟೆಯ ಒಳಗೆ ಈ ರಸ್ತೆಯಲ್ಲಿ ನಡೆದುಕೊಂಡು ಹೋಗಲು ಬೀದಿ ದೀಪಗಳು ಇಲ್ಲದ ಕಾರಣ ಸಾಮಾನ್ಯ ಜನತೆ ಪರಿತಪಿಸುವಂತಾಗಿದೆ ಎಂದರೆ ತಪ್ಪಾಗಲಾರದು. ಸಂಬಂಧಪಟ್ಟವರು ಆದಷ್ಟು ಬೇಗ ಈ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವುದರ ಮೂಲಕ ಸಾಮಾನ್ಯ ಜನತೆಗೆ ನೆರವಾಗುವುದು ಅತ್ಯಗತ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಗಣಪತಿ ಉತ್ಸವ: ಸುರಕ್ಷತೆ ಬಗ್ಗೆ ಎಚ್ಚರ

ಮಾನ್ಯರೆ,

ತೆಲಂಗಾಣ ರಾಜ್ಯದಲ್ಲಿ ಸಾರ್ವಜನಿಕ ಗಣಪತಿ ಉತ್ಸವಕ್ಕೆ ಸಂಬಂಧಿಸಿ ವಿದ್ಯುತ್ ತಂತಿ ಸ್ಪರ್ಶದಿಂದ ಕನಿಷ್ಠ ನಾಲ್ಕು ಜನರು ಮೃತರಾಗಿರುವ ಹೃದಯ ವಿದ್ರಾವಕ ಸುದ್ದಿ ವರದಿಯಾಗಿದೆ. ಇದನ್ನು ಎಚ್ಚರಿಕೆಯ ಘಂಟೆ ಎಂದು ತಿಳಿದು ಗಣಪತಿ ಉತ್ಸವದಲ್ಲಿ ಶಾಂತಿ ಹಾಗೂ ಸುರಕ್ಷತೆಯ ಬಗ್ಗೆ ಸಂಬಂಧಪಟ್ಟವರೆಲ್ಲರೂ ತೀವ್ರ ನಿಗಾ ವಹಿಸುವುದು ಅತ್ಯಂತ ಅವಶ್ಯಕ.

–ಲಕ್ಷ್ಮಣ್ ಗೋರ್ಲಕಟ್ಟೆ, ಬಡಾವಣೆ ಗದ್ದಿಗೆ ರಸ್ತೆ ಬೋಗಾದಿ ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಭಾರತದ ಕೃಷ್ಣರಾಯರೆಂಬ ದಿವ್ಯಚೇತನ

ಗಮಕ ಎಂದರೇನು? ಸಂಗೀತ ಬಲ್ಲವರು ಅದು ಸಂಗೀತವನ್ನು, ಸ್ವರಗಳನ್ನು ಅಂದಗೊಳಿಸಲು ಬಳಸುವ ಒಂದು ಬಗೆಯ ಅಲಂಕಾರ, ಅಂದಾರು. ಅದು ಸರಿ. ಆದರೆ ಬಹಳ ಹಿಂದಿನಿಂದಲೂ ನಮ್ಮ ಕನ್ನಡ ನಾಡಿನಲ್ಲಿ ಗಮಕ–ಗಮಕಿ ಎಂಬ ಶಬ್ದವು ವ್ಯಾಪಕವಾಗಿ ರೂಢಿಯಲ್ಲಿತ್ತು. ಅದರ ಅರ್ಥ ಏನು ಕಾವ್ಯವನ್ನು ಕೇಳುಗರಿಗೆ ಅರ್ಥವಾಗುವಂತೆ, ರುಚಿಸುವಂತೆ, ರಾಗವಾಗಿ ಓದುವುದು ಎಂದು ಇದನ್ನು ಅರ್ಥೈಸಬಹುದು. ಬರೀ ಓದಿದರೆ ಸಾಕೆ ಅದರ ವಿವರಣೆಯೂ ಬೇಕಲ್ಲವೇ? ಖಂಡಿತಾ ಬೇಕು. ಈ ಎರಡೂ ಕಾರ್ಯಗಳು, ಅಂದರೆ ಕಾವ್ಯವನ್ನು ವಾಚಿಸುವ, ವ್ಯಾಖ್ಯಾನಿಸುವ ಕ್ರಿಯೆಗಳೆರಡೂ ಸೇರಿರುವ ವಿದ್ಯೆಯೇ ಗಮಕ ಕಲೆ. ಅಂತಹ ಗಮಕಿಗಳು ನಮ್ಮ ನಾಡಿನಲ್ಲಿ, ಅದರಲ್ಲೂ ರಾಜರ ಆಸ್ಥಾನಗಳಲ್ಲಿ ವಿಪುಲವಾಗಿ ಇದ್ದರು ಎಂಬುದಕ್ಕೆ ನಮ್ಮ ಅನೇಕ ಕಾವ್ಯಗಳಲ್ಲಿ ಆಧಾರ ಸಿಗುತ್ತದೆ. ಅವರಿಗೆ ವಿಶೇಷ ಮರ್ಯಾದೆ ಇರುತ್ತಿತ್ತು. ಕನ್ನಡ ಸಾಹಿತ್ಯದಲ್ಲಿ ನಮಗೆ ಸಿಗುವ ಹಳಗನ್ನಡ ಕಾವ್ಯಗಳು ಉಳಿದು ಬಂದಿರುವುದೇ ಇಂತಹ ಗಮಕಿಗಳಿಂದ ಎಂಬ ಮಾತಿನಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ.

ಹಳಗನ್ನಡ ಕಾವ್ಯಗಳು ಅಂದರೆ ಕಬ್ಬಿಣದ ಕಡಲೆ ಎಂಬ ಭಾವ ಕೆಲವರಲ್ಲಿ ಇರುವುದನ್ನು ನೋಡಿರಬಹುದು. ಅದರಲ್ಲೂ ವಿದ್ಯಾರ್ಥಿ ದೆಸೆಯಲ್ಲಿ ಇದು ಸ್ವಲ್ಪ ಹೆಚ್ಚಾಗಿಯೇ ಕಾಣಿಸಿಕೊಳ್ಳುವ ಒಂದು ತಪ್ಪು ಕಲ್ಪನೆ. ಅದಕ್ಕೆ ಕಾರಣವೆಂದರೆ, ಹಳಗನ್ನಡ ಕಾವ್ಯವನ್ನು ಪ್ರೀತಿಯಿಂದ ಓದದ, ಅರ್ಥೈಸಿಕೊಳ್ಳದ ಶಿಕ್ಷಕರು. ಅವರಿಗೇ ಕಾವ್ಯವು ಅರ್ಥವಾಗದಿದ್ದರೆ, ಮಕ್ಕಳಲ್ಲಿ ಅದರ ಬಗ್ಗೆ ಆಸಕ್ತಿ ಹೇಗೆ ಹುಟ್ಟಿಸಿ ಯಾರು? ಅಂತಹ ಶಿಕ್ಷಕರು ಹೆಚ್ಚಾಗುತ್ತಾ ನಮ್ಮ ಸರಕಾರವು ಅಥವಾ ಶಿಕ್ಷಣ ಇಲಾಖೆಯು ಅದಕ್ಕೆ ಕಂಡುಕೊಂಡ ಪರಿಹಾರವೆಂದರೆ, ಪಠ್ಯಪುಸ್ತಕಗಳಲ್ಲಿ ಹಳಗನ್ನಡ ಪದ್ಯಗಳನ್ನೇ ಕಡಿಮೆ ಮಾಡಿಬಿಡುವುದು. ಎಂತಹ ಅದ್ಭುತ ಪರಿಹಾರ!? ಸಾವಿರಾರು ವರ್ಷಗಳಿಂದ ಬಂದ ಪಂಪ, ರನ್ನ, ಜನ್ನ, ಪೊನ್ನ, ನಾರಣಪ್ಪ ಮುಂತಾದ ಕವಿಗಳ ಕಾವ್ಯಕ್ಕೆ ನಾವಿತ್ತ ಗೌರವ ಇದು. ಕನ್ನಡಿಗರು ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ಎಂದು ಇಲ್ಲಿನ ಸಾಮಾನ್ಯ ಜನರೂ ಹೇಗೆ ಹಾಡುಗಳನ್ನು ರಚಿಸುತ್ತಿದ್ದರು ಎಂದು ಹೊಗಳಿದ್ದ ಕವಿರಾಜಮಾರ್ಗಕಾರ ಏನಾದರೂ ಈಗ ಇದ್ದಿದ್ದರೆ.


ರಾಜರ ಆಸ್ಥಾನಗಳಲ್ಲಿ, ದೇವಸ್ಥಾನಗಳಲ್ಲಿ, ಶ್ರೀಮಂತ ಜಮೀನ್ದಾರರ ಮನೆಗಳಲ್ಲಿ, ಹಬ್ಬ–ಹರಿದಿನ, ಮದುವೆ ಮುಂತಾದ ಸಂದರ್ಭಗಳಲ್ಲಿ ನಮ್ಮ ಹಳಗನ್ನಡ ಕಾವ್ಯಗಳನ್ನು ಅತ್ಯಂತ ಪ್ರೀತಿಯಿಂದ ಓದಿಸಿ, ಕೇಳಿ ಆನಂದಿಸುವ ಜನಸಂಪದ ನಮ್ಮಲ್ಲಿತ್ತು. ಅಕ್ಷರಸ್ಥರಿರಲಿ ಇಲ್ಲದಿರಲಿ, ಕಾವ್ಯವನ್ನು ರಸವತ್ತಾಗಿ ವಾಚಿಸಿ, ವ್ಯಾಖ್ಯಾನಿಸುವ ಕಾವ್ಯ ಪ್ರೀತಿಯನ್ನುಳ್ಳ ಜನಸಂಪತ್ತು ನಮ್ಮಲ್ಲಿತ್ತು. ಯಾವ ಕಾರಣಕ್ಕೋ ಅದು ಕ್ಷೀಣವಾಗ ತೊಡಗಿದಂತೆ ಅದಕ್ಕೆ ಪುನರ್ಜೀವ ಕೊಟ್ಟು, ಪುನರುತ್ಥಾನ ಮಾಡಿದ ಕೀರ್ತಿ ಕನ್ನಡ ನಾಡಿನ ಎಸ್.ಜಿ.ಬಿಂದೂರಾಯರು, ಕೃಷ್ಣರಾಯರಿಗೆ ಸಲ್ಲಬೇಕು. ಅವರೀರ್ವರ ಕಾವ್ಯ ಮತ್ತು ಗಮಕ ಪ್ರೀತಿ ನಮ್ಮ ಭಾಗ್ಯ ವಿಶೇಷ ಎಂದೇ ಹೇಳಬೇಕು. ಇವರ ಕಾವ್ಯವಾಚನ ಅಥವಾ ಗಮಕ ಕಲೆಯಿಂದ ಕರುನಾಡಿನಲ್ಲಿ ಗಮಕಿಗಳ ಒಂದು ಸಮೃದ್ಧ ಬೆಳೆ ಉಂಟಾಯಿತು. ಇವರ ಶಿಷ್ಯರು, ಇವರಿಂದ ಸ್ಫೂರ್ತಿ ಪಡೆದವರು ಗಮಕದಲ್ಲಿ ಆಸಕ್ತಿ ವಹಿಸತೊಡಗಿ, ನಶಿಸಿ ಹೋಗುತ್ತಿದ್ದ ಒಂದು ಅದ್ಭುತ ಕಲಾಪ್ರಕಾರವು ಉಳಿಯುವಂತಾಯಿತು. ಇದಕ್ಕೆ ಬೆನ್ನೆಲುಬಾಗಿ ನಿಂತಿದ್ದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಮೈಸೂರು ಮಹಾರಾಜ ಕಾಲೇಜಿನ ಕರ್ಣಾಟಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತುಗಳಲ್ಲದೆ ಪ್ರಾತಃ ಸ್ಮರಣೀಯರಾದ ಬಿ.ಎಂ.ಶ್ರೀಕಂಠಯ್ಯ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿಗಳು, ಡಿ.ವಿ.ಗುಂಡಪ್ಪ, ಕುವೆಂಪು ಮುಂತಾದ ಸಾಹಿತಿಗಳು.

ಹಾಸನದಲ್ಲಿ 1893ರಲ್ಲಿ ಅನಂತಯ್ಯ ಮತ್ತು ನಾಮಗಿರಿಯಮ್ಮನವರ ಮೂರನೆಯ ಮಗುವಾಗಿ ಕೃಷ್ಣರಾಯರು ಜನಿಸಿದರು. ಆರು ತಿಂಗಳ ಮಗುವಿದ್ದಾಗಲೇ ತಂದೆಯನ್ನು ಕಳೆದುಕೊಂಡು ತಾಯಿಯ ತವರಿನಲ್ಲಿ ಸೋದರಮಾವ ಮತ್ತು ಸೋದರತ್ತೆಯವರ ಪ್ರೀತಿಯ ನೆರಳಿನಲ್ಲಿ ಬೆಳೆದರು. ಈ ಸೋದರತ್ತೆಯವರು ಹಾಡು ಮತ್ತು ಕವನಗಳನ್ನು ರಚಿಸುತ್ತಿದ್ದಾರೆ. ಜೊತೆಗೆ ತಾತ ರಾಮಚಂದ್ರರಾಯರೂ ಕವಿ ಮತ್ತು ವಿದ್ವಾಂಸರಾಗಿದ್ದರು. ಈ ಇಬ್ಬರ ಪ್ರಭಾವ ಬಾಲಕ ಕೃಷ್ಣರಾಯರ ಮೇಲೆ ಆಗಿದ್ದಿರಬೇಕು. ಅಷ್ಟೇ ಅಲ್ಲದೆ ಕೃಷ್ಣರಾಯರ ಅಣ್ಣ ಮತ್ತು ಅಕ್ಕನವರೂ ಸಂಗೀತ ಮತ್ತು ಸಾಹಿತ್ಯದ ಒಲವನ್ನು ಉಳ್ಳವರೇ ಆಗಿದ್ದರು. ಹೀಗಾಗಿ ಬಾಲ್ಯದಲ್ಲಿಯೇ ಅವರು ಪಿಟೀಲನ್ನು ಕಲಿಯುವ ಕಡೆಗೆ ಒಲವು ತೋರಿದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ನಿತ್ಯವೂ ತಾಯಿಗೆ ಒಂದು ಗಂಟೆಯಾದರೂ ಯಾವುದಾದರೂ ಕಾವ್ಯದ ವಾಚನ ಮಾಡಿ ನಂತರ ಮಲಗುವುದು ಅವರ ಅಭ್ಯಾಸವಾಗಿತ್ತು. ಅಕ್ಕನ ಅಕ್ಕರೆಯ ಸವಿಯನ್ನು ಉಣ್ಣುತ್ತಲೇ ಒಳ್ಳೆಯ ಸಂಸ್ಕಾರವನ್ನು ಪಡೆಯುತ್ತಾ ಹೋದ ಬಾಲಕ ಕೃಷ್ಣ. ಬಡತನವು ಹಿತ ಮಿತದ ಪಾಠವನ್ನಷ್ಟೇ ಅಲ್ಲದೆ ಅಲ್ಪದರಲ್ಲಿಯೇ ತೃಪ್ತಿ ಪಡೆಯುವುದನ್ನೂ ಸಹ ಕಲಿಸಿದ್ದಿರಬೇಕು. ಬೆಳೆದು ದೊಡ್ಡವರಾದಾಗ ಇವರ ಸರಳ, ಸಂಯಮ, ನಿರಾಡಂಬರ ಮತ್ತು ಶಿಸ್ತಿನ ಜೀವನ ಬೇರೆಯವರಿಗೆ ಮಾದರಿ ಎನಿಸುವಂತೆ ಇತ್ತು ಎಂದು ಅವರನ್ನು ಬಲ್ಲವರ ಅಂಬೋಣ.

ಮನೆಯ ಸುಸಂಸ್ಕೃತ ವಾತಾವರಣದ ಜೊತೆ ಮೈಸೂರಿನ ಸಮೃದ್ಧ ಸಂಗೀತದ ಕಛೇರಿಗಳು. ದೈವದತ್ತವಾದ ಕಂಚಿನ ಸಿರಿಕಂಠ. ಸಾಹಿತ್ಯದಲ್ಲಿ ಅಭಿರುಚಿ. ಈ ಎಲ್ಲವೂ ಸೇರಿ ಅತ್ಯುತ್ತಮ ಗಮಕಿಗೆ ಬೇಕಾದ ಪೂರ್ವರಂಗದ ವೇದಿಕೆಯನ್ನು ಅವರಲ್ಲಿ ಸಿದ್ಧಪಡಿಸುತ್ತಿತ್ತು. ಅದಕ್ಕೆ ಪೂರಕವಾಗಿ ಮಹಾರಾಜ ಕಾಲೇಜಿನ ಗ್ರಂಥಾಲಯದ ಪಾಲಕ ಹುದ್ದೆಯು ಸಾಹಿತ್ಯಾಧ್ಯಯನಕ್ಕೆ ಇಂಬಾಯಿತು. ಭಾರತದ ಬಿಂದೂರಾಯರನ್ನು ತಮ್ಮ ಗುರುಗಳಾಗಿ ಭಾವಿಸಿದರು. ಸಂಗೀತ–ಸಾಹಿತ್ಯಗಳೆರಡೂ ಅವರ ಮನದಂಗಳದಲ್ಲಿ ಅದಾಗಲೇ ಪಕ್ವಗೊಂಡಿದ್ದುವು. ಆಗ, ಇಂದಿನಂತೆ ಗಮಕ ವಾಚನ ಮತ್ತು ವ್ಯಾಖ್ಯಾನವನ್ನು ಬೇರೆಬೇರೆಯವರು ಮಾಡುತ್ತಿರಲಿಲ್ಲ. ಅವೆರಡನ್ನೂ ಒಬ್ಬರೇ ನಿರ್ವಹಿಸುತ್ತಿದ್ದರು. ಅಂದರೆ ಸಂಗೀತದ ಜ್ಞಾನದೊಡನೆ ಕಾವ್ಯವನ್ನು ಅರ್ಥವತ್ತಾಗಿ ವ್ಯಾಖ್ಯಾನಿಸುವ, ಜೊತೆಗೆ ಮನರಂಜಿಸುವ ವಿಷಯಗಳನ್ನೂ ಹಿತಮಿತವಾಗಿ ಸೇರಿಸಿ ಕೇಳುಗರನ್ನು ಹಿಡಿದಿಡುವ ಪ್ರತಿಭೆಯು ಬಹಳ ಮುಖ್ಯವಾಗಿರುತ್ತಿತ್ತು. ಕೃಷ್ಣ ರಾಯರ ವಾಚನದ ಪ್ರಥಮ ಆಕರ್ಷಣೆ ಎಂದರೆ ಅವರ ಕಂಚಿನ ಶಾರೀರ. ಆಯಾ ಸನ್ನಿವೇಶಕ್ಕೆ ಒಪ್ಪುವ ರಾಗಗಳನ್ನು ಅಳವಡಿಸಿ, ಅದನ್ನು ಸನ್ನಿವೇಶಕ್ಕೆ ತಕ್ಕಂತೆ ಭಾವ ತುಂಬುತ್ತಾ ರಸವತ್ತಾಗಿಸುತ್ತಾ ವಾಚಿಸುವ ರೀತಿ ಮತ್ತು ಅನೇಕ ದೃಷ್ಟಾಂತಗಳೊಡನೆ ಆಸಕ್ತಿಕರವಾಗಿ ಅದನ್ನು ಅರ್ಥೈಸುತ್ತಿದ್ದ ರೀತಿ. ಇದರಿಂದ ಅವರ ಗಮಕವು ಅತ್ಯಂತ ಜನಪ್ರಿಯವಾಗತೊಡಗಿ, ಬೇರೆ ಬೇರೆ ಊರಿನಿಂದಲೂ ಅವರಿಗೆ ಆಹ್ವಾನ ಬರತೊಡಗಿದುವು. ಕುಮಾರವ್ಯಾಸನ ಭಾರತ ಒಂದೇ ಅಲ್ಲದೆ ಜೈಮಿನಿ, ತೊರವೆ ರಾಮಾಯಣ, ಚಾಟು ವಿಠಲನ ಭಾಗವತ, ರಾಘವಾಂಕ, ಕುವೆಂಪು, ಗೋವಿಂದ ಪೈಗಳ ಹೆಬ್ಬೆರಳು, ಭಾವಗೀತೆಗಳನ್ನೂ ಒಳಗೊಂಡಂತೆ ಅವರು ವಾಚನ–ವ್ಯಾಖ್ಯಾನ ಮಾಡಬಲ್ಲವರಾಗಿದ್ದರು. ತಿರುಪತಿ, ಮಂಜೇಶ್ವರ, ಶಿವಮೊಗ್ಗ, ಎಡತೊರೆ, ಚಿಕ್ಕಮಗಳೂರು, ಉತ್ತರ ಕರ್ನಾಟಕದೆಲ್ಲೆಡೆ ಅವರ ಗಮಕವನ್ನು ಕೇಳಿ ಜನ ಮಂತ್ರಮುಗ್ಧರಾಗಿದ್ದಾರೆ, ಕಣ್ಣೀರು ಸುರಿಸಿದ್ದಾರೆ, ಅತೀವ ಆನಂದ ಪಟ್ಟಿದ್ದಾರೆ. ಹತ್ತಾರು ಮೈಲಿ ನಡೆದು ಬಂದು ಅವರ ಕಾರ್ಯಕ್ರಮವನ್ನು ಆಸ್ವಾದಿಸಿದ ಜನರಿದ್ದಾರೆ.

ಇಷ್ಟೆಲ್ಲಾ ಜನಪ್ರಿಯತೆಯನ್ನು ಗಳಿಸಿದರೂ ಕೃಷ್ಣರಾಯರು ಎಂದೂ ಕೀರ್ತಿ ಶನಿಯ ಬೆನ್ನು ಹತ್ತಿದವರಲ್ಲ. ಯಾವ ಪ್ರಶಸ್ತಿ, ಬಿರುದು, ಸನ್ಮಾನಗಳಿಗಾಗಿ ಕೈಚಾಚಿದವರಲ್ಲ. ಗಮಕವನ್ನು ಒಂದು ತಪಸ್ಸಿನಂತೆ –ವ್ರತದಂತೆ ಕೈಗೊಂಡಿದ್ದ ರಸಋಷಿ ಆತ. ಗಮಕ ಕಲೆಯ ಸೊಬಗನ್ನು ಹರಡಲು ಅಹರ್ನಿಶಿ ಟೊಂಕಕಟ್ಟಿ ದುಡಿದವರು. ಯಾರೇ ಬಂದರೂ ಅವರಿಗೆ ಪ್ರೀತಿಯಿಂದ ವಿದ್ಯಾದಾನ ಮಾಡುತ್ತಿದ್ದವರು. ವೀಣೆ ಶೇಷಣ್ಣನವರು ಅವರನ್ನು ತಮ್ಮ ಮನೆಗೆ ಬರಮಾಡಿಕೊಂಡು, ಕಾವ್ಯವಾಚನ ಮಾಡಿಸಿ ಮನದುಂಬಿ ಕೊಂಡಾಡಿದರಂತೆ. ಆಕಾಶವಾಣಿಯಲ್ಲೂ ಅವರ ಗಮಕ ವಾಚನ ನಿರಂತರವಾಗಿ ನಡೆಯುತ್ತಿತ್ತು.

ಕೃಷ್ಣಗಿರಿ ಕೃಷ್ಣರಾಯರ ಮಾತಿನಲ್ಲಿಯೇ ಹೇಳುವುದಾದರೆ, ಸಾಹಿತ್ಯದೊಡನೆ ಹಿತವಾದ ರಾಗವನ್ನು ಮಿತವಾಗಿ ಸಮನ್ವಯ ಮಾಡಿ ಭಾವ ಸ್ಫುರಿಸುವಂತೆ ಕಾವ್ಯವಾಚನ ಮಾಡುವುದೇ ಗಮಕ ಕಲೆ. ಗಮಕಿಯು ಬರಿಯ ಸಾಹಿತಿಯೂ ಅಲ್ಲ, ಬರಿಯ ಗಾಯಕನೂ ಅಲ್ಲ. ಸನ್ನಿವೇಶಕ್ಕೆ ತಕ್ಕಂತೆ ಕಾವ್ಯದ ಅರ್ಥ, ರಸ, ಭಾವ ಇವುಗಳ ಸ್ಫುರಣೆಗೋಸುಗ ಅನುಗುಣವಾದ ರಾಗವನ್ನು ಹೊಂದಿಸಬೇಕು. ಹೊಸ ಪದಗಳ ಪ್ರಯೋಗವಿಲ್ಲದೆ ಪಠಣ ಮಾತ್ರದಿಂದಲೇ ತನಗಿರುವ ಅಲ್ಪಾವಕಾಶದಲ್ಲಿ ಕವಿಹೃದಯವನ್ನು ಬಿಚ್ಚಿ ತೋರಿಸಬೇಕು 1966ರಲ್ಲಿ ಈ ಮಹಾನ್ ಗಮಕಿ, ಭಾರತದ ಕೃಷ್ಣರಾಯರು ಶ್ರೀ ಕೃಷ್ಣನಲ್ಲಿ ಲೀನವಾದರು.



ಕೃಷ್ಣಗಿರಿ ಕೃಷ್ಣರಾಯರು

> “ ಕೃಷ್ಣರಾಯರು ಎಂದೂ ಕೀರ್ತಿಶನಿಯ ಬೆನ್ನು ಹತ್ತಿದವರಲ್ಲ. ಯಾವ ಪ್ರಶಸ್ತಿ, ಬಿರುದು, ಸನ್ಮಾನಗಳಿಗಾಗಿ ಕೈಚಾಚಿದವರಲ್ಲ. ಗಮಕವನ್ನು ಒಂದು ತಪಸ್ಸಿನಂತೆ-ವ್ರತದಂತೆ ಕೈಗೊಂಡಿದ್ದ ರಸಋಷಿ ಆತ. ಗಮಕ ಕಲೆಯ ಸೊಬಗನ್ನು ಹರಡಲು ಅಹರ್ನಿಶಿ ಟೊಂಕ ಕಟ್ಟಿ ದುಡಿದವರು. ಯಾರೇ ಬಂದರೂ ಅವರಿಗೆ ಪ್ರೀತಿಯಿಂದ ವಿದ್ಯಾದಾನ ಮಾಡುತ್ತಿದ್ದವರು. ವೀಣೆ ಶೇಷಣ್ಣನವರು ಅವರನ್ನು ತಮ್ಮ ಮನೆಗೆ ಬರಮಾಡಿಕೊಂಡು, ಕಾವ್ಯ ವಾಚನ ಮಾಡಿಸಿ ಮನದುಂಬಿ ಕೊಂಡಾಡಿದರಂತೆ.

ಸಂತ ಶ್ರೇಷ್ಠರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಸಕಲರಿಗೂ ಲೇಸನ್ನೇ ಬಯಸಿ ಮನುಷ್ಯಜಾತಿ ತಾನೊಂದೆ ವಲಂ ಎನ್ನುವಂತೆ ಧರ್ಮದ ಮೂಲವನ್ನು ದಯೆ ವಿನಯದ ಮೂಲಕ ಲೋಕಸಂಗ್ರಹ ಕಾರ್ಯವೊಂದನ್ನೆ ನಿತ್ಯಕಾಯಕವಾಗಿಸಿ ಜಗದ ಗುರು ಪರಂಪರೆಯ ಮಾರ್ಗ ದರ್ಶನದಲ್ಲಿ ಜನರ ಗುರುವಾಗಿ ಜನಪರ ಜಗದ್ಗುರುವಾಗಿ ಸದಾಚಾರದ ಸಮ ಸಮಾಜದ ನಿರ್ಮಾಣದ ಹೊಸ ಕನಸುಗಳ ಬೀಜ ಬಿತ್ತಿ ಜೀವ ಚೈತನ್ಯದ ಮಹಾಬೆಳೆ ಬೆಳೆದವರು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳು.

ಪರಮಪೂಜ್ಯ ಡಾ. ಶ್ರೀ ಶ್ರೀರಾಜೇಂದ್ರ ಮಹಾಸ್ವಾಮಿಗಳ ಕನಸುಗಳನ್ನು ಹೆಮ್ಮರವಾಗಿಸಿ ಅವರು ಗಡಿನಾಡು ಮಲೆನಾಡು ಕುಗ್ರಾಮಗಳಲ್ಲಿ ಕಟ್ಟಿದ ಸಂಸ್ಥೆಗಳಿಗೆ ಆಧುನಿಕ ಸ್ಪರ್ಶವನ್ನು ನೀಡಿ ಆಧ್ಯಾತ್ಮಿಕ ತಾತ್ವಿಕ ಬುನಾದಿಯ ಮೇಲೆ ನವ ನವೀನ ತಂತ್ರಜ್ಞಾನದ ಉಜ್ವಲ ಬೆಳಕಿನಲ್ಲಿ ಸಪ್ತಸಾಗರ ದಾಚೆಗೂ ವಿಸ್ತರಿಸಿ ನಾಡಿನ ದೇಶದ ಕೀರ್ತಿ ಪತಾಕೆಯನ್ನು ಮುಗಿಲಗಲ ಪ್ರಜ್ವಲಿಸುವಲ್ಲಿ ದಣಿವರಿಯದೆ ದುಡಿಯುತ್ತಿರುವ ನಮ್ಮ ನಡುವಿನ ನಡೆದಾಡುವ ಕಲ್ಯಾಣದ ಬಸವಣ್ಣನೆಂದರೆ ಈ ನೆಲದ ಆರಾಧ್ಯದೇವರು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು.

ಅಲ್ಲಮರು ನುಡಿದಂತೆ ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಯಬ್ದದಂತೆ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಕಾಯಕ. ಭಕ್ತರ ನಡುವಿನ ಶಿವನಂತೆ, ಅನ್ನದಾಸೋಹ ಪ್ರಸಾದದ ಅನ್ನಪೂರ್ಣೇಶ್ವರಿಯಂತೆ, ಜ್ಞಾನದಾತೆ ಸರಸ್ವತಿಯಂತೆ ಆಧ್ಯಾತ್ಮಿಕವಾಗಿ ಕಂಗೊಳಿಸುತ್ತಾರೆ. ಮತ್ತೊಂದು ಕಡೆ ಮಹಾಸಂಸ್ಥೆಯನ್ನು ದಿಟ್ಟತನದಲ್ಲಿ ಮುನ್ನಡೆಸುವ ಧರ್ಮ ಬದ್ಧ, ನ್ಯಾಯ ಬದ್ಧ, ಶ್ರೇಷ್ಠ ನಾಯಕನಾಗಿಯೂ ಸಮ ಸಮಾಜ ನಿರ್ಮಾಣಕ್ಕಾಗಿ ದೀಕ್ಷೆತೊಟ್ಟ ಸನ್ಯಾಸಿ ರೂಪದ ಸಾಮಾಜಿಕ ಸುಧಾಕರನಾಗಿ ಮನುಜ ಮತ ವಿಶ್ವಪಥವಾಗಿಸಿದ ಬಸವಪಥದ ಮಹಾಯಾತ್ರಿಕರಾಗಿದ್ದಾರೆ.

ಸುತ್ತೂರೆಂಬ ಗ್ರಾಮವನ್ನು ವಿಶ್ವಕ್ಕೆ ಪರಿಚಯಿಸಿ ಸಮಾಜ ಉದ್ಧಾರದ ಪ್ರಯೋಗಶಾಲೆಯನ್ನಾಗಿಸಿ ದೀನ ದಲಿತರ, ಹಿಂದುಳಿದ, ಅಲ್ಪಸಂಖ್ಯಾತರ, ಪ್ರಾಕೃತಿಕ ವಿಕೋಪ ಸಾಂಕ್ರಾಮಿಕ ರೋಗರುಜಿನಗಳಿಂದ ನೊಂದ ಕುಟುಂಬದ ಮಕ್ಕಳಿಗೆ ಶಿಕ್ಷಣಕ್ಕಾಗಿ ಅಹಿರ್ನಿಶಿ ದುಡಿದು ಪುಟ್ಟ ಗ್ರಾಮವನ್ನು ಮಿನಿ ಭಾರತವನ್ನಾಗಿಸಿದ ಪ್ರಾಯೋಗಿಕ ಸಮಾಜ ವಿಜ್ಞಾನಿಯಾಗಿದ್ದಾರೆ ಪರಮ ಪೂಜ್ಯರು. ಸಂಕಷ್ಟದ ಪರಿಸ್ಥಿತಿಯಲ್ಲಿ ಶ್ರೀಗಳು ವೇಗವಾಗಿ ಸ್ಪಂದಿಸುತ್ತಾರೆ. ಯಾವ ಭೇದವಿಲ್ಲದೆ ಅಂತರವಿಲ್ಲದೆ ಜನರನ್ನು ಅಪಾರವಾಗಿ ಪ್ರೀತಿಸುತ್ತಾರೆ. ಅವರನ್ನು ದರ್ಶನ ಮಾಡಲು ಬಂದ ಯಾರೇ ಆಗಲಿ ಪ್ರಸಾದ ಸ್ವೀಕರಿಸಿಯೇ ಹೋಗಬೇಕು. ನೆನಪಿನ ಶಕ್ತಿ ಅವರಿಗೆ ದೇವರು ದಯಪಾಲಿಸಿದ್ದು, ಅಸಾಮಾನ್ಯರಿಂದ ಸಾಮಾನ್ಯರವರೆಗೂ ಯಾರನ್ನು ಮರೆಯುವುದಿಲ್ಲ. ಅತಿಥಿ ಸತ್ಕಾರದ ವಿಚಾರದಲ್ಲಿ ಸಾಕ್ಷಾತ್ ತಾಯಿ ಪ್ರೀತಿ ಅವರದು. ಎಂತಹ ಸನ್ನಿವೇಶವಾಗಿರಲಿ ಗುರು ದರ್ಶನ ಪಡೆದು ನಮ್ಮ ನೋವನ್ನು ಗುರು ಚರಣಗಳಿಗೆ ಸಮರ್ಪಿಸಿದರಷ್ಟೇ ಸಾಕು ಗುರು ಕಾರುಣ್ಯದಿಂದ ಕೈಚೆಲ್ಲುವ ಮಾತೇ ಇಲ್ಲ. ಪೂಜ್ಯರ ಸಮಯ ಪಾಲನೆ ಸಮಯಪ್ರಜ್ಞೆ, ಸಮಯ ಗೌರವದ ಬಗ್ಗೆ ಆಶ್ಚರ್ಯವೆನಿಸುತ್ತದೆ. ಈ ವಿಚಾರದಲ್ಲಿ ಗಣ್ಯಾತಿಗಣ್ಯರೇ ಮಹಾಸ್ವಾಮಿಗಳ ಸಮಯಕ್ಕೆ ಕೊಡುವ ಬೆಲೆಯನ್ನು ಅಭಿಮಾನ ಪೂರ್ವಕವಾಗಿ ನೆನೆಯುತ್ತಾರೆ. ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಯವರು ಪಾರ್ಲಿಮೆಂಟಿನ ಸದಸ್ಯರು ಪಂಚಾಯತಿ ಸದಸ್ಯರು, ಉಚ್ಚ ಪರಮೋಚ್ಛ ಅಧಿಕಾರಿಯಿಂದ ಸಾಮಾನ್ಯ ನೌಕರರವರೆಗೂ ಯಾರೇ ಆಗಿರಲಿ ಸಮಾನವಾಗಿ ಆಶೀರ್ವದಿಸುತ್ತಾರೆ. ಪೂಜ್ಯರು ದಿವ್ಯ ಸಾನಿಧ್ಯ ವಹಿಸಿದ ಸಭೆ ಸಮಾರಂಭಗಳಲ್ಲಿ ಎಷ್ಟೇ ಹೊತ್ತಾದರೂ ಸರಿತಮ್ಮ ಆಶೀರ್ವಚನವನ್ನು ದಯಪಾಲಿಸಿ ಪ್ರಜಾಸತ್ತಾತ್ಮಕ ಮೌಲ್ಯ ಮಾದರಿಯ ಸಭಾ ಗೌರವವನ್ನು ಎತ್ತಿ ಹಿಡಿಯುವ ಮಹಾಸಂತರಾಗಿದ್ದಾರೆ. ಸುತ್ತೂರು ಮಠದ ಜಗದ್ಗುರುವಾಗಿ ಸಮಾಜದ ಕರ್ಮಠಗಳ ಕಳೆ ತೆಗೆಯುವ ಸಂಸ್ಥೆಗಳನ್ನು ಬೆಳೆಸಿ ವಿಶ್ವಮಾನವತ್ವ ಮತ್ತು ಸಾಂವಿಧಾನಿಕ ಮೌಲ್ಯಗಳ ಆಧಾರದ ಮೇಲೆ ಸರ್ವಮಾನ್ಯ ಲೋಕಮಾನ್ಯ ಸಾಮಾಜಿಕ ಚಿಕಿತ್ಸಕರಾಗಿರುವ ಕಾಯಕಯೋಗಿ ಶ್ರೀಗಳಿಗೆ ಜನ್ಮದಿನದ ಶುಭಾಭಿನಂದನೆಗಳು, ಸಾವಿರ... ಸಾವಿರ... ನಮನಗಳು.

■ ಬ್ಯಾ.ರಾ.ಪ್ರಸನ್ನಕುಮಾರ್, ಮೊ: 9206376889

> ಇಂದು ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಅಕ್ಕರೈ ಸಹೋದರಿಯರ ದ್ವಂದ್ವ ಗಾಯನದ ಲಹರಿ



64ನೇ ಪಾರಂಪರಿಕ ಸಂಗೀತೋತ್ಸವದಲ್ಲಿ ಶನಿವಾರ ವಿದುಷಿ ಅಕ್ಕರೈ ಶುಭ ಲಕ್ಷ್ಮಿ ಮತ್ತು ವಿದುಷಿ ಅಕ್ಕರೈ ಸ್ವರ್ಣಲತಾ ದ್ವಂದ್ವ ಗಾಯನ ಸಾದರಪಡಿಸಿದರು.

ಮೈಸೂರು,ಆ.30(ಪಿಎಂ)– ಅಕ್ಕರೈ ಸಹೋದರಿಯರು ಎಂದೇ ಖ್ಯಾತನಾಮರಾದ ವಿದುಷಿ ಅಕ್ಕರೈ ಶುಭ ಲಕ್ಷ್ಮಿ ಮತ್ತು ವಿದುಷಿ ಅಕ್ಕರೈ ಸ್ವರ್ಣಲತಾ ಜೋಡಿಯ ಯುಗಳ ಶಾಸ್ತ್ರೀಯ ಗಾನ ಲಹರಿಯು ಶ್ರೋತೃಗಳ ಮನಸೂರೆಗೊಂಡರೆ, ಇದಕ್ಕೂ ಮುನ್ನ ಚಂದ್ರಶೇಖರ ಆಚಾರ್ ಮತ್ತು ಸಂಗಡಿಗರು ಪ್ರಸ್ತುತಪಡಿಸಿದ ರಂಗಗೀತೆಗಳು ರಸದೌತಣ ಉಣಬಡಿಸಿತು.

ಮೈಸೂರಿನ ವಾಣಿವಿಲಾಸ ಮೊಹಲ್ಲಾದ (ವಿವಿ ಮೊಹಲ್ಲಾ) 8ನೇ ಕ್ರಾಸ್‌ನಲ್ಲಿ ಸೆ.8ರವರೆಗೆ ಶ್ರೀಪಸನ್ನ ವಿದ್ಯಾ ಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ ಟ್ರಸ್ಟ್) ವತಿಯಿಂದ ಹಮ್ಮಿಕೊಂಡಿರುವ 64ನೇ ಪಾರಂಪರಿಕ ಸಂಗೀತೋತ್ಸವದ 4ನೇ ದಿನವಾದ ಶನಿವಾರ ಇಂತಹ ಮಾಧುರ್ಯದ ಲೋಕ ಅನಾವರಣಗೊಂಡಿತು.

ಅಕ್ಕರೈ ಸಹೋದರಿಯರ ದ್ವಂದ್ವ ಗಾಯನದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದ ಗಾನಸುಧೆ ಹರಿಯಿತು. 'ನವರಾಗ ಮಾಲಿಕೆ ವರ್ಣ'ದಿಂದ ಸಂಗೀತ ಕಛೇರಿ ಆರಂಭಿಸಿ, ಭಗವಂತ ವಿಷ್ಣುವಿನ ಕುರಿತಾದ 'ಶ್ರೀನಾಥದಿ ಗುರುಗುಹೋ ಜಯತಿ ಜಯತಿ...' ಗೀತೆಯನ್ನು ಹಾಡಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿದರು. ಈ ಗೀತೆಯನ್ನು ಮುತ್ತುಸ್ವಾಮಿ ದೀಕ್ಷಿತರು ಸಂಸ್ಕೃತದಲ್ಲಿ ರಚಿಸಿದ್ದು, 'ಮಾಯಾಮಾಳವ ಗೌಳ' ಮತ್ತು 'ಆದಿ' ತಾಳದಲ್ಲಿರುವ ಈ ಗೀತೆಯನ್ನು ಹಾಡಿ ಶ್ರೋತೃಗಳಲ್ಲಿ ಭಕ್ತಿಯ ಕಾರಂಜಿ ಹೊಮ್ಮಿ ಅವರು ತಾಳ ಹಾಕುವಂತೆ ಮಾಡಿದರು.

ಬಳಿಕ ತ್ಯಾಗರಾಜರು ತೆಲುಗು ಭಾಷೆಯಲ್ಲಿ ರಚಿಸಿರುವ 'ಪರಿಪೂರ್ಣ ಕಾಮ ಭಾವಮುನ...' ಗೀತೆಯನ್ನು ಸಾದರಪಡಿಸಿದರು. 'ರೂಪಕಂ' ತಾಳ ಹಾಗೂ 'ಪೂರ್ವಿ ಕಲ್ಯಾಣ' ರಾಗದಲ್ಲಿರುವ ಈ ಗೀತೆಯ ಮೂಲಕ ಸಭಿಕರನ್ನು ಮನಸೂರೆಗೊಂಡರು. ರಾಮನ ಆರಾಧನೆಯನ್ನು ಒಳಗೊಂಡಿರುವ ಈ ಗೀತೆಯು ಶ್ರೋತೃಗಳಲ್ಲಿ ಭಕ್ತಿಭಾವ ಮೂಡಿಸಿ ಮಂತ್ರಮುಗ್ಧರನ್ನಾಗಿಸಿತು. ನಂತರ ತ್ಯಾಗರಾಜರ ತೆಲುಗು ರಚನೆಯ 'ಮೋಕ್ಷಮು ಗಲಧಾ...' ಗೀತೆ ಹಾಡಿದರು. 'ಸಾರಮತಿ' ರಾಗ ಹಾಗೂ 'ಆದಿ' ತಾಳದಲ್ಲಿರುವ ಇದು ಮೋಕ್ಷವನ್ನು ಕುರಿತಾದ ಗೀತೆಯಾಗಿದೆ. ಇದು ಸೇರಿದಂತೆ ಹಲವು ಗೀತೆಗಳ ಮೂಲಕ ಅಕ್ಕರೈ ಸಹೋದರಿಯರು ಶ್ರೋತೃಗಳು ತಲೆದೂಗುವಂತೆ ಮಾಡಿದರು. ಇದಕ್ಕೂ ಮುನ್ನ ಚಂದ್ರಶೇಖರ ಆಚಾರ್ ಮತ್ತು ಸಂಗಡಿಗರು ಪ್ರಸ್ತುತಪಡಿಸಿದ ರಂಗಗೀತೆಗಳು ರಸದೌತಣ ಉಣಬಡಿಸಿತು. ಬಿ.ವಿ.ಕಾರಂತರು ರಾಗ ಸಂಯೋಜನೆ ನೀಡಿರುವ ರಂಗಗೀತೆಗಳು ಸಭಿಕರನ್ನು ರಂಜಿಸುವಲ್ಲಿ ಯಶಸ್ವಿ ಯಾಯಿತು. 'ಗಜವದನ ಹೇರಂಭ...', 'ಶ್ರೀಗಣರಾಯ ಪಾರ್ವತಿತನಯ ಶರಣು ಶರಣು...' ಗೀತೆಗಳ ಮೂಲಕ ಗಣೇಶನ ಆರಾಧಿಸಿ ವಿವಿಧ ಗೀತೆಗಳನ್ನು ಸಾದರಪಡಿಸಲಾಯಿತು.

ಜನಪದ ಗೀತೆ ಮೂಲದ ನಾಟಕ ಗೀತೆಯಾದ 'ಭೂಲೋಕದಯ್ಯ ದೇವನೇಸಯ್ಯ ಸೋಲಿಸಬೇಡ ಗೆಲಿಸಯ್ಯ...', ಉತ್ತರ ಕರ್ನಾಟಕ ಭಾಷಾ ಶೈಲಿಯಲ್ಲಿರುವ 'ಜೋಕುಮಾರಸ್ವಾಮಿ' ನಾಟಕದ 'ಶರಣು ಹೇಳಪ್ರಿ ಸ್ವಾಮಿ ನಾವು ನಿಮಗ...', 'ಹಯವದನ' ನಾಟಕದ 'ಬಂದನೋ ಬಂದ ಸವಾರ...', 'ಜೋಕುಮಾರಸ್ವಾಮಿ' ನಾಟಕದ 'ಮೂಡಿ ಬಾರಯ್ಯ ಬಾರೋ ಗಿಣಿರಾಮ...' ಗೀತೆಗಳು ಸಭಿಕರ ಮನತಣಿಸಿದವು.

ಇವಲ್ಲದೆ, 'ಸತ್ತವರ ನೆರಳು' ನಾಟಕದ 'ಜೋಜೋ ಶ್ರೀಕೃಷ್ಣ...', 'ಗೋಕುಲ ನಿರ್ಗಮನ' ನಾಟಕದ 'ನಿಲ್ಲಸದಿರು ವನಮಾಲೀ...' 'ಹಯವದನ ನಾಟಕದ 'ನೀರಿನ ಮೇಲೆ ಚಿತ್ರ ಕೆತ್ತಲಿಕ್ಕಾಗೋದಿಲ್ಲ...' 'ಜೋಕುಮಾರಸ್ವಾಮಿ' ನಾಟಕದ 'ಬೀಸುವ ಬಿರುಗಾಳಿ ಸುಳಿಯೋ ಸುಂಟರ ಗಾಳಿ... ಸುವ್ವಿ ಸುವ್ವಾಲಿ ಸುವ್ವಿ...', 'ಗೋಕುಲ ನಿರ್ಗಮನ' ನಾಟಕದ 'ರಾಧೆ ಎಲ್ಲವಳು...' ಗೀತೆಗಳು ರಂಗ ಸಂಗೀತಾಸಕ್ತರನ್ನು ರಂಜಿಸಿದವು.ಅಕ್ಕರೈ ಸಹೋದರಿಯರ ಸಂಗೀತ ಕಛೇರಿಗೆ ಪಕ್ಕವಾದ್ಯದಲ್ಲಿ ವಿದ್ವಾನ್ ಗೋಕುಲ್ (ಪಿಟೀಲು), ವಿದ್ವಾನ್ ಜಯಚಂದ್ರ ರಾವ್ (ಮೃದಂಗ), ವಿದ್ವಾನ್ ಗುರುಪ್ರಸನ್ನ (ಖಂಜೀರ) ಹಾಗೂ ವಿದ್ವಾನ್ ಗಿರಿಧರ್ ಉಡುಪ (ಘಟಂ) ಸಹಕಾರ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 31 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 134 | ಪುಟಗಳು: 12+VIII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಚಾಮುಂಡಿಬೆಟ್ಟ ಹಿಂದೂಗಳದ್ದು

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪ್ರಮೋದಾದೇವಿ ಒಡೆಯರ್ ತಿರುಗೇಟು

ಬೆಟ್ಟದ ವಿಷಯದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ



ಪ್ರಮೋದಾದೇವಿ ಒಡೆಯರ್



ಮೈಸೂರು, ಆ.30(ಬಿಎಲ್‌ಯು)– ರಾಜಕಾರಣಿಗಳು, ಯಾರೇನೇ ಹೇಳಿದರೂ ಚಾಮುಂಡಿ ಬೆಟ್ಟ ಹಿಂದೂಗಳಿಗೆ ಸೇರಿದ್ದು ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಜೆ.ಕೆ.ಮೈದಾನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಾಮುಂಡಿಬೆಟ್ಟ ಹಿಂದೂಗಳಿಗೆ ಸೇರಿದ್ದಲ್ಲ ಎಂದು ಹೇಳಿಕೆ ನೀಡಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪ್ರಮೋದಾದೇವಿ ಒಡೆಯರ್ ತಿರುಗೇಟು ನೀಡಿದರು.

ಚಾಮುಂಡಿಬೆಟ್ಟ ಹಿಂದೂಗಳಿಗೆ ಸೇರಿದ್ದಲ್ಲ ಎಂದು ರಾಜಕಾರಣಿಗಳು ಹೇಳಿದಾಕ್ಷಣ ಎಲ್ಲವೂ ಅವರೇಳಿದಂತೆ ನಡೆಯುವುದಿಲ್ಲ. ಚಾಮುಂಡೇಶ್ವರಿ ತಾಯಿ ಹಿಂದೂ ದೇವತೆ. ಯದುವಂಶಸ್ಥರ ಆರಾಧ್ಯ ದೈವ. ಅನಾದಿ ಕಾಲದಿಂದಲೂ ಧಾರ್ಮಿಕ ವಿಧಿ ವಿಧಾನದಂತೆ ಪೂಜೆ ನಡೆಸಿಕೊಂಡು ಬರಲಾಗುತ್ತಿದೆ. ಈ ಕುರಿತಂತೆ ರಾಜಕಾರಣಿಗಳು ಏನು ಬೇಕಾದರೂ ಹೇಳಲಿ, ಆದರೆ ಅವರು ಹೇಳಿದಂತೆ ಎಲ್ಲವೂ ನಡೆಯುವುದಿಲ್ಲ ಎಂದು ಹಿಂದೂ ವಿರೋಧಿಗಳಿಗೆ ಟಾಂಗ್ ನೀಡಿದರು.

ದೇವಸ್ಥಾನಕ್ಕೆ ಸಂಬಂಧಿಸಿದಂತೆ ಸರ್ಕಾರ ಪ್ರಾಧಿಕಾರ ರಚನೆ ಮಾಡಿದ್ದರೂ ಅದು ಅಧಿಕೃತವಲ್ಲ. ಕಳೆದ 70 ವರ್ಷಗಳಿಂದ ನ್ಯಾಯಾಲಯದಲ್ಲಿ ಕಾನೂನು ಹೋರಾಟ ನಡೆಯುತ್ತಿದೆ. ಈ ಸಂಬಂಧ ಕೋರ್ಟ್ ಆದೇಶ ಬಂದ ಮೇಲೆ ಎಲ್ಲವೂ ಸ್ಪಷ್ಟವಾಗುತ್ತದೆ ಎಂದು ಹೇಳಿದರು.


ಚಾಮುಂಡಿಬೆಟ್ಟವನ್ನು ರಾಜಕಾರಣಕ್ಕೆ ಬಳಸಿಕೊಂಡಿರುವುದು ತುಂಬಾ ಬೇಸರ ತಂದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಬದಲಾಗುತ್ತದೆ. ಸರ್ಕಾರ ನಡೆಸುವ ದಸರಾ ನಮ್ಮ ಪರಂಪರೆಯ ಭಾಗವಲ್ಲ. ಹಾಗೆಯೇ ಸರ್ಕಾರ ನಡೆಸುವ ದಸರಾ ಸಾಂಸ್ಕೃತಿಕವಾಗಿರುತ್ತದೆ. ಆದರೆ ನಮಗೆ ದಸರಾ ಧಾರ್ಮಿಕ ಆಚರಣೆಯೂ ಆಗಿದೆ. ದಸರಾ ಉದ್ಘಾಟಕರ ವಿಚಾರದಲ್ಲಿ ನಾನು ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ. ಸರ್ಕಾರದವರು ಅವರಿಗೆ ಬೇಕಾದ ರೀತಿ ದಸರಾ ಆಚರಣೆ ಮಾಡಿಕೊಳ್ಳಲಿ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲಹೆ ನೀಡಿದರು.

ಬಾನು ಮುಷ್ತಾಕ್ ಆಯ್ಕೆ ಸರಿ ಇದೆ

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಸಮರ್ಥನೆ

ಅನುವಾದಕಿ ದೀಪಾ ಬಾಸ್ತಿ ಅವರನ್ನು ಅಭಿನಂದಿಸುವುದು ಅರ್ಥಪೂರ್ಣ

ಮೈಸೂರು, ಆ.30(ಜಿಎ)–ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರನ್ನು ಸರ್ಕಾರ ಆಯ್ಕೆ ಮಾಡಿರುವುದನ್ನು ಸಮರ್ಥಿಸಿಕೊಂಡಿರುವ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಇದೇ ವೇಳೆ ಅನುವಾದಕಿ ದೀಪಾ ಬಸ್ತಿ ಅವರನ್ನು ಅಭಿನಂದಿಸುವಂತೆ ಆಗ್ರಹಿಸಿದ್ದಾರೆ.



ಹೆಚ್.ವಿಶ್ವನಾಥ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರು ಕನ್ನಡವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಪುರುಷೆ. ಹೀಗಾಗಿ ಸರ್ಕಾರ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದು ಸರಿ ಇದೆ. ಅವರು ರೈತ ಚಳವಳಿ, ಕನ್ನಡ ಪರ ಚಳವಳಿಗಳಲ್ಲೂ ಪಾಲ್ಗೊಂಡವರಾಗಿದ್ದಾರೆ. ಬಂಡಾಯ ಸಾಹಿತಿ. ಇವರಿಗೆ ಬೂಕರ್ ಪ್ರಶಸ್ತಿ ಸಂದಿರುವುದನ್ನು ಕರ್ನಾಟಕವೇ ಸ್ವಾಗತಿಸಿದೆ. ಆದರೆ ಅವರಿಗೆ ದೊರೆತಿರುವ ಆಹ್ವಾನ ಕುರಿತು ಅಪಸ್ವರ ಸರಿಯಲ್ಲ ಎಂದರು.

ಮಾಜಿ ಸಂಸದ ಪ್ರತಾಪ್‌ಸಿಂಹ ಯಾವಾಗಲೂ ಪ್ರತಾಪದಿಂದಲೇ ಮಾತನಾಡುತ್ತಾರೆ. ಆದರೆ ತಮ್ಮ ಬೆತ್ತಲೆ ಜಗತ್ತಿಗೆ ಬೂಕರ್‌ನಂತಹ ಪ್ರಶಸ್ತಿ ದೊರೆತಿದೆಯೇ ಎಂಬುದನ್ನು ತಿಳಿಸಲಿ. ಬಾನು ಅವರ ವಿಷಯದಲ್ಲಿ ಜನಾಂಗೀಯ ದ್ವೇಷಕ್ಕೆ ಕಾರಣವಾಗುವುದು ಸರಿಯಲ್ಲ. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡುತ್ತಿರುವುದು ಸಹ ಸರಿಯಲ್ಲ, ಅವರಿಗೆ ನಾಚಿಕೆಯಾಗಬೇಕು ಎಂದು ಹೆಚ್.ವಿಶ್ವನಾಥ್ ಕಿಡಿಕಾರಿದರು.

ಎರಡು ವರ್ಷ ಹಿಂದೆ ಬಾನು ಮುಷ್ತಾಕ್ ಯಾವ ಅರ್ಥದಲ್ಲಿ ಕನ್ನಡ ಕುರಿತಂತೆ ಹೇಳಿಕೆ ನೀಡಿದ್ದರು ಎಂಬ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದ ಸಿಎಂ ಮೌನ ಮುರಿದು ಎಲ್ಲಾ ವಿವಾದಗಳಿಗೆ ಅಂತ್ಯ ಹಾಡಬೇಕು. ಶಾಂತಿ–ಸುವ್ಯವಸ್ಥೆಗೆ ಹೆಸರಾದ ಮೈಸೂರಿನಲ್ಲಿ ಈ ವಿವಾದದಿಂದ ಬೇಸರದ ವಾತಾವರಣವುಂಟಾಗಿದೆ. ದಸರಾ ಹಿಂದೂಗಳ ಹಬ್ಬವೂ ಅಲ್ಲ, ಮುಸ್ಲಿಮರದ್ದೂ ಅಲ್ಲ, ಅದೊಂದು ನಾಡಹಬ್ಬ ಎಂಬುದನ್ನು ಯಾರೂ ಮರೆಯಬಾರದು ಎಂದರು

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಹ ಬಾನು ಮುಷ್ತಾಕ್ ಕುರಿತಂತೆ ಆಡಿರುವ ಮಾತು ಸರಿಯಲ್ಲ. ಅವರು ಬೆಟ್ಟ ಹತ್ತಬಾರದು ಎಂದು ಹೇಳುವ ಅಧಿಕಾರವನ್ನು ಇವರಿಗೆ ನೀಡಿದವರು ಯಾರು? ಇದು ಜನರ ಪ್ರಭುತ್ವದ ರಾಷ್ಟ್ರ. ಚಾಮುಂಡಿಬೆಟ್ಟ ಸರ್ಕಾರದ ಆಸ್ತಿ ಎಂಬುದು ನೆನಪಿರಬೇಕು. ದಸರಾವನ್ನು ಬಾನು ಮುಷ್ತಾಕ್ ಉದ್ಘಾಟಿಸಿದ ಬಳಿಕ ಅರಮನೆ ವೇದಿಕೆಯಲ್ಲಿ ಅವರೊಟ್ಟಿಗೆ ದೀಪಾ ಬಸ್ತಿ ಅವರಿಗೂ ಗೌರವ ಸಲ್ಲಿಸಬೇಕೆಂದು ಸಲಹೆ ನೀಡಿದರು.

ಬೆಂಗಳೂರು ಕಾಲ್ತುಳಿತ ದುರಂತ ಪ್ರಕರಣ

ಸಾವಿಗೀಡಾದ 11 ಮಂದಿ ಕುಟುಂಬಕ್ಕೆ ತಲಾ 25 ಲಕ್ಷ ಪರಿಹಾರ ಘೋಷಿಸಿದ ಆರ್‌ಸಿಬಿ

ಬೆಂಗಳೂರು, ಆ.30(ಕೆಎಂಶಿ)– ಐಪಿಎಲ್ ಟ್ರೋಫಿ ಗೆದ್ದ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರವನ್ನು ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ತಂಡ ಘೋಷಿಸಿದೆ.

ಸಂತ್ರಸ್ತ ಕುಟುಂಬಗಳಿಗೆ ನಾವು ನೀಡುತ್ತಿರುವುದು ಆರ್ಥಿಕ ನೆರವಲ್ಲ, ತಮ್ಮವರನ್ನು ಕಳೆದುಕೊಂಡ ಕುಟುಂಬಗಳಿಗೆ ಕೊಡುತ್ತಿರುವುದು ಕಾಳಜಿ ಮತ್ತು ಸಹಾನುಭೂತಿಯ ಫಲ ಎಂದು ಆರ್‌ಸಿಬಿ ತನ್ನ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.



ಕಳೆದ ಜೂ.4ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಸಾವನ್ನಪ್ಪಿ ಹಲವರು ಗಾಯಗೊಂಡಿರುವ ಘಟನೆ ಎಂದಿಗೂ ಮರೆಯಲು ಸಾಧ್ಯವಿಲ್ಲ.

ಮೃತರ ಕುಟುಂಬಕ್ಕೆ ಸಾಂತ್ವನ ಹೇಳಲು ನಮ್ಮಲ್ಲಿ ಪದಗಳಿಲ್ಲ. ನಾವು ನೀಡುತ್ತಿರುವ ಪರಿಹಾರ ನೊಂದ ಕುಟುಂಬದ ಜೊತೆ ನಾವಿದ್ದೇವೆ, ನಿಮ್ಮ ಧ್ವನಿಗೆ ದನಿಯಾಗುತ್ತೇವೆ ಎಂದು ಹೇಳಿದೆ.

ನಿಮ್ಮ ನೋವಿಗೆ ಸ್ಪಂದಿಸಿ ಅತ್ಯಂತ ಗೌರವದಿಂದ ಮೃತರ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ ನೀಡುತ್ತಿದ್ದು, ಇದನ್ನು ಆರ್ಥಿಕ ನೆರವು ಎಂಬುದಾಗಿ ಭಾವಿಸಬಾರದು. ಮನುಷ್ಯತ್ವ ಮಾನವೀಯತೆ, ಸಹಾನುಭೂತಿ, ಏಕತೆ ಹಾಗೂ ನಿರಂತರ ಆರೈಕೆ ಭರವಸೆಯಾಗಿ ನೀಡುತ್ತಿದ್ದೇವೆ ಎಂದಿದೆ.

ಐಪಿಎಲ್ ಇತಿಹಾಸದಲ್ಲೇ ಮೊದಲ ಬಾರಿಗೆ ಆರ್‌ಸಿಬಿ ತಂಡ ಚಾಂಪಿಯನ್ ಆದ ನೆನಪಿಗೆ ವಿಜಯೋತ್ಸವ ಆಚರಿಸಲು ಮುಂದಾದಾಗ ಅಪಾರ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರರನ್ನು ನೋಡಲು ಏಕಾಏಕಿ ಜಮಾಯಿಸಿದ ಪರಿಣಾಮ ಉಂಟಾದ ನೂಕುನುಗ್ಗಲಿನಿಂದ ಕಾಲ್ತುಳಿತ ಸಂಭವಿಸಿ 11 ಮಂದಿ ಸಾವನ್ನಪ್ಪಿ ಹಲವರು ಗಾಯಗೊಂಡಿದ್ದರು. ಈ ಘಟನೆಯಿಂದ ರಾಜ್ಯ ಸರ್ಕಾರಕ್ಕೂ ಭಾರಿ ಮುಜುಗರವಾಗಿತ್ತು.



ನಟ ದರ್ಶನ್ ಬಳ್ಳಾರಿ ಜೈಲಿಗೆ ಸ್ಥಳಾಂತರ ವಿಚಾರ

ಸೆ.2ಕ್ಕೆ ವಿಚಾರಣೆ ಮುಂದೂಡಿಕೆ



ಬೆಂಗಳೂರು, ಆ.30–ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ದರ್ಶನ್ ಸೇರಿದಂತೆ ಐವರು ಆರೋಪಿಗಳ ಜೈಲು ಸ್ಥಳಾಂತರ ಕೋರಿರುವ ಅರ್ಜಿ ವಿಚಾರಣೆಯನ್ನು ಸಿಸಿಎಚ್ 57ನೇ ಕೋರ್ಟ್ ಸೆ.2ಕ್ಕೆ ಮುಂದೂಡಿದೆ.

ನಟ ದರ್ಶನ್ ಬಳ್ಳಾರಿ ಜೈಲಿಗೆ, ಜಗದೀಶ್ ಮತ್ತು ಲಕ್ಷ್ಮಣ್ ಶಿವಮೊಗ್ಗ ಜೈಲಿಗೆ, ನಾಗರಾಜ್ ಕಲಬುರಗಿ ಜೈಲಿಗೆ, ಪ್ರದೂಷ್ ಬೆಳಗಾವಿ ಜೈಲಿಗೆ ಶಿಫ್ಟ್ ಮಾಡುವಂತೆ ಹಾಗೂ ಪವಿತ್ರಾ ಗೌಡ ಮತ್ತು ಅನುಕುಮಾರ್ ಪರಪ್ಪನ ಅಗ್ರಹಾರ ಜೈಲಿನಲ್ಲೇ ಉಳಿಯುವಂತೆ ಅರ್ಜಿ ಸಲ್ಲಿಕೆ ಮಾಡಲಾಗಿದೆ. ಈ ವಿಚಾರವಾಗಿ ದರ್ಶನ್, ಲಕ್ಷ್ಮಣ್, ನಾಗರಾಜ್ ಹಾಗೂ ಪ್ರದೂಷ್ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದ್ದಾರೆ.

ನಟ ದರ್ಶನ್ ಪರ ವಕೀಲರು, ಪ್ರಕರಣದ ಟ್ರಯಲ್ ಅತೀ ಶೀಘ್ರದಲ್ಲಿ ಪ್ರಾರಂಭವಾಗುತ್ತಿದೆ. ಅಲ್ಲದೇ ಬಳ್ಳಾರಿಗೆ ಶಿಫ್ಟ್ ಮಾಡಿದರೆ ವಕೀಲರ ಭೇಟಿ ಅಸಾಧ್ಯ. ಪ್ರತಿ ಬಾರಿ ವಿಚಾರಣೆಗೆ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ದರ್ಶನ್ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಬಳ್ಳಾರಿ ಜೈಲಿಗೆ ಹೋಗಿ ಮಗನನ್ನು ನೋಡಲು ಅವರಿಗೆ ಕಷ್ಟವಾಗುತ್ತದೆ ಎಂದಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್‌ಗೆ ಮ್ಯಾನ್ಯುಯಲ್ ಪ್ರಕಾರ ಯಾವುದೇ ▸ 10ನೇ ಪುಟಕ್ಕೆ

ಇಂದಿನಿಂದ ಆಸ್ತಿ ನೋಂದಣಿ, ಮುದ್ರಾಂಕ ಶುಲ್ಕ ಹೆಚ್ಚಳ

- ನೆರೆಯ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದ ಶುಲ್ಕ ಕಡಿಮೆ
- ನೋಂದಣಿ, ಮುದ್ರಾಂಕ ಶುಲ್ಕ ಆಯುಕ್ತ ಮಲ್ಲೈ ಮುಗಿಲನ್ ಸಮರ್ಥನೆ

ಮೈಸೂರು, ಆ.30(ಬಿಎಲ್‌ಯು)– ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಸೇರಿದಂತೆ ರಾಜ್ಯದೆಲ್ಲೆಡೆ ಸ್ಥಿರಾಸ್ತಿ ಮೇಲಿನ ವ್ಯವಹಾರಗಳ ದಸ್ತಾವೇಜುಗಳಿಗೆ ವಿಧಿಸುತ್ತಿರುವ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಹೆಚ್ಚಳ ಆಗಸ್ಟ್ 31ರಿಂದ ಜಾರಿಯಾಗಲಿದೆ. ನೆರೆ–ಹೊರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಶುಲ್ಕ ಕಡಿಮೆ ಇದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಆಯುಕ್ತ ಮಲ್ಲೈ ಮುಗಿಲನ್ ಅವರು, ಇತರೆ ರಾಜ್ಯಗಳ ಶುಲ್ಕಗಳೊಂದಿಗೆ ಸಮೀಕರಿಸಿ ಪರಿಷ್ಕರಣೆ ಮಾಡಲಾಗಿದೆ ಎಂದು ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

ಮುದ್ರಾಂಕ, ನೋಂದಣಿ ಹಾಗೂ ಇತರೆ ಸೆಸ್ ಸೇರಿ ಕರ್ನಾಟಕ ರಾಜ್ಯವು ಶೇಕಡ 6.6ರಷ್ಟು ವಿಧಿಸುತ್ತಿತ್ತು. ಇದೇ ಅವಧಿಯಲ್ಲಿ ತಮಿಳುನಾಡಿನಲ್ಲಿ ಶೇಕಡ 9, ಕೇರಳದಲ್ಲಿ ಶೇಕಡ 10, ತೆಲಂಗಾಣದಲ್ಲಿ ಶೇಕಡ 7.5 ಶುಲ್ಕವಿದೆ. ನಾಳೆಯಿಂದ ಜಾರಿ ಮಾಡುವ ಶುಲ್ಕ ಪರಿಷ್ಕರಣೆಯಲ್ಲಿ ಶೇಕಡ 1ರಿಂದ ಶೇಕಡ 2ರಷ್ಟು ಪರಿಷ್ಕರಿಸಲಾಗಿದೆ ಎಂದು ಹೇಳಿದ್ದಾರೆ.

ಈ ಮೂಲಕ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಶೇಕಡ 7.6ರಷ್ಟಾಗಲಿದ್ದು, ನಾಳೆಯಿಂದ ಜಾರಿಗೆ ಬರಲಿದೆ. ಪರಿಷ್ಕೃತ ನೋಂದಣಿ ಶುಲ್ಕವನ್ನು ಸುಗಮವಾಗಿ ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ ಪಾವತಿಸಬೇಕು. ಈಗಾಗಲೇ ನೋಂದಣಿ ಶುಲ್ಕವನ್ನು ಪಾವತಿಸಿ ದಸ್ತಾವೇಜುಗಳ ನೋಂದಣಿಗೆ ಅಪಾಯಿಂಟ್‌ಮೆಂಟ್ ಪಡೆದಿರುವವರು ಅಥವಾ ಶುಲ್ಕವನ್ನು ಪಾವತಿಸಿ ಅಪಾಯಿಂಟ್‌ಮೆಂಟ್ ಪಡೆದಿರುವವರು ವ್ಯತ್ಯಾಸದ ಮೊತ್ತವನ್ನು ಇಲಾಖೆಯ ▸ 10ನೇ ಪುಟಕ್ಕೆ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಶುಲ್ಕ, ತೆರಿಗೆಗಳ ಏರಿಕೆ ಪಟ್ಟಿ!

● ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ● ಬಿಯರ್ ಮೇಲಿನ ಅಬಕಾರಿ ಸುಂಕ ● ಕಡಿಮೆ ಬೆಲೆ ಮತ್ತು ಪ್ರೀಮಿಯಂ ಮದ್ಯ ● ನಂದಿನಿ ಹಾಲು, ಮೊಸರು, ● ಬಸ್ ಪ್ರಯಾಣ ದರ ● ವಿದ್ಯುತ್ ಸುಂಕ ● ನೀರಿನ ಸುಂಕ ● ವಾಹನಗಳ ಮೇಲಿನ ಟೋಲ್ ● ವಿದ್ಯುತ್‌ಚಾಲಿತ ವಾಹನಗಳ ನೋಂದಣಿ ಶುಲ್ಕ ● ಜನನ ಮತ್ತು ಮರಣ ಪ್ರಮಾಣಪತ್ರ ಪಡೆಯುವ ಶುಲ್ಕ ● ಪುರಸಭೆಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ● ಆಸ್ತಿ ದಾಖಲೆ ಪತ್ರಗಳ ಶುಲ್ಕ ● ಸ್ಟ್ಯಾಂಪ್ ಪೇಪರ್‌ಗಳ ದರ



ದುರ್ಬಲ ವರ್ಗದವರ ಮೇಲಿನ ದೌರ್ಜನ್ಯ ತಡೆಗಟ್ಟಿ

● ಜಾತಿ ವ್ಯವಸ್ಥೆಯಡಿಯ ತಾರತಮ್ಯ ತಪ್ಪಿಸಿ ● ಪೊಲೀಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ● ರಾಜಭವನದಲ್ಲಿ ಪೊಲೀಸರಿಗೆ ರಾಷ್ಟ್ರಪತಿ ಪದಕ ಪ್ರದಾನ

ಬೆಂಗಳೂರು,ಆ.30(ಕೆಎಂಶಿ)–ಜಾತಿ ವ್ಯವಸ್ಥೆಯಿಂದ ದುರ್ಬಲ ವರ್ಗದವರಿಗೆ ಆಗುತ್ತಿರುವ ತಾರತಮ್ಯ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ದೌರ್ಜನ್ಯ ತಡೆಗಟ್ಟಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ರಾಜಭವನದಲ್ಲಿ ಪೊಲೀಸರಿಗೆ ರಾಷ್ಟ್ರಪತಿ ಪದಕ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಡಿಸಿಆರ್ ಇ–ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದೆ. ಇತ್ತೀಚೆಗೆ ನಡೆದ ಪರಿಶೀಲನಾ ಸಭೆಯಲ್ಲಿ ಈ ಠಾಣೆಗಳ ಕಾರ್ಯ ಮತ್ತು ಪ್ರಗತಿ ತೃಪ್ತಿದಾಯಕವಿಲ್ಲ ಎಂಬುದನ್ನು ಗಮನಿಸಿದ್ದು, ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ದುರ್ಬಲ ವರ್ಗದವರಿಗೆ ಸುರಕ್ಷತೆ ಒದಗಿಸುವ ಸರ್ಕಾರದ ಉದ್ದೇಶ ಸಫಲವಾಗುವಲ್ಲಿ ಶ್ರಮಿಸಬೇಕು ಎಂದು ಹೇಳಿದರು.

ಇತರೆ ರಾಜ್ಯಗಳಿಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿನ ಶಿಕ್ಷೆ ಪ್ರಮಾಣ ಬಹಳ ಕಡಿಮೆಯಿದೆ. ಈ ಬಗ್ಗೆಯೂ ಪೊಲೀಸರು ಗಮನಹರಿಸಬೇಕು, ಮುಂಜಾಗ್ರತಾ ಕ್ರಮಗಳಿಂದ ಅಪರಾಧ ತಡೆಗಟ್ಟಬಹುದಾಗಿದೆ. ಸೇವಾ ಮನೋಭಾವ, ಪ್ರಾಮಾಣಿಕತೆ, ಪರಿಶ್ರಮ, ಸಾಮಾಜಿಕ ಕಳಕಳಿಯೊಂದಿಗೆ ಸೇವೆ ಸಲ್ಲಿಸಿದಾಗ ಮಾತ್ರ ಸಾಧನೆ ಸಾಧ್ಯವಾಗುತ್ತದೆ. ಸಮಾಜದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡುವ ಜೊತೆಗೆ ಜನರ ಆಸ್ತಿಪಾಸ್ತಿ ಸಂರಕ್ಷಣೆ, ಅಪರಾಧಗಳನ್ನು ತಡೆಗಟ್ಟುವ ಜವಾಬ್ದಾರಿ ಸರ್ಕಾರ ಹಾಗೂ ಪೊಲೀಸರದ್ದಾಗಿದೆ. ಸಾಮಾಜಿಕ ಬದ್ಧತೆ ಇದ್ದರೆ, ಸಮಾಜದಲ್ಲಿ ಶಾಂತಿ ನೆಲೆಸಲು, ಅಸಮಾನತೆ ತೊಡೆದು ಹಾಕಿ ಸಂವಿಧಾನಾತ್ಮಕ ರಕ್ಷಣೆ ಜಾರಿಗೊಳಿಸುವಲ್ಲಿ ಪೊಲೀಸರ ಪಾತ್ರ ಪ್ರಮುಖವಾಗಿದೆ. ಬಲಾಢ್ಯರ ಕೈಯ್ಯಲ್ಲಿ ಅಧಿಕಾರವಿದ್ದರೆ, ದುರ್ಬಲ ವರ್ಗದವರ ಜೀವನ ದುಸ್ತರವಾಗುತ್ತದೆ ಎಂಬುದಾಗಿ ಡಾ.ಬಿ.ಆರ್.ಅಂಬೇಡ್ಕರ್ ತಿಳಿಸಿದ್ದರು, ದುರ್ಬಲ ವರ್ಗಗಳವರ ಮೇಲಿನ ದೌರ್ಜನ್ಯ ತಡೆಗಟ್ಟಬೇಕಿದೆ. ಸಾಮಾನ್ಯ ಜನರಿಗೆ ನ್ಯಾಯ ದೊರಕಿಸಿಕೊಡಬೇಕಿದೆ. ಪ್ರಶಸ್ತಿ ವಿಜೇತರು ಇತರರಿಗೆ ಮಾದರಿಯಾಗಬೇಕು, ಸಮಾಜದ ನ್ಯೂನತೆಗಳಿಗೆ ಪರಿಹಾರ ಕಂಡುಕೊಳ್ಳಬೇಕು, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಆತ್ಮವಿಮರ್ಶೆ ಮಾಡಿಕೊಂಡು ಉತ್ತಮ ಸೇವೆ ಸಲ್ಲಿಸಬೇಕು ಎಂದರು.



ಬೆಂಗಳೂರಿನ ಸಿಐಡಿ ಸೈಬರ್ ವಿಭಾಗದ ಡಿವೈಎಸ್‌ಪಿ ಕೆ.ಎನ್.ಯಶವಂತ್ ಕುಮಾರ್ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ರಾಷ್ಟ್ರಪತಿ ಪದಕ ನೀಡಿ, ಗೌರವಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇತರರು ಉಪಸ್ಥಿತರಿದ್ದರು.


ಧಾರ್ಮಿಕ, ರಾಜಕೀಯ ವಿಷಯ ಮುಂದಿಟ್ಟುಕೊಂಡು ಸಮಾಜದಲ್ಲಿ ಶಾಂತಿ ಕದಡುವ ಕಾರ್ಯ ನಡೆಯುತ್ತಿದೆ

● ಗೃಹ ಸಚಿವ ಡಾ. ಜಿ. ಪರಮೇಶ್ವರ್ ತೀವ್ರ ಅಸಮಾಧಾನ ● ಜನಸಾಮಾನ್ಯರು ನೆಮ್ಮದಿಯಿಂದ ಬದುಕುವ ವಾತಾವರಣ ಸೃಷ್ಟಿಸಲು ಪೊಲೀಸರಿಗೆ ಮುಕ್ತ ಅವಕಾಶ

ಬೆಂಗಳೂರು,ಆ.30(ಕೆಎಂಶಿ)–ಧಾರ್ಮಿಕ ಹಾಗೂ ರಾಜಕೀಯ ವಿಷಯಗಳ ಮೇಲೆ ಸಮಾಜದಲ್ಲಿ ಶಾಂತಿ ಕೆಡಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಲವು ಪಟ್ಟಭದ್ರ ಹಿತಾಸಕ್ತಿಗಳು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಣ್ಣಪುಟ್ಟ ವಿಷಯಗಳನ್ನು ಮುಂದಿಟ್ಟುಕೊಂಡು ಏನೋ ಬ್ರಹ್ಮಾಂಡ ತಪ್ಪು ಆಗಿದೆ ಎಂಬಂತೆ ಬಿಂಬಿಸಿ ಶಾಂತಿ ಕದಡುವ ಪ್ರಯತ್ನ ನಡೆಸಿವೆ. ಇಂತಹ ಪ್ರಯತ್ನಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಿ ಜನತೆ ನೆಮ್ಮದಿಯಿಂದ ಬದುಕಲು ಪೊಲೀಸರು ಅವಕಾಶ ಮಾಡಿಕೊಟ್ಟಿದ್ದಾರೆ. ಅಪರಾಧ, ಕೊಲೆ ಪ್ರಕರಣಗಳನ್ನು ಪತ್ತೆ ಹಚ್ಚುವುದರಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದಾರೆ. ಇಂತಹ ಸೂಕ್ಷ್ಮ ಇಲಾಖೆ ಸ್ವಾಭಾವಿಕವಾಗಿ ಹಲವು ಟೀಕೆ–ಟಿಪ್ಪಣಿಗಳಿಗೆ ಗುರಿಯಾಗುತ್ತದೆ, ಇದನ್ನು ಮೀರಿ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಶಾಂತಿ ನೆಲೆಸುವಲ್ಲಿ ಕರ್ನಾಟಕ ಪೊಲೀಸರ ಶ್ರಮ, ಪ್ರಾಮಾಣಿಕತೆ, ಸಮಾಜ ಸೇವಾ ಮನೋಭಾವ ಇದ್ದು, ಇಡೀ ರಾಷ್ಟ್ರದಲ್ಲಿ ಪ್ರಖ್ಯಾತಿ ಪಡೆದಿದ್ದು, ಪೊಲೀಸ್ ಇಲಾಖೆ ಮುನ್ನಡೆಸಲು ಹೆಮ್ಮೆಯಿದೆ ಎಂದರು. ರಾಜಭವನದಲ್ಲಿ ರಾಜ್ಯಪಾಲರಿಂದ ರಾಷ್ಟ್ರಪತಿಗಳ ಪೊಲೀಸ್ ಪದಕ ಪ್ರದಾನ ಹಾಗೂ ಕೇಂದ್ರ ಗೃಹ ಮಂತ್ರಿಗಳ ಪದಕ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಶಸ್ತಿ ಎಂಬುದು ಬರೀ ಪದಕವಲ್ಲ, ಅದರ ಹಿಂದೆ ಶ್ರಮ, ಪ್ರಾಮಾಣಿಕತೆ, ಸಮಾಜ ಸೇವೆ ಮತ್ತು ಮುಂದಿನ ಪೀಳಿಗೆಗೆ ಆದರ್ಶ ಇದೆ ಎಂದರು.



ಡಾ.ಪರಮೇಶ್ವರ್

ಗ್ಲೋಬಲ್ ಇನ್‌ವೆಸ್ಟರ್ಸ್ ಸಮಾವೇಶದ ನಂತರ ರಾಜ್ಯದಲ್ಲಿ 10,500 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಬಂಡವಾಳ ಹೂಡಲು ಪ್ರಪಂಚದಾದ್ಯಂತ ನೂರಾರು ಕಂಪನಿಗಳು ಮುಂದೆ ಬಂದಿವೆ. ಇದಕ್ಕೆ ಮೂಲ ಕಾರಣ, ರಾಜ್ಯ ಅಥವಾ ರಾಷ್ಟ್ರದಲ್ಲಿ ಬಂಡವಾಳ ಹೂಡಿಕೆಗೆ ರಾಜಕೀಯ ಇಚ್ಛಾಶಕ್ತಿ ಹಾಗೂ ಸಮಾಜದಲ್ಲಿ ಶಾಂತಿ ಇದೆಯೇ ಎಂಬುದನ್ನು ಕಂಪನಿಗಳು ಗಮನಿಸುತ್ತವೆ. ಕರ್ನಾಟಕದ ಮಟ್ಟಿಗೆ 10 ಲಕ್ಷ ಕೋಟಿ ರೂ.ಗೂ ಹೆಚ್ಚು ಹೂಡಿಕೆ ಬರುತ್ತದೆ ಎಂದಾದರೆ ನಮ್ಮಲ್ಲಿ ಶಾಂತಿ, ನೆಮ್ಮದಿ, ತೃಪ್ತಿ ಇದೆ, ಯಾವುದೇ ತೊಂದರೆ ಇಲ್ಲ ಎಂದು ಅರ್ಥವಾಗಿದೆ. ರಾಜ್ಯ ಪೊಲೀಸ್ ಇಲಾಖೆ ಆಧುನೀಕರಣದ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಸೈಬರ್ ಅಪರಾಧಗಳು ಹೆಚ್ಚಾಗುತ್ತಿವೆ. ಇವುಗಳನ್ನು ಮಟ್ಟ ಹಾಕದಿದ್ದರೆ ಜನತೆ ಕೋಟ್ಯಾಂತರ ರೂ. ನಷ್ಟ ಅನುಭವಿಸುತ್ತಾರೆ, ಅದಕ್ಕಾಗಿಯೇ ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ ಸೈಬರ್ ಪೊಲೀಸ್ ಠಾಣೆ ಸ್ಥಾಪಿಸಲಾಯಿತು. ಸೈಬರ್ ಅಪರಾಧಗಳ ವಿರುದ್ಧ ಕ್ರಮಕ್ಕಾಗಿ 45ಕ್ಕೂ ಹೆಚ್ಚು ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಯಾವುದೇ ಭಾಗದ ಪೊಲೀಸ್ ಠಾಣೆಯಲ್ಲಿ ಸೈಬರ್ ಅಪರಾಧ ಸಂಬಂಧಿ ದೂರು ದಾಖಲಿಸಬಹುದು ಎಂಬ ಆದೇಶವನ್ನು ಹೊರಡಿಸಲಾಗಿದೆ ಎಂದರು.

ಪೊಲೀಸರ ನಿಸ್ವಾರ್ಥ ಸೇವೆ ಬೇರೆಯವರಿಗೆ ಸ್ಫೂರ್ತಿಯಾಗಲಿ, ಪದಕ ಪಡೆದವರು ಮುಂದಿನ ಪೀಳಿಗೆಗೆ ಆದರ್ಶವಾಗಲಿ. ನಿಮ್ಮಂತೆ ಸೇವೆ ಮಾಡಿ ರಾಜ್ಯಕ್ಕೆ ಮತ್ತು ಇಲಾಖೆಗೆ ಕೀರ್ತಿ ತರಲಿ ಎಂದರು.



ಸಂದೇಶ್ ನಾಗರಾಜ್ 80

ಈ ಸಮಯ ಸಂದೇಶಮಯ

ಮಂಡ್ಯದ ಎಸ್.ನಾಗರಾಜು ಅವರು ಮೈಸೂರಿನಲ್ಲಿ ಸಂದೇಶ್ ನಾಗರಾಜ್ ಆಗಿ ಬೆಳೆದಿದ್ದೇ ಒಂದು ರೋಚಕ ಕತೆ. ವಿದ್ಯಾಭ್ಯಾಸಕ್ಕೆಂದು ಕುಗ್ರಾಮದಿಂದ ಮೈಸೂರಿಗೆ ಬಂದ ಇವರು, ಶೂನ್ಯದಿಂದ ಸಾಧನೆ ಶಿಖರವೇರಲು ಸವೆಸಿದ ಹಾದಿ ಅಚ್ಚರಿಯೇ ಸರಿ. ಓದು ಮುಗಿದ ಕೂಡಲೇ ದಾಂಪತ್ಯಕ್ಕೆ ಕಾಲಿಟ್ಟರೂ ಛಲಬಿಡದೆ ಗುರಿ ಸಾಧಿಸುವ ಮೂಲಕ ಮಾದರಿಯಾಗಿದ್ದಾರೆ. ತಮ್ಮಾಸೆಯಂತೆ ಬಸ್ ಖರೀದಿಸಿ ಅದರ ಮಾಲೀಕರೆನಿಸಿಕೊಂಡರೂ ಕಾರ್ಮಿಕನಂತೆ ಹಗಲಿರುಳು ದುಡಿಯುವ ಮೂಲಕ ಹಲವು ಕನಸುಗಳನ್ನು ಸಾಕಾರ ಮಾಡಿಕೊಂಡಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಆಡುನುಡಿಗೆ ರೂಪಕವೆಂಬಂತೆ ಸಂದೇಶ್ ನಾಗರಾಜ್ ಅವರು ಹಲವು ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಸಾರಿಗೆ, ಮದ್ಯ ಮಾರಾಟ, ಸಿಲ್ಕ್ಸ್ ಅಂಡ್ ಹ್ಯಾಂಡಿಕ್ರಾಫ್ಟ್ಸ್, ಹೋಟೆಲ್ ಉದ್ಯಮ, ಚಿತ್ರೋದ್ಯಮ, ರಾಜಕೀಯ ಕ್ಷೇತ್ರಗಳಲ್ಲಿ ಏಳು–ಬೀಳುಗಳನ್ನು ಕಂಡು, ಹಲವು ಸಂದರ್ಭಗಳಲ್ಲಿ ಕಡುಕಷ್ಟಕ್ಕೆ ತುತ್ತಾದರೂ ಕುಗ್ಗದೆ ಬೆಳೆದು ಬಂದಿದ್ದಾರೆ. ಹಣ ಸಂಪಾದನೆಗಷ್ಟೇ ಸೀಮಿತವಾದ ಉದ್ಯಮಿಯಾಗದೆ ಸಾಮಾಜಿಕ ಕಾರ್ಯಗಳ ಮೂಲಕ ಜನಾನುರಾಗಿ ಎನಿಸಿಕೊಂಡಿದ್ದಾರೆ. ರೈತಾಪಿ ಕುಟುಂಬದ ಓರ್ವ ಸಾಮಾನ್ಯ ಹುಡುಗ ಮನಸ್ಸು ಮಾಡಿ, ಛಲಬಿಡದೆ ಪರಿಶ್ರಮದಿಂದ ಮುನ್ನುಗ್ಗಿದರೆ ಯಾವುದೂ ಅಸಾಧ್ಯವಲ್ಲ ಎಂಬುದಕ್ಕೆ ಸಂದೇಶ್ ನಾಗರಾಜ್ ಅವರು ಜ್ವಲಂತ ಉದಾಹರಣೆಯಾಗಿದ್ದಾರೆ. ಸಂದೇಶ್ ನಾಗರಾಜ್ ಅವರ ಬಾಲ್ಯ, ವಿದ್ಯಾಭ್ಯಾಸ, ಉದ್ಯಮ, ರಾಜಕೀಯ.. ಹೀಗೆ ಎಲ್ಲಾ ರಂಗದ ಪಯಣದಲ್ಲೂ ಸ್ವಾರಸ್ಯಕರ ಸಂಗತಿಗಳು ಅಡಕವಾಗಿವೆ. ನನ್ನಿಂದ ಏನೂ ಮಾಡಲಾಗದು ಎಂಬ ಮನೋಭಾವವುಳ್ಳವರಿಗೆ ಸಂದೇಶ್ ನಾಗರಾಜ್ ಅವರ ಜೀವನಯಾನ ನಿಜಕ್ಕೂ ಪ್ರೇರಣೆಯಾಗಿದೆ.

ತುಂಬಿದ ಮನೆಯ ಮುದ್ದಿನ ಮಗ



ಮರಿಯಮ್ಮ ಹಾಗೂ ಸುಬ್ಬೇಗೌಡ


ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕಿನ ಪುಟ್ಟ ಗ್ರಾಮ ಸೀತಾಪುರ ಸಂದೇಶ್ ನಾಗರಾಜ್ ಅವರ ಹುಟ್ಟೂರು. ರೈತ ದಂಪತಿ ಸುಬ್ಬೇಗೌಡ ಹಾಗೂ ಮರಿಯಮ್ಮ ದಂಪತಿಯ ಪುತ್ರನಾಗಿ 1945 ಆಗಸ್ಟ್ 16ರಂದು ಜನಿಸಿದರು. ಮೂವರು ಹೆಣ್ಣುಮಕ್ಕಳ ನಂತರ ಪುತ್ರ ಸಂತಾನವಾಗಿದ್ದ ಸಂಭ್ರಮದಲ್ಲಿ ತಾತ ಕೆಂಪಮ್ಮನ ಸುಬ್ಬೇಗೌಡ್ರು(ಸುಬ್ಬೇಗೌಡರ ತಂದೆ) ಸುತ್ತಳ್ಳಿಗೆಲ್ಲಾ ಸಕ್ಕರೆ ಬೂಂದಿ ಹಂಚಿದ್ದರಂತೆ. ಮೂವರು ಅಕ್ಕಂದಿರು, ಮೂವರು ತಂಗಿಯರು ಹಾಗೂ ಓರ್ವ ತಮ್ಮ(ಸಂದೇಶ್ ಸ್ವಾಮಿ) ನಾಗರಾಜು ಅವರ ಒಡ ಹುಟ್ಟಿದವರು. ಸೀತಾಪುರ ಶಾಲೆಯಲ್ಲೇ ನಾಲ್ಕನೇ ತರಗತಿವರೆಗೆ ಕಲಿತು, ಐದರಿಂದ ಏಳನೇ ತರಗತಿವರೆಗೆ ಪಕ್ಕದ ಅರಳಕುಪ್ಪೆ ಗ್ರಾಮದ ಶಾಲೆಯಲ್ಲಿ ಓದಿದರು. ಬಳಿಕ ತುಂಬು ಕುಟುಂಬವನ್ನು ಬಿಟ್ಟು ಪಾಂಡವಪುರದ ಪ್ರಾಥಶಾಲೆಗೆ ಸೇರಿದರು. ಅಲ್ಲಿನ ಗ್ರಾಮ ಸೇವಕ ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು ಹೈಸ್ಕೂಲ್ ಮುಗಿಸಿದರು. ತಂದೆಯ ಸ್ನೇಹಿತ ಬೆಳಗೊಳದ ಬಿ.ಎನ್.ಕೆಂಗೇಗೌಡರ ಸಹಾಯದಿಂದ ಮೈಸೂರಿನ ಯುವರಾಜ ಕಾಲೇಜು ಸೇರಿ ಪಿಯುಸಿಯಿಂದ ಬಿ.ಎಸ್ಸಿವರೆಗೆ ವಿದ್ಯಾಭ್ಯಾಸ ಮಾಡಿದರು. ಆ ವೇಳೆ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದ ಪಕ್ಕದ ಗ್ರಾಮದ ಪ್ರೊ.ಪುಟ್ಟಮಾದಪ್ಪ ಅವರ ಸಹಾಯದಿಂದ ಕುಕ್ಕರಹಳ್ಳಿಕೆರೆ ಬಳಿಯ ಬಣಜಿಗರ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರು.

ಕ್ರೀಡೆಯೆಂದರೆ ಬಲು ಅಚ್ಚುಮೆಚ್ಚು

ಬಾಲ್ಯದಿಂದಲೂ ಕ್ರೀಡೆಯಲ್ಲಿ ಅತೀವ ಆಸಕ್ತಿ ಹೊಂದಿದ್ದ ಸಂದೇಶ್ ನಾಗರಾಜ್, ಹೈಸ್ಕೂಲ್ ಹಂತದಲ್ಲಿ ಹೆಚ್ಚು ಆಟೋಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಜಿಲ್ಲಾ ಮಟ್ಟದ ಅಥ್ಲೀಟ್ ಆಗಿದ್ದಲ್ಲದೆ ಕಬಡ್ಡಿಯಲ್ಲೂ ಉತ್ತಮ ಪಟುವಾಗಿದ್ದರು. ಕ್ರೀಡೆಯಲ್ಲಿ ಹಲವು ಪ್ರಶಸ್ತಿ ಪಡೆಯುವುದರೊಂದಿಗೆ ರಾಷ್ಟ್ರಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲೂ ಆಡಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದರು. ಮೈಸೂರು ದಸರಾ ಮಹೋತ್ಸವದಲ್ಲಿ ಸತತ ಮೂರು ವರ್ಷ ಪಾಲ್ಗೊಂಡಿದ್ದ ಸೇವಾದಳದ ಬ್ಯಾಂಡ್ ಸೆಟ್‌ನಲ್ಲೂ ಸೈಡ್ ಡ್ರಮ್ಮರ್ ಆಗಿದ್ದರು. ಹೀಗೆ ಓದಿನ ಜೊತೆಗೆ ಕ್ರೀಡೆ ಇನ್ನಿತರ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು.

ಇಂಜಿನಿರಿಂಗ್ ಬೇಡವೆಂದು ಬಿ.ಎಸ್ಸಿ ಸೇರಿದರು

ಪಿಯುಸಿ ನಂತರ ಮಂಡ್ಯದ ಕೆ.ವಿ.ಶಂಕರೇಗೌಡರ ಪಿಇಎಸ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪ್ರವೇಶ ಸಿಕ್ಕಿತ್ತು. ಈ ವಿಷಯವನ್ನು ತಂದೆ ಖುಷಿಯಿಂದ ಬಂದು ಹೇಳಿದರೆ ನಾಗರಾಜು ತಿರಸ್ಕರಿಸಿ, ಬಿ.ಎಸ್ಸಿ ಸೇರಿದರು. ಕಡೆಗೆ ತಂದೆಯೇ ಸಮಾಧಾನಗೊಂಡು ಮಗನ ಆಸೆಯಂತೆ ಬಿ.ಎಸ್ಸಿ ಸೇರಲು ಒಪ್ಪಿದರು. ಪಾಂಡವಪುರದಲ್ಲಿ ಆರಂಭವಾಗಿದ್ದ ಸಕ್ಕರೆ ಕಾರ್ಖಾನೆಯಲ್ಲಿ ಕೆಮಿಸ್ಟ್ ಹುದ್ದೆ ಕೊಡಿಸಬಹುದು, ಆಗ ಮಗ ಕಣ್ಮುಂದೆಯೇ ಇರುತ್ತಾನೆಂಬ ಆಸೆಯಿಂದ ಸ್ನೇಹಿತರೊಬ್ಬರು ಹೇಳಿದಂತೆ ಮಗನಿಗೆ ಬಿ.ಎಸ್ಸಿಯಲ್ಲಿ ಭೌತಶಾಸ್ತ್ರ ಹಾಗೂ ರಾಸಾಯನಶಾಸ್ತ್ರ ಪ್ರಧಾನ ವಿಷಯ ಆಯ್ಕೆ ಮಾಡಿಸಿದರು. ಎಷ್ಟೇ ಸಂಬಳವಾದರೂ ಸರಿ ಕೆಲಸಕ್ಕೆ ಸೇರಬೇಕೆಂಬುದು ತಂದೆಯ ಆಸೆಯಾಗಿತ್ತು. ಆದರೆ ಏನಾದರೂ ಬ್ಯುಸಿನೆಸ್ ಮಾಡಿಕೊಂಡು ಮೈಸೂರಿನಲ್ಲೇ ಇರಬೇಕೆಂಬುದು ನಾಗರಾಜು ಅವರ ಪಟ್ಟಾಗಿತ್ತು. ಈ ಜಟಾಪಟಿ ನಡುವೆ ಬಸ್ ಖರೀದಿಸಲು ನಾಗರಾಜು ನಿರ್ಧರಿಸಿದ್ದರು.



ನೇತ್ರಾವತಿ ವೆಡ್ಸ್ ನಾಗರಾಜು

ಮೂಗುದಾರ ಹಾಕಿದರೆ ಮಗ ಮಾತು ಕೇಳುತ್ತಾನೆಂದು ಭಾವಿಸಿದ ಸುಬ್ಬೇಗೌಡರು, ಓದು ಮುಗಿಯುತ್ತಿದ್ದಂತೆ ನಾಗರಾಜು ಅವರಿಗೆ ವಿವಾಹ ಮಾಡಿಸಿದರು. ಮೈಸೂರು ಇಟ್ಟಿಗೆಗೂಡಿನ **ಪೈಲ್ವಾನ್ ಮೂಡಲಯ್ಯ ಹಾಗೂ ದೇವಮ್ಮ ದಂಪತಿಯ ಪುತ್ರಿ ನೇತ್ರಾವತಿ** ಅವರೊಂದಿಗೆ ನಾಗರಾಜು ವಿವಾಹ 1969ರ ಜೂ.4ರಂದು ನೆರವೇರಿತು. ಮದುವೆ ಸಂದರ್ಭದಲ್ಲೂ ಬ್ಯುಸಿನೆಸ್ ಬಗ್ಗೆಯೇ ಚಿಂತಿಸುತ್ತಿದ್ದ ನಾಗರಾಜು ಅವರು, ಅಕ್ಕತಂಗಿಯರು ಹಾಗೂ ಬಾವಂದಿರ ಬಳಿ ಮುಯ್ಯಿ ಬದಲು ಬಸ್ ಕೊಳ್ಳಲು ಸಾಲ ಕೊಡುವಂತೆ ಕೇಳಿದ್ದರು. ಆದರೆ ತಂದೆ ಸುಬ್ಬೇಗೌಡರು ಫರ್ಮಾನು ಹೊರಡಿಸಿದ್ದರಿಂದ ಬಾವಂದಿರು ಹಣ ನೀಡದಂತಾಯಿತು. ಬೀಗರಿಗೂ ಹಣ ನೀಡದಂತೆ ತಿಳಿಸಿದ್ದರಿಂದ ನಾಗರಾಜು ಅವರಿಗೆ ದಿಕ್ಕು ತೋಚದಂತಾಗಿತ್ತು.

ಕನಸು ಸಾಕಾರಕ್ಕೆ ನೆರವಾದ ಗೆಳೆಯರ ಬಳಗ

ಬಸ್ ಕೊಳ್ಳುವ ಮಹದಾಸೆಯೊಂದಿಗೆ ಊರು ಬಿಟ್ಟು ಬಂದಿದ್ದ ನಾಗರಾಜು ಅವರ ಕೈಯ್ಯಲ್ಲಿ ಇದ್ದದ್ದು ಮದುವೆ ಮುಯ್ಯಿಯ 10–12 ಸಾವಿರ ಹಣವಷ್ಟೇ. ಬಸ್‌ಗೆ ಸುಮಾರು 60 ಸಾವಿರ ಹಣ ಬೇಕಿತ್ತು. ಆಗ ನಾಗರಾಜು ಅವರ ಪತ್ನಿ ನೇತ್ರಾವತಿ ಒತ್ತಾಸೆಯಾದರು. ಮದುವೆ ವೇಳೆ ಮಾವ ಸುಬ್ಬೇಗೌಡರು ನೀಡಿದ್ದ 160 ತೊಲ ಚಿನ್ನಾಭರಣವನ್ನು ಪತಿ ನಾಗರಾಜು ಅವರಿಗೆ ನೀಡಿದರು. ಅದನ್ನು ಮಾರಿದ್ದಕ್ಕೆ 12 ಸಾವಿರ ರೂ. ಸಿಕ್ಕಿತ್ತು. ಅಲ್ಲದೆ 30ಕ್ಕೂ ಹೆಚ್ಚು ಸ್ನೇಹಿತರು 200 ರೂ.ನಿಂದ ಸಾವಿರದವರೆಗೆ ಸಾಲ ನೀಡಿದರು. ಸಂಕಷ್ಟದಲ್ಲಿ ಸಹಾಯ ಮಾಡಿದ ಸ್ನೇಹಿತರ ಹೆಸರು ಹಾಗೂ ಅವರು ನೀಡಿದ ಹಣದ ವಿವರವುಳ್ಳ ಪುಸ್ತಕವನ್ನು, ಇಂದಿಗೂ ನಾಗರಾಜು ಅವರು ತಲೆ ಬಳಿ ಇಟ್ಟು ಮಲಗುತ್ತಾರಂತೆ. ಇಷ್ಟಾದರೂ ಹಣ ಸಾಕಾಗದಿದ್ದಾಗ ಶಾಸಕ ಟಿ.ಪಿ.ಬೋರಯ್ಯ ಅವರು ತಲಕಾಡಿನ ವೈಶ್ಯ ಬ್ಯಾಂಕ್ ನಿಂದ ನಿರುದ್ಯೋಗಿಗಳಿಗೆ ಕೊಡಿಸುತ್ತಿದ್ದ ಸಾಲವನ್ನೂ ಪಡೆದರು. ಇಷ್ಟೆಲ್ಲಾ ಕಸರತ್ತು ಮಾಡಿ ಹಣ ಹೊಂದಿಸಿ, ಬಸ್ ಅನ್ನು 1972ರಲ್ಲಿ ರಸ್ತೆಗಿಳಿಸಿದರು. ಇದರಿಂದ ಸುಬ್ಬೇಗೌಡರು ಮಗನೊಂದಿಗೆ ಮಾತುಬಿಟ್ಟರು.

'ಸಂದೇಶ್' ಜೋಡಣೆಯಾಗಿದ್ದು ಹೀಗೆ

ಕನಸಿನ ಬಸ್ ರಸ್ತೆಗಿಳಿಯುವ ಸಮಯಕ್ಕೆ ನಾಗರಾಜು–ನೇತ್ರಾವತಿ ದಂಪತಿಗೆ ಪುತ್ರ ಪ್ರಾಪ್ತಿ ಆಯಿತು. ಮಗುವಿಗೆ ಹೆಸರಿಡಲು ಜ್ಯೋತಿಷಿಗಳನ್ನು ವಿಚಾರಿಸಿದಾಗ ಅವರು 'ಸ' ಅಕ್ಷರ ಸೂಚಿಸಿದ್ದರು. ಪ್ರೊ.ಪಂಚಲಿಂಗೇಗೌಡರು 'ಸ' ಅಕ್ಷರದಿಂದ 'ಸಂದೇಶ್' ಎಂದು ಹೆಸರಿಡಬಹುದು ಎಂದರು. ಹೀಗೆ ಮಗನಿಗೆ ನಾಮಕರಣ ಮಾಡಿದ ಹೆಸರನ್ನೇ ಕನಸಿನ ಬಸ್‌ಗೂ ಇಟ್ಟರೂ. ಅಲ್ಲದೆ ನಂತರದ ತಮ್ಮೆಲ್ಲಾ ಉದ್ಯಮಕ್ಕೂ ಇದೆ ಹೆಸರಿಟ್ಟಿದ್ದರಿಂದ ನಾಗರಾಜು ಹೆಸರಿನ ಹಿಂದೆ ಸಂದೇಶ್ ಜೋಡಣೆಯಾಯ್ತು. ಎಲ್ಲರೂ ಸಂದೇಶ್ ನಾಗರಾಜ್ ಎಂದೇ ಗುರುತಿಸಲಾರಂಭಿಸಿದರು. ಈಗಲೂ ಅದೇ ಹೆಸರು ಜನಜನಿತವಾಗಿದ್ದು, ಅವರ ದಾಖಲೆಗಳಲ್ಲಷ್ಟೇ ಎಸ್.ನಾಗರಾಜು ಎಂದಿದೆ.

ಸಾರಿಗೆ ಸರದಾರನಾಗಲು ಪ್ರೇರಣೆ

ಆಗಿನ ಬನ್ನೂರು ಕ್ಷೇತ್ರದ ಶಾಸಕರಾಗಿದ್ದ ಟಿ.ಪಿ.ಬೋರಯ್ಯನವರು ಟಿಎನ್ ಆರ್ ಟಿಎಸ್ ಹೆಸರಿನ ಬಸ್ ಸಂಸ್ಥೆ ನಡೆಸುತ್ತಿದ್ದರು. ಆಗ ಸಂಚಾರ ವ್ಯವಸ್ಥೆಯಲ್ಲಿ ಖಾಸಗಿ ಸಂಸ್ಥೆಗಳದ್ದೇ ಪಾರುಪತ್ಯ. ಬೋರಯ್ಯ ಅವರ ಪುತ್ರ ನಿರಂಜನ್ ಹಾಗೂ ನಾಗರಾಜು ಪಿಯುಸಿ ಸಹಪಾಠಿಗಳು. ಇವರಿಬ್ಬರೂ ಆತ್ಮೀಯರಾಗಿದ್ದರಿಂದ ಬಸ್ಸಿನ ಕಾರ್ಯಾಚರಣೆ, ರಿಪೇರಿ, ಖರೀದಿ ಸಂದರ್ಭದಲ್ಲಿ ಜೊತೆಯಲ್ಲೇ ಇರುತ್ತಿದ್ದರು. ಆದ್ದರಿಂದ ಟ್ರಾನ್ಸ್‌ಪೋರ್ಟ್ ವ್ಯವಹಾರ ನಾಗರಾಜು ಅವರಿಗೂ ಕರಗತವಾಗಿತ್ತು. ಇದೇ ನಾಗರಾಜು ಅವರು ಬಸ್ ಕೊಳ್ಳಲು ಪ್ರೇರಣೆಯಾಯಿತು.



ಮೈಸೂರು ಟು ಮೂಡಿಗೆರೆ

ಮೈಸೂರು– ಮೂಡಿಗೆರೆ ಮಾರ್ಗದಲ್ಲಿ ಸಂದೇಶ್ ಬಸ್ ಸಂಚರಿಸುತ್ತಿತ್ತು. ಆರಂಭದಲ್ಲಿ ಡ್ರೈವರ್ ನೇಮಿಸಿಕೊಳ್ಳುವ ಶಕ್ತಿ ಸಂದೇಶ್ ನಾಗರಾಜ್ ಅವರಿಗಿರಲಿಲ್ಲ. ಹಾಗಾಗಿ ಆರೇಳು ತಿಂಗಳು ತಾವೇ ಚಾಲಕ ಹಾಗೂ ನಿರ್ವಾಹಕರಾಗಿದ್ದರು. ನಿತ್ಯ ಸಂಜೆ 4ಕ್ಕೆ ಮೈಸೂರು ಬಿಟ್ಟು ಚಿಕ್ಕಮಗಳೂರು ಮಾರ್ಗದಲ್ಲಿ ರಾತ್ರಿ 10ಕ್ಕೆ ಮೂಡಿಗೆರೆ ತಲುಪುತ್ತಿದ್ದರು. ಅಲ್ಲಿಯೇ ಉಳಿದು ಮರುದಿನ ಬೆಳಗ್ಗೆ 6ಕ್ಕೆ ಹೊರಟು ಬೆಳಗ್ಗೆ 11ಕ್ಕೆ ಮೈಸೂರಿಗೆ ವಾಪಸ್ಸಾಗುತ್ತಿದ್ದರು. ಸಣ್ಣಪುಟ್ಟ ರಿಪೇರಿ ಕೆಲಸ ಮಾಡಿಸಿ, ಸೀತಾಪುರಕ್ಕೆ ಹೋಗಿ ಸಂಜೆ 4 ಗಂಟೆ ಹೊತ್ತಿಗೆ ಮತ್ತೆ ಬಸ್ ಏರಬೇಕಿತ್ತು. ಅವರು ಮನೆಗೆ ಹೋಗುವ ವೇಳೆಗೆ ಮಕ್ಕಳೂ ಶಾಲೆಗೆ ಹೋಗುತ್ತಿದ್ದರಿಂದ ಅವರನ್ನೂ ಮಾತನಾಡಿಸಲು ಆಗುತ್ತಿರಲಿಲ್ಲ. ಬಸ್‌ನಿಂದ ಬಂದ ಲಾಭದಲ್ಲಿ ಚಾಸಿ ಖರೀದಿಸಿ, ಬಾಡಿ ಕಟ್ಟಿಸಿ ಹಳೆಯ ಬಸ್ ಮಾರುತ್ತಿದ್ದರು. ಆಗ ಇದ್ದಂತಹ 50 ಬಸ್‌ಗಳಲ್ಲಿ ಅತೀ ಹೆಚ್ಚು ಕಲೆಕ್ಷನ್ ಇದ್ದದ್ದು 'ಸಂದೇಶ್ ಬಸ್'ನಲ್ಲೇ. ಮಗನ ಬೆಳವಣಿಗೆ ಕಂಡು ಸುಬ್ಬೇಗೌಡರ ಸಿಟ್ಟು ಕರಗಿತ್ತು. ಕೃಷಿಯಿಂದ ಕೂಡಿಟ್ಟಿದ್ದ ಹಣವನ್ನೂ ತಂದು ಮಗನಿಗೆ ಕೊಟ್ಟು ಹರಸಿದರು. ಪತ್ನಿ ಹಾಗೂ ಮಕ್ಕಳೊಂದಿಗೆ ಮನೆ ಮಾಡಿಕೊಂಡು ಮೈಸೂರಿನಲ್ಲಿರಲು ಸೂಚಿಸಿದರು. ಅದರಂತೆ ಮೃಗಾಲಯದ ಎದುರು ಎರಡು ಸಾವಿರ ಅಡ್ವಾನ್ಸ್ ಹಾಗೂ 40 ರೂ. ಬಾಡಿಗೆಗೆ ಮನೆ ಮಾಡಿದರು. ಅದೇ ವೇಳೆಗೆ ಸ್ವಂತ ಮನೆ ನಿರ್ಮಾಣವೂ ಆರಂಭವಾಗಿತ್ತು. ಒಂದು ಕಾರನ್ನೂ ಖರೀದಿಸಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಬಸ್ ಸೀಜ್

ಸಂದೇಶ್ ನಾಗರಾಜು ಅವರ ಬದುಕು ಬಸ್‌ನಿಂದ ಬದಲಾಗಿತ್ತು. ಟ್ರಾನ್ಸ್‌ಪೋರ್ಟ್ ಉದ್ಯಮ ಮೂರ್‍ನಾಲ್ಕು ವರ್ಷ ತುಂಬಾ ಚೆನ್ನಾಗಿ ನಡೆದಿತ್ತು. ಆದರೆ ಭಾರತದಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ಖಾಸಗಿ ಸಾರಿಗೆಯನ್ನೂ ರಾಷ್ಟ್ರೀಕರಣಗೊಳಿಸಿದ್ದು ಭಾರೀ ಪೆಟ್ಟು ನೀಡಿತು. ಮೈಸೂರಿನಿಂದ ಮೂಡಿಗೆರೆಗೆ ಹೋಗುತ್ತಿದ್ದ ಸಂದೇಶ್ ಬಸ್ ಅನ್ನು ಕೆ.ಆರ್.ನಗರದ ಬಳಿಯೇ ವಶಪಡಿಸಿಕೊಳ್ಳಲಾಯಿತು. ಅದಕ್ಕೆ ಸರ್ಕಾರದಿಂದ 10 ಸಾವಿರ ರೂ. ಪರಿಹಾರ ನೀಡಿದ್ದರಷ್ಟೆ. ಆಗ ಸಂದೇಶ್ ನಾಗರಾಜ್ ಅವರಿಗೆ ಬರಸಿಡಿಲು ಬಡಿದಂತಾಯಿತು. ಟ್ರಾನ್ಸ್‌ಪೋರ್ಟ್ ಕಚೇರಿಗೆಂದು ಚಾಮುಂಡೇಶ್ವರಿ ಟಾಕೀಸ್ ಹಿಂಭಾಗ ಅಲಂಕಾರ್ ರೀಟೇಲ್ ವೈನ್ ಶಾಪ್ ತೆರೆದಿದ್ದರು. ಬಸ್ ಕಳೆದುಕೊಂಡು ಕಂಗಾಲಾಗಿದ್ದಾಗ ವೈನ್ಸ್ ಅಂಗಡಿ ಹಾಗೂ ಮನೆಯಲ್ಲಿ ಒಂದೇ ದಿನ ಕಳ್ಳತನವಾಯಿತು. ದುಡಿದಿದ್ದೆಲ್ಲಾ ಒಂದೇ ದಿನ ಕಳೆದುಕೊಂಡು ಬರಿಗೈಯಲ್ಲಿ ಊರಿಗೆ ವಾಪಸ್ಸಾಗುವ ದುಸ್ಥಿತಿ ಎದುರಾಯಿತು. ಆ ವೇಳೆ ತಂದೆ ಸುಬ್ಬೇಗೌಡರು ಧೈರ್ಯ ತುಂಬಿದರು. ನಿನ್ನ ಸಾಮರ್ಥ್ಯ ಸಾಬೀತು ಮಾಡಿದ್ದೀಯಾ. ಕಷ್ಟಕ್ಕೆ ಹೆದರಿ ಊರಿಗೆ ಬರಬೇಡ. ಮತ್ತೆ ಏನಾದರೂ ಮಾಡು ಎಂದು ಕಿವಿಮಾತು ಹೇಳಿದರು. ಅದರಂತೆ ಸಂದೇಶ್ ನಾಗರಾಜು ಮದ್ಯ ವ್ಯವಹಾರ ವಿಸ್ತರಿಸಿಕೊಳ್ಳಲು ಮುಂದಾದರು.

ಮುಂದುವರೆದ ಭಾಗ ಪುಟ–8ರಲ್ಲಿ

Promotional Feature



ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ




ಶ್ರೀ ತಿಮ್ಮರಾಜು

ಹುಣಸೂರು ತಾಲೂಕು ಕಟ್ಟೆ ಮಳಲವಾಡಿ ಗ್ರಾಮದ ಶ್ರೀಮತಿ ಭವ್ಯ ಕೆ.ಟಿ ಮಾಡುವ ವಿಜ್ಞಾಪನೆಗಳು.ನಮ್ಮ ಪೂಜ್ಯ ತಂದೆಯವರಾದ ಶ್ರೀ ತಿಮ್ಮರಾಜು (ರಾಜ್ಯ ಕೈಮಗ್ಗ ಇಲಾಖೆಯ ನಿವೃತ್ತ ನೌಕರರು) ದಿ. 22-8-2025 ರ ಶುಕ್ರವಾರ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ. 1-9-2025ರ ಸೋಮವಾರ ಉತ್ತರ ಕ್ರಿಯಾದಿ ಕಾರ್ಯಕ್ರಮವನ್ನು ಮಧ್ಯಾಹ್ನ 2 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. (ಭೋಜನ ಮಧ್ಯಾಹ್ನ 2 ಗಂಟೆಗೆ).

ಇಂತಿ ದುಃಖಿತಪ್ತರು: ಮಗಳು ಶ್ರೀಮತಿ ಭವ್ಯ ಕೆ.ಟಿ., ಅಳಿಯ ಸಿದ್ದರಾಜು ಹಾಗೂ ಕುಟುಂಬ ವರ್ಗದವರು, ಕಟ್ಟೆಮಳಲವಾಡಿ

6ನೇ ವರ್ಷದ ಸವಿನೆನಪು



ಜಿ. ಲಿಂಗಯ್ಯನವರು

ಸದಾ ನಿಮ್ಮ ನೆನಪಿನಲ್ಲಿರುವ
ಎಲ್. ಶಶಿಧರ,
ಎಂ.ಎಲ್. ಚಂದ್ರಮೌಳಿ ಹಾಗೂ ಕುಟುಂಬ ವರ್ಗದವರು

G9 projects
Designing your Dreams
Developers

MUDA APPROVED
Khata Ready
SHOURYA LAYOUT
ADJOINING VIJAYANAGAR 4TH STAGE
20X30 Site
₹ 27 LAKHS ONLY

HERITAGE CITY
NEAR NEW MYSURU NANJANGUD HIGHWAY
OWN 20x30 site
PAY ₹ 2 LAKHS ONLY
Rest With Installments
8088-707-707

MUDA APPROVED SITES @ R T NAGAR
Close to 80 ft Road
FOR SALE @ JUST
Rs 4800/- Per Sqft
Call: 99458 57017

SITE FOR SALE
MUDA Auction Site 30'x40', J P Nagar D Block, near JSS School & Bus Stop, Mysore.
Only genuine buyers contact
91827 56737
(Between 4 - 8 pm)
Brokers excuse

ಹಸಿರು ನಮ್ಮ ಉಸಿರು

Form No. 22 and 18

General Notice in respect of Interlocutary Application and Notice for appearance in Appeals Order 41 Rule 14 CPC, and Rules 1,2,4 and 11 of Chapter IV Karnataka High Court Rules IN THE HIGH COURT OF KARNATAKA AT BENGALURU

MFA No.2563/2019 (CPC/SJ)

Appellant

1. Shambegowda, S/O CHIKKATHAMMEGOWDA, AGED 60 YEARS, R/AT HAROHALLI VILLAGE, JAYAPURA HOBLI, MYSURU TALUK AND DISTRICT.

By Sri MADHUSUDHANA RAO, ADV.

Vs

Respondent/s

1. SMT. NINGAMMA, W/O SHIVANNA, AGED ABOUT 63 YEARS, R/O KELLAHALLI VILLAGE, JAYAPURA HOBLI, MYSURU TALUK & DISTRICT AND OTHERS.

Appeal From the Judgement/Award/Order passed on dated 12/07/2018 in MIS. NO. 23/2017 on the file of the IV ADDL.SENIOR CIVIL JUDGE AND JMFC. MYSURU, I.A.NO. 1/2019 FOR CONDONE THE DELAY OF 163 DAYS FILED IN THE ABOVE APPEAL.

To: R1

1. SMT. NINGAMMA, W/O SHIVANNA, AGED ABOUT 63 YEARS, R/O KELLAHALLI VILLAGE, JAYAPURA HOBLI, MYSURU TALUK & DISTRICT

Whereas the aforementioned Appeal preferred has been registered by this Court.

E/NOTICE IS HEREBY given to you to appear in this Court in person or through an Advocate duly instructed or through some one authorised by law to act for you in this case on 18/09/2025 at 10.30 a.m., in case you intend to contest the appeal. If you fail so to appear, the appeal will be dealt with, heard and decided in your absence.

Given under my hand and the seal of this court on 19th DAY OF AUGUST 2025.

By order of the Court
Sd/- Assistant Registrar

PUBLIC NOTICE

My Client is intended to purchase below mentioned Schedule A & B Properties from **Sri. P. Girish, Basave gowda @ Doddagandu & others** and they have acquired the title of the Schedule Properties through Partition Deed / Sale deed / Gift Deed & with other transactions.

Any person having any right, title, interest, claim in or to the Schedule Properties or any part thereof by way of any agreement, contract, lease, trust, inheritance, gift, possession, mortgage, exchange or any such deed/instrument of transfer, easement or otherwise, may submit their objection(s), claim(s) by direct or in writing with us at the under mentioned address through Registered Post along with the supporting documentary proof, within **Seven (7) days** from the date of this publication. Any objections received thereafter will not be binding on my Client and my Client shall proceed with the Sale.

SCHEDULE OF THE PROPERTY

A. Sri P Girish;- Survey No. 107/3, measuring 1 Acre,

B. Sri. Basavegowda @ Doddagandu & others:- Survey No. 103/11, 103/13 & 103/15, totally measuring 19 Guntas 08 Annas,

All properties are situated at Doddamaregowdanahalli village, Ilvala Hobli, Mysore Taluk & District.

B.S. Leena Devi Papanna, B.Sc., LL.B.
Advocate, Roll No. KAR 1558/05
9/1, V.V. Mohalla, Mysore
Mob : 94491 35412
Date : 30.08.2025, Place : Mysore

2.5 BHK HOME INTERIORS @ ₹ 2.9 Lakh*
Home Space Mart
*T&C Apply
91089 23123

ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ ಟ್ರಸ್ಟ್ (ರಿ)
ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು

ಕಾಯಿಲೆಗಳಿಗೆ ಔಷಧಿ ಮುಕ್ತ ಚಿಕಿತ್ಸೆ
ಆರೋಗ್ಯಪೂರ್ಣ ಹಾಗೂ ನೆಮ್ಮದಿಯ ಜೀವನಕ್ಕೆ ಋಷಿ ಪ್ರಭಾಕರ ಗುರೂಜಿಯವರಿಂದ ರೂಪಿಸಲ್ಪಟ್ಟ
"ಸಿದ್ಧ ಸಮಾಧಿ ಯೋಗ" ಶಿಬಿರ
ಧ್ಯಾನ, ಪ್ರಾಣಾಯಾಮ, ಆಹಾರ ಮತ್ತು ಜೀವನಕ್ರಮ ಪರಿಚಯ
ದಿನಾಂಕ: 31-8-2025ರಂದು ಭಾನುವಾರ ಸಂಜೆ 6 ಗಂಟೆಗೆ.
ಶಿಬಿರ ದಿನಾಂಕ: 1-9-2025 ರಿಂದ 14-9-2025 ರವರೆಗೆ.
ಸಂಜೆ 6 ರಿಂದ 8.30 ರವರೆಗೆ. ಸಂಪರ್ಕಿಸಿ:
9448458050, 8618762110

ಮಹೇಶ್ ಥಿಯೇಟರ್ ಗ್ರೂಪ್
ಗೆಜ್ಜೆ ಹೆಜ್ಜೆ ರಂಗತಂಡ, ಮೈಸೂರು
ಅರ್ಪಿಸುವ
ನಗೆ ನಾಟಕ
ಸನ್ಮಾನ ಮಾರಾಟಕ್ಕೆ...?...!



ದಿನಾಂಕ : 31-08-2025
ಭಾನುವಾರ, ಸಂಜೆ 6.30ಕ್ಕೆ
ಸ್ಥಳ : ಕಿರು ರಂಗಮಂದಿರ, ಕಲಾಮಂದಿರ ಆವರಣ, ಮೈಸೂರು
ನಗೋಣ ಬನ್ನಿ, ನಗಿಸೋಣ ಬನ್ನಿ ನಗುನಗುತಾ ಬಾಳೋಣ ಬನ್ನಿ
ಪ್ರವೇಶ ದರ : 100 ರೂ.
ಹೆಚ್ಚಿನ ಮಾಹಿತಿಗೆ : 9880859879

ಮೈಸೂರು ಮಿತ್ರ
46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

HOUSE & PLOTS FOR SALE
30x40, 3 BHK East facing Semi furnished Duplex House & plots for sale in Srirampura & 3rd Stage Vijayanagar.
Call : 95357 18132 / 63642 04222

AFFIDAVIT

I, Likitha Patel H.R., D/o Ravikumar H.M., residiing at #980, 7th Main, Hebbal 1st Stage, Mysore, my correct name is Likitha Patel H.R. on my Aadhar Card & other documents. In my Kotak Mahendra Bank (A/c No. 8850843471), Kumbarakoppalu Branch, Mysuru, my name was mentioned as Likitha Patel & H.R. is missing. Hence I make this affidavit that both names belongs to me, swear in before Notary C. Mangala on 6-8-2025.

Sd/- Likitha Patel H.R.





ಸಂದೇಶ್ ನಾಗರಾಜ್ 80
ಈ ಸಮಯ ಸಂದೇಶಮಯ

ಮದ್ಯ ವ್ಯವಹಾರಕ್ಕೂ ಕುತ್ತು

ಆ ವೇಳೆ ಅಬಕಾರಿ ಅಧಿಕಾರಿಗಳಾಗಿದ್ದ ಭೈರೇಗೌಡ, ವೈ.ಕೆ.ಮುದ್ದುಕೃಷ್ಣ ಸಹಾಯದಿಂದ ಮದ್ಯ ಮಾರಾಟ ವಿಸ್ತರಿಸಿ, 12 ರೀಟೇಲ್ ಶಾಪ್ ಹಾಗೂ ಒಂದು ಹೋಲ್‌ಸೇಲ್ ಶಾಪ್ ತೆರೆದರು. ಸಂದೇಶ್ ನಾಗರಾಜು ಅವರೊಂದಿಗೆ ಸಹೋದರ ಎಸ್. ಸತೀಶ್ (ಸಂದೇಶ್ ಸ್ವಾಮಿ) ಕೈಜೋಡಿಸಿದ್ದರು. ಆದರೆ 1982ರ ಜೂ.30ರಂದು ಮದ್ಯ ವ್ಯವಹಾರಕ್ಕೂ ಕುತ್ತು ಬಂದಿತು. ಅಬಕಾರಿ ಪರವಾನಗಿ ನವೀಕರಣ ಸ್ವಲ್ಪ ತಡವಾಗಿದ್ದಕ್ಕೆ ಮದ್ಯ ಸಾಗಿಸುವ ವಾಹನಗಳನ್ನೇ ಅಬಕಾರಿ ಇಲಾಖೆ ಅಧಿಕಾರಿಗಳು ಸೀಜ್ ಮಾಡಿದರು. ಈ ವ್ಯವಹಾರ ಮುಂದುವರೆಸುವುದು ಬೇಡ ಎಂದು ನಿರ್ಧರಿಸಿ, ಸಂಭ್ರಮ ಬಾರ್ ಹೊರತುಪಡಿಸಿ ಉಳಿದ ತಮ್ಮೆಲ್ಲಾ ಅಂಗಡಿಗಳನ್ನು ಅಲ್ಲಿನ ಮ್ಯಾನೇಜರ್‌ಗಳಿಗೆ ಮಾರಾಟ ಮಾಡಿದರು.

ಕೈಬಿಡದ 'ನೇತ್ರಾವತಿ ಸಿಲ್ಕ್ಸ್ ಅಂಡ್ ಹ್ಯಾಂಡಿಕ್ರಾಫ್ಟ್ಸ್'

ಟ್ರಾನ್ಸ್‌ಪೋರ್ಟ್, ಮದ್ಯ ವ್ಯವಹಾರದಲ್ಲಿ ಲಾಭ-ನಷ್ಟ ಅನುಭವಿಸಿದ್ದ ಸಂದೇಶ್ ನಾಗರಾಜ್, ಇಟ್ಟಿಗೆಗೂಡಿನ ಸ್ವಂತ ಮನೆಗೆ ಶಿಫ್ಟ್ ಆಗಿ ಮೃಗಾಲಯದ ಎದುರಿನ ಬಾಡಿಗೆ ಮನೆಯಲ್ಲಿ ನೇತ್ರಾವತಿ ಸಿಲ್ಕ್ಸ್ ಅಂಡ್ ಹ್ಯಾಂಡಿಕ್ರಾಫ್ಟ್ಸ್ ಆರಂಭಿಸಿದರು. ಈ ಹೊಸ ಉದ್ಯಮ ಸಂದೇಶ್ ನಾಗರಾಜ್ ಅವರ ಜೀವನದ ದಿಕ್ಕನ್ನೇ ಬದಲಿಸಿತು. ಊಹಿಸಲಾರದಷ್ಟು ಲಾಭ ಮಾಡಿದರು. ಸಾಲವನ್ನೆಲ್ಲಾ ತೀರಿಸಿ, ನಿರಾಳರಾದರು. 1979ರಲ್ಲಿ ಆರಂಭಿಸಿದ ಈ ಉದ್ಯಮ ಹಲವು ವರ್ಷಗಳ ಕಾಲ ತುಂಬಾ ಚೆನ್ನಾಗಿ ನಡೆಯಿತು. ಅಷ್ಟರಲ್ಲಿ ಆ ಜಾಗದಲ್ಲಿ ಸಾಕಷ್ಟು ಅಂಗಡಿಗಳಾಗಿದ್ದರಿಂದ ತಮ್ಮ ವ್ಯವಹಾರವನ್ನು ಹೋಟೆಲ್ ಆವರಣಕ್ಕೇ ಸ್ಥಳಾಂತರಿಸಿಕೊಂಡರು.



ಸಿಎಂ ಸಿದ್ದರಾಮಯ್ಯರೊಂದಿಗೆ ಸಂದೇಶ್

ಸ್ಟಾರ್ ಹೋಟೆಲ್ ಮಾಲೀಕರಾದರು

ಸಿಲ್ಕ್ ಅಂಡ್ ಹ್ಯಾಂಡಿಕ್ರಾಫ್ಟ್ಸ್‌ನಿಂದ ಉತ್ತಮ ಲಾಭ ಬಂದಿದ್ದರಿಂದ ಸಂದೇಶ್ ನಾಗರಾಜ್ ಅವರು ಹೋಟೆಲ್ ಉದ್ಯಮದತ್ತ ಮುಖ ಮಾಡಿದರು. ಸುಂಟಿಕೊಪ್ಪದ ಶಾಸಕರಾಗಿದ್ದ ಕೆ.ಎಂ.ಇಬ್ರಾಹಿಂ ಅವರು ನಡೆಸುತ್ತಿದ್ದ ಆಶೀರ್ವಾದ್ ಹೋಟೆಲ್ ಅನ್ನು ಅವರು ಕೇಳಿದ್ದ 50 ಲಕ್ಷದ ಜೊತೆಗೆ 1 ಸಾವಿರ ಹೆಚ್ಚು ನೀಡಿ ಖರೀದಿಸಿದರು. ಆಗ ಇಷ್ಟೊಂದು ಹಣ ಕೊಟ್ಟು ತೆಗೆದುಕೊಂಡಿದ್ದಾನೆ. ನಷ್ಟದಿಂದ ಮುಳುಗಿ ಹೋಗುತ್ತಾನೆ ಎಂದವರೇ ಹೆಚ್ಚು. ಆದರೆ 2003ರಲ್ಲಿ ಆರಂಭವಾದ ಸಂದೇಶ್ ದಿ ಪ್ರಿನ್ಸ್, ಮೈಸೂರಿನ ಪ್ರತಿಷ್ಠಿತ ಸ್ಟಾರ್ ಹೋಟೆಲ್‌ಗಳಲ್ಲಿ ಒಂದಾಯಿತು. ಸಂದೇಶ್ ನಾಗರಾಜು ಅವರು ಪೂರ್ಣವಾಗಿ ಹೋಟೆಲ್ ವ್ಯವಹಾರದಲ್ಲಿ ತೊಡಗಿಕೊಂಡು, ಸಿಲ್ಕ್ಸ್ ಅಂಡ್ ಹ್ಯಾಂಡ್ ಕ್ರಾಫ್ಟ್ಸ್ ಅನ್ನು ಪುತ್ರ ಸಂದೇಶ್ ಅವರಿಗೆ ವಹಿಸಿದ್ದರು.

ರಾಜಕೀಯ ನಂಟು ಬೆಳೆದಿದ್ದು

ಕಾಲೇಜು ದಿನಗಳಲ್ಲಿ ಜೆ.ಪಿ. ಚಳವಳಿಯಲ್ಲಿ ಭಾಗಿಯಾಗಿದ್ದ ಇವರು, ಪಾಂಡವಪುರದ ಶಾಸಕರಾಗಿದ್ದ ಹಲಗೇಗೌಡರ ಜೊತೆಗಿದ್ದರು. ನಂತರ ಬಿ.ಎಲ್.ಶಂಕರ್, ವೈಎಸ್‌ವಿ ದತ್ತ, ಪಿಜಿಆರ್ ಸಿಂಧ್ಯಾ, ಜೀವರಾಜ್ ಆಳ್ವರೊಂದಿಗೆ ಒಡನಾಟ ಬೆಳೆಯಿತು. ಮಾಜಿ ಪ್ರಧಾನಿ ಚಂದ್ರಶೇಖರ್ ಅವರ ಸಂಪರ್ಕವೂ ಇತ್ತು. ಹೀಗೆ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದ ಸಂದೇಶ್ ನಾಗರಾಜು, ಸೀತಾಪುರ ಪ್ರಾಥಮಿಕ ಸಹಕಾರ ಸಂಘದ ನಿರ್ದೇಶಕರಾಗಿ ಸಹಕಾರ ಕ್ಷೇತ್ರಕ್ಕೂ ಕಾಲಿಟ್ಟರು. ಪಾಂಡವಪುರ ಸಕ್ಕರೆ ಕಾರ್ಖಾನೆ ನಿರ್ದೇಶಕ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಜಿತರಾದರು. **ರಾಮಕೃಷ್ಣ ಹೆಗಡೆಯವರು ಇವರ ರಾಜಕೀಯ ಗುರುಗಳಾದರು. ಮೈಸೂರಿನಲ್ಲಿ ಅಜೀಜ್‌ಸೇಠ್ ಅವರೊಂದಿಗೆ ಹೆಚ್ಚು ಒಡನಾಟವಿತ್ತು.** ಮೂರು ವಿಧಾನಸಭಾ ಚುನಾವಣೆಗಳಲ್ಲಿ ಕೆಲಸ ಮಾಡಿದರು.




ರಾಮಕೃಷ್ಣ ಹೆಗ್ಡೆ ಅವರೊಂದಿಗೆ ಸಂದೇಶ್ ನಾಗರಾಜ್

ಮುಡಾದಲ್ಲಿ ಸಂದೇಶ್ ನಾಗರಾಜು ಮೈಲಿಗಲ್ಲು

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ 2002ರಲ್ಲಿ ಸಂದೇಶ್ ನಾಗರಾಜ್ ಅವರು ಮುಡಾ ಅಧ್ಯಕ್ಷರಾದರು. ಕಬಿನಿಯಿಂದ ಕುಡಿಯುವ ನೀರಿನ ಯೋಜನೆಗೆ 50 ಕೋಟಿ ರೂ. ವೆಚ್ಚದಲ್ಲಿ ಯೋಜನೆ ರೂಪಿಸಿದರು. ನೂತನ ಬಡಾವಣೆಗಳ ಹಸಿರೀಕರಣಕ್ಕೆ ಕಾರಣೀಭೂತರಾದರು. ಮುಡಾಗೆ ಜನರ ಅನಗತ್ಯ ಅಲೆದಾಟ ತಪ್ಪಿಸಲು ತ್ವರಿತ ಸ್ಪಂದನೆ ರೂಪಿಸಿದರು. ಮಹತ್ವದ **ರಿಂಗ್ ರೋಡ್ ಯೋಜನೆಯನ್ನು ಕೇವಲ 11 ತಿಂಗಳಲ್ಲಿ ಪೂರ್ಣಗೊಳಿಸಿದರು.** ಇದಲ್ಲದೆ 1800 ಬಡವರಿಗೆ ಮನೆಗಳನ್ನು ಹಂಚಿಕೆ ಮಾಡಿ, ಅವರು ಬಾಡಿಗೆ ಪಾವತಿಸುವ ಹಣವನ್ನು ಬ್ಯಾಂಕ್‌ಗೆ ಇಎಂಐ ಪಾವತಿಸುವಂತೆ 'ಕೃಷ್ಣ ಕುಟೀರ' ಎಂಬ ಮಹತ್ವದ ಯೋಜನೆ ರೂಪಿಸಿದ್ದರು. ಆದರೆ ಕಾರಣಾಂತರಗಳಿಂದ ಸಾಕಾರಗೊಳ್ಳಲಿಲ್ಲ. ಅಲ್ಲದೆ 40 ಸಾವಿರ ನಿವೇಶನಗಳ ಒಟ್ಟು ಐದು ಬಡಾವಣೆಗಳನ್ನು ಹೆಸರು ಸಹಿತ ಘೋಷಿಸಿದ್ದರು. ಒಟ್ಟಾರೆ ಮುಡಾದಲ್ಲಿ ಮೈಲಿಗಲ್ಲು ಸ್ಥಾಪಿಸಿ, ರಾಜ್ಯದ ಗಮನ ಸೆಳೆದಿದ್ದರು.

ಚುನಾವಣಾ ರಾಜಕೀಯದ ಸೋಲು-ಗೆಲುವು



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗೆ ಸಂದೇಶ್ ಕುಟುಂಬ

ರಾಜಕೀಯ ಬೆಳವಣಿಗೆಯಿಂದಾಗಿ 1994ರಲ್ಲಿ ಜೊತೆಗಿದ್ದ ಅಜೀಜ್ ಸೇಠ್ ಅವರ ವಿರುದ್ಧವೇ ನರಸಿಂಹರಾಜ ಕ್ಷೇತ್ರದಿಂದ ಸ್ಪರ್ಧಿಸಿದ ಸಂದೇಶ್ ನಾಗರಾಜ್ ಅವರು ಅತ್ಯಂತ ಕಡಿಮೆ ಮತಗಳಿಂದ ಪರಾಜಿತರಾದರು. ಆ ಚುನಾವಣೆಯಲ್ಲಿ ಬಿಜೆಪಿಯ ಮಾರುತಿರಾವ್ ಪವಾರ್ 31 ಸಾವಿರ ಮತಗಳೊಂದಿಗೆ ಗೆದ್ದರೆ, ಅಜೀಜ್ ಸೇಠ್ ಸುಮಾರು 600 ಹಾಗೂ ಸಂದೇಶ್ ನಾಗರಾಜು 800 ಮತಗಳಲ್ಲಿ ಸೋತರು. ನಂತರ ಆಗಿನ ಕಾಲಕ್ಕೆ ಒಡನಾಟವಿಲ್ಲದ ಚಾಮರಾಜ ಕ್ಷೇತ್ರದಿಂದ 2004ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ 6 ಸಾವಿರ ಮತಗಳಿಂದ ಸೋತರು. ನಂತರ 2010 ಮತ್ತು 2016ರಲ್ಲಿ ಜೆಡಿಎಸ್‌ನಿಂದ ಎರಡು ಬಾರಿ ಮೈಸೂರು ಹಾಗೂ ಚಾಮರಾಜ ಜಿಲ್ಲೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾದರು. ಚುನಾವಣಾ ರಾಜಕೀಯದಿಂದ ಸದ್ಯ ದೂರ ಉಳಿದಿದ್ದಾರೆ.

ನಿರಂತರ ಸಾಮಾಜಿಕ ಸೇವೆ-ಹುಟ್ಟೂರಿಗೆ ಅಪಾರ ಕೊಡುಗೆ

ಸಂದೇಶ್ ನಾಗರಾಜ್ ಅವರು ಪ್ರಚಾರ ಬಯಸದೆ ನಿರಂತರವಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದಾರೆ. ವಿದ್ಯಾಭ್ಯಾಸ, ಮದುವೆ, ಶಾಲೆ, ದೇವಸ್ಥಾನ, ಹಬ್ಬ, ಉತ್ಸವಕ್ಕೆ ಕೈಲಾದಷ್ಟು ನೆರವಾಗುತ್ತಿದ್ದಾರೆ. ಹುಟ್ಟೂರಾದ ಸೀತಾಪುರದ ಹಲವರಿಗೂ ಸಹಾಯ ಮಾಡಿದ್ದಾರೆ. ಸಹಾಯ ಕೇಳಿ ಬಂದ ಬಡವರನ್ನು ಎಂದೂ ಬರಿಗೈಯಲ್ಲಿ ಕಳುಹಿಸುವುದಿಲ್ಲ. ಹುಟ್ಟೂರಿಗೆ ನೀರು, ರಸ್ತೆ, ಬೀದಿದೀಪ, ಶಾಲೆ ನವೀಕರಣ ಸೇರಿದಂತೆ ಅಪಾರ ಕೊಡುಗೆ ನೀಡಿದ್ದಾರೆ.

ಸಂದೇಶ್ ನಾಗರಾಜ್ ಒಡಹುಟ್ಟಿದವರು




ತಂದೆ ನೆನೆದಾಗಲೆಲ್ಲಾ ಕಣ್ಣೀರಾಗುತ್ತಾರೆ

ಬಸ್ ಆಕ್ಸಿಡೆಂಟ್ ಆದರೆ ಹೊಲ-ಮನೆ ಹಾಳಾಗುತ್ತದೆ ಎಂಬ ಒಂದೇ ಒಂದು ಕಾರಣಕ್ಕೆ ಮಾತ್ರ ಬೇಸರಗೊಂಡಿದ್ದನ್ನು ಬಿಟ್ಟರೆ ನಮ್ಮ ತಂದೆ ಜೀವನದುದ್ದಕ್ಕೂ ನನ್ನ ಬೆನ್ನೆಲುಬಾಗಿದ್ದರು. ನನ್ನ ಜೊತೆ ಮಾತು ಬಿಟ್ಟಾಗಲೂ ಕೃಷಿಯಿಂದ ಬಂದ ಹಣವನ್ನೆಲ್ಲಾ ನನಗಾಗಿ ಇಟ್ಟುಕೊಂಡು ಮನೆ ಕಟ್ಟುವಾಗ ತುಂಬಾ ಖುಷಿಯಿಂದ ನೀಡಿದ್ದರು. ನಾವು ಹೋಗುವುದು ತಿಳಿದರೆ ಊರ ಬಾಗಿಲಲ್ಲಿ ನಿಂತು ಕಾಯುತ್ತಿದ್ದರು. ನಮ್ಮ ತಂದೆಯನ್ನು ಅನಾರೋಗ್ಯದಿಂದ ಬಿಎಂ ಆಸ್ಪತ್ರೆಗೆ ಸೇರಿಸಿದ್ದಾಗ ಚೆನ್ನೈಗೆ ಹೋಗುತ್ತಿದ್ದ ನನ್ನನ್ನು ಕರೆಸಿಕೊಂಡಿದ್ದರು. ಆ ವೇಳೆ ಸ್ವಲ್ಪ ನೀರು ಬೇಕು ಎಂದು ಕೇಳಿದರು. ಅಲ್ಲಿದ್ದ ನರ್ಸ್ ನೀರು ಕುಡಿಸಲು ಹೋದಾಗ ನನ್ನ ಮಗನೇ ಕುಡಿಸಲಿ ಎಂದು ಕೇಳಿದರು. ಆಗ ಡಾಕ್ಟರ್ ಈಗ ನಿಮ್ಮ ಮಗ ಕುಡಿಸಬಹುದು ಆದರೆ ಅವರು ಚೆನ್ನೈಗೆ ಹೋಗುತ್ತಿದ್ದಾರೆ, ಆಮೇಲೆ ನರ್ಸ್‌ಗಳೇ ನೀರು ಕುಡಿಸಬೇಕಲ್ಲಾ ಎಂದು ತಮಾಷೆ ಮಾಡಿದ್ದರು. ಆದರೂ ಹಠ ಹಿಡಿದಿದ್ದರಿಂದ ನಾನೇ ನೀರು ಕುಡಿಸಿದೆ. ಆಗ ನಿನ್ನ ತಮ್ಮನನ್ನೂ(ಸಂದೇಶ್ ಸ್ವಾಮಿ) ಚೆನ್ನಾಗಿ ನೋಡಿಕೊ ಎಂದು ಮರುಕ್ಷಣವೇ ಅವರು ಇಹಲೋಕ ತ್ಯಜಿಸಿದರು ಎಂದು ಹೇಳುವಾಗ ಸಂದೇಶ್ ನಾಗರಾಜ್ ಗದ್ಗದಿತರಾಗಿ ಕಣ್ಣೀರಾದರು.

ಹೋಟೆಲ್ ಉಳಿಸಿಕೊಟ್ಟಿದ್ದು ಸಂದೇಶ್

ನಾನು ಮತ್ತು ಸಿದ್ದರಾಮಯ್ಯ ಬಿ.ಎಸ್ಸಿ ಸಹಪಾಠಿಗಳು. ನಾನು ರಾಜಕೀಯ ಗುರುಗಳಾದ ರಾಮಕೃಷ್ಣ ಹೆಗಡೆಯವರ ಜೊತೆಗಿದ್ದೆ, ಸಿದ್ದರಾಮಯ್ಯನವರು ಹೆಚ್.ಡಿ.ದೇವೇಗೌಡರ ಜೊತೆಗಿದ್ದರು. ಹೋಟೆಲ್ ಖರೀದಿಸಿದ ಮೂರೇ ತಿಂಗಳಿಗೆ ಪಕ್ಕದಲ್ಲಿ ಮತ್ತೊಂದು ಕಟ್ಟಡ ಕಟ್ಟಿದೆ. ಆ ವೇಳೆ ಕೆಎಸ್‌ಎಫ್‌ಸಿಯಿಂದ 2 ಕೋಟಿ ಸಾಲ ಮಾಡಿದ್ದೆ. ಸಾಲ ತೀರಿಸಲಾಗದೆ ಆ ಮೊತ್ತ ಐದೂವರೆ ಕೋಟಿ ಆಗಿತ್ತು. ಹೋಟೆಲ್ ಸೀಜ್ ಆಗುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಬಿಕಾಂ ಓದುವಾಗಲೇ ನನ್ನ ಮಗ ಸಂದೇಶ್‌ಗೆ ಸಿಲ್ಕ್ ಅಂಡ್ ಹ್ಯಾಡಿಕ್ರಾಫ್ಟ್ ಅಂಗಡಿ ವಹಿಸಿದ್ದೆ. ಅಲ್ಲದೆ ಅವನು ಬೆಂಗಳೂರಿನಲ್ಲಿ ಸಿಲ್ಕ್ ಅಂಗಡಿ ಹಾಗೂ ಹೋಟೆಲ್ ಮಾಡಿದ್ದ. ನಾನು ಐದೂವರೆ ಕೋಟಿ ಸಾಲ ತೀರಿಸಲಾಗದೆ ಅಸಹಾಯಕನಾಗಿ ಮನೆಯಲ್ಲಿದ್ದಾಗ ನನಗೆ ತಿಳಿಯದಂತೆ ಮಗ ಸಂದೇಶ್ ಸಾಲ ತೀರಿಸಿ, ಹೋಟೆಲ್ ದಾಖಲೆಗಳನ್ನು ತಂದುಕೊಟ್ಟ, ಅಂದಿನಿಂದ ಈವರೆಗೂ ಚಾಮುಂಡೇಶ್ವರಿ ಕೃಪೆಯಿಂದ ಚೆನ್ನಾಗಿದ್ದೇನೆ. ಮಗನ ಸಹಕಾರ ಇಲ್ಲದಿದ್ದರೆ ಈ ಮಟ್ಟಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಆತ ಗ್ರೇಟ್ ಮ್ಯಾನ್. ಪತ್ನಿ ನೇತ್ರಾವತಿ, ಮತ್ತೊಬ್ಬ ಮಗ ಮಂಜೇಶ್, ಮಗಳು ಬೃಂದಾ, ಅಳಿಯ ಜಯರಾಂ, ಸೊಸೆಯಂದಿರು ಎಲ್ಲರಿಗೂ ನನ್ನ ಬಗ್ಗೆ ಕಾಳಜಿ-ಪ್ರೀತಿ ಅಪಾರವಾಗಿದೆ. ಕುಟುಂಬದ ವಿಚಾರದಲ್ಲಿ ನಾನು ತುಂಬಾ ಅದೃಷ್ಟವಂತ.

– **ಸಂದೇಶ್ ನಾಗರಾಜ್**



ಸಂದೇಶ್ ನಾಗರಾಜ್ ಅವರ ತುಂಬು ಕುಟುಂಬ

'ಮಣ್ಣಿನ ದೋಣಿ'ಯೊಂದಿಗೆ ಸಿನಿ ಪಯಣ

ಕಾಲೇಜು ದಿನಗಳ ಸ್ನೇಹಿತ ಅಮರನಾಥ್ ಅಲಿಯಾಸ್ ಅಂಬರೀಶ್ ಬಹುದೊಡ್ಡ ನಟನಾಗಿ ಬೆಳೆದಿದ್ದರು. ಸಂದೇಶ್ ನಾಗರಾಜ್ ಅವರಿಗೂ ಚಿತ್ರರಂಗದ ಪರಿಚಯವಿದ್ದ ಕಾರಣ ಮನೆಗೆ ಬಂದಿದ್ದ ಅಂಬರೀಶ್ ಬಳಿ ಸಿನಿಮಾ ಮಾಡುವ ಇಂಗಿತ ವ್ಯಕ್ತಪಡಿಸಿದ್ದರು. ಅದಕ್ಕೆ ಅಂಬರೀಶ್ ಬೇಡ, ಹಣ ಕಳೆದುಕೊಳ್ಳಬೇಕಾಗುತ್ತದೆ ಎಂದು ಕಿವಿ ಮಾತು ಹೇಳಿದ್ದರು. ಆದರೆ ಪಟ್ಟು ಬಿಡದ ಸಂದೇಶ್ ನಾಗರಾಜ್, ಸದಭಿರುಚಿ ಸಿನಿಮಾ ನಿರ್ಮಿಸಲು ನಿರ್ಧರಿಸಿ, ತ್ರಿವೇಣಿ ಅವರ 'ಮಣ್ಣಿನ ದೋಣಿ' ಕಾದಂಬರಿ ಆಯ್ಕೆ ಮಾಡಿಕೊಂಡರು. ಆಗ ಆಕ್ಷನ್ ಸಿನಿಮಾಗಳಿಂದ ರೆಬೆಲ್ ಸ್ಟಾರ್ ಎನಿಸಿಕೊಂಡಿದ್ದ ಅಂಬರೀಶ್ ಹಾಕಿಕೊಂಡು ಕಾದಂಬರಿ ಆಧಾರಿತ ಸಿನಿಮಾ ಮಾಡಿದರೆ ಯಶಸ್ವಿಯಾಗುವುದಿಲ್ಲ ಎಂಬ ಮಾತುಗಳು ಕೇಳಿಬಂದವು. ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಸಂದೇಶ್ ಕಂಬೈನ್ಸ್ ಸಂಸ್ಥೆ ಮೂಲಕ 1992ರಲ್ಲಿ ನಿರ್ಮಿಸಿದ 'ಮಣ್ಣಿನ ದೋಣಿ' ಸಿನಿಮಾ ಶತದಿನೋತ್ಸವ ಆಚರಿಸಿತು. ಆ ಗೆಲುವು ಅಂಬರೀಶ್ ಜರ್ನಿಗೂ ದೊಡ್ಡ ತಿರುವು ನೀಡಿತು. ನಂತರ ಮುಂಜಾನೆಯ ಮಂಜು, ಮುಸುಕು, ಮೌನರಾಗ, ಮಾವನ ಮಗಳು, ಮೊಮ್ಮಗ, ಮೇಘ ಬಂತು ಮೇಘ, ಅರುಣೋದಯ, ಚಂದ್ರೋದಯ, ಅಸುರ, ಸಿಂಗಾರವ್ವ, ಗೌಡ್ರು, ಹಠವಾದಿ, ರವಿಶಾಸ್ತ್ರಿ, ಅ,ಆ,ಇ,ಈ, ಹುಡುಗ ಹುಡುಗಿ, ಪ್ರಿನ್ಸ್, ವೀರಬಾಹು, ಮಿಸ್ಟರ್ 420, ಮಂಗನ ಕೈಲಿ ಮಾಣಿಕ್ಯ, ಮಿ.ಐರಾವತ, ಅಮರ್, ಒಡೆಯ, ಶ್ರೀ ಕೃಷ್ಣ ಅಟ್ ಜೀ ಮೇಲ್.ಕಾಂ, ಹರಿಕತೆಯಲ್ಲ ಗಿರಿಕತೆ, ಗೋಸ್ಟ್ ಸೇರಿದಂತೆ ಸುಮಾರು 35 ಚಿತ್ರಗಳು ಸಂದೇಶ್ ಬ್ಯಾನರ್‌ನಡಿ ನಿರ್ಮಾಣಗೊಂಡಿವೆ. ಇನ್ನೂ ಮೂರ್‍ನಾಲ್ಕು ಚಿತ್ರಗಳು ನಿರ್ಮಾಣ ಹಂತದಲ್ಲಿವೆ. ಸಿಂಗಾರವ್ವ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಸಂದಿರುವುದು ಗಮನಾರ್ಹವಾಗಿದೆ. ಸಂದೇಶ್ ನಾಗರಾಜು ಅವರು ಸಿನಿ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಚೊಚ್ಚಲ ಚಿತ್ರ 'ಮಣ್ಣಿನ ದೋಣಿ' ಮುಹೂರ್ತ ಸಂದರ್ಭ



ಅಂದಿನ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರಿಂದ 'ಸಿಂಗಾರವ್ವ' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಸ್ವೀಕಾರ



ಡಾ. ರಾಜ್‌ಕುಮಾರ್, ವಿ.ರವಿಚಂದ್ರನ್ ಅವರೊಂದಿಗೆ ಸಂದೇಶ್ ನಾಗರಾಜ್





Promotional Feature


Sandesh The Prince
A Unit of Hotel Sandesh Pvt. Ltd.
Mysore
3, Nazarbad Main Road, Mysore - 570 010 | e-mail : info@sandeshtheprince.com | Contact : 93530 26508 | 0821-2436777 | 999
ಶ್ರೀ ಸಂದೇಶ್ ನಾಗರಾಜು ರವರ
80ನೇ ಜನ್ಮದಿನೋತ್ಸವ
ದಿನಾಂಕ : 31.08.2025
ಸ್ಥಳ : ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು
ಮಾನ್ಯ ಅಭಿಮಾನಿಗಳು
ಮತ್ತು ಸರ್ವರೂ ಆಗಮಿಸಿ
ಶುಭಹಾರೈಸಬೇಕಾಗಿ ವಿನಂತಿ
ಶುಭಕೋರುವವರು :
ಸಂದೇಶ್ ದಿ ಪ್ರಿನ್ಸ್ ಆಡಳಿತ ಮಂಡಳಿ
ಮತ್ತು ಸಿಬ್ಬಂದಿ ವರ್ಗ

ಐದನೇ ಪುಟದಿಂದ

ಮುದ್ರಾಂಕ ಶುಲ್ಕ ಹೆಚ್ಚಳ

ಅಧಿಕೃತ ಪೋರ್ಟಲ್ ಮೂಲಕ ಪಾವತಿ ಮಾಡಬೇಕು ಎಂದು ಮಲ್ಲೈ ಮುಗಿಲನ್ ಸಲಹೆ ನೀಡಿದ್ದಾರೆ. ಮೊದಲು ಬಳಸಿದ ಲಾಗಿನ್ ಮೂಲಕವೇ ಈ ಪಾವತಿ ಮಾಡಬೇಕು. ಅರ್ಜಿದಾರರಿಗೆ ನೆರವಾಗುವ ದೃಷ್ಟಿಯಿಂದ ಅಗತ್ಯ ಸೂಚನೆಗಳನ್ನು ಒಳಗೊಂಡ ಎಸ್‌ಎಂಎಸ್ ನೇರವಾಗಿ ಅವರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವುದು ಎಷ್ಟು ಸ್ಪಷ್ಟಪಡಿಸಿದ್ದಾರೆ. ಈಗಾಗಲೇ ದಸ್ತಾವೇಜುಗಳ ನೋಂದಣಿಗೆ ಸಲ್ಲಿಸಲಾಗಿರುವ ಹಾಗೂ ಪರಿಶೀಲನೆ ಮಾಡಿರುವ ದಸ್ತಾವೇಜುಗಳಿಗೆ ನೋಂದಣಿ ಶುಲ್ಕವನ್ನು ಮರು ಲೆಕ್ಕ ಹಾಕಲಾಗುವುದು. ಜೊತೆಗೆ ಪರಿಷ್ಕೃತದಲ್ಲಿ ಶೇಕಡ 2ರಂತೆ ನೋಂದಣಿ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ. ಈ ವರ್ಗದ ಅರ್ಜಿದಾರರಿಗೆ ಪಾವತಿ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲು ಪರಿಷ್ಕೃತ ನೋಂದಣಿ ಶುಲ್ಕದ ವಿವರವನ್ನು ತಿಳಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಇಲಾಖೆಯ ದಸ್ತಾವೇಜುಗಳ ನೋಂದಣಿ ಪಕ್ರಿಯೆಯಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಎಲ್ಲಾ ಅರ್ಜಿದಾರರಿಗೆ ಮೇಲ್ಕಾಣಿಸಿದ ನವೀಕರಿಸಿದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹಂತ ಹಂತವಾಗಿ ಅನುಸರಿಸಬಹುದಾದ ವಿವರವಾದ ಸೂಚನೆಗಳನ್ನು ಇಲಾಖೆಯ ಅಧಿಕೃತ ಪೋರ್ಟಲ್‌ಗಳಲ್ಲಿ ಲಭ್ಯವಾಗುವಂತೆ ಕಲ್ಪಿಸಲಾಗುವುದು ಎಂದು ಮಲ್ಲೈ ಮುಗಿಲನ್ ತಿಳಿಸಿದ್ದಾರೆ.

ಸೆ.2ಕ್ಕೆ ವಿಚಾರಣೆ ಮುಂದೂಡಿಕೆ

ಅವಕಾಶ ನೀಡುತ್ತಿಲ್ಲ. ಚಳಿಗಾಲವಿದೆ ಹೀಗಾಗಿ ದಿಂಬು, ಬ್ಲ್ಯಾಂಕೇಟ್ ನೀಡಲು ಅವಕಾಶ ಕೊಡಿ. ಜೊತೆಗೆ ಹೆಚ್ಚುವರಿ ಬಟ್ಟೆ, ನೈಟ್ ಡ್ರೆಸ್ ನೀಡುವಂತೆ ಮನವಿ ಮಾಡಿಕೊಂಡಿದ್ದಾರೆ. ಸದ್ಯ ಸಿಸಿಎಚ್ 57ನೇ ಕೋರ್ಟ್‌ನಲ್ಲಿ ನಟ ದರ್ಶನ್ ಸೇರಿ ಇತರರನ್ನು ಬೇರೆ ಜೈಲಿಗೆ ಸ್ಥಳಾಂತರ ಅರ್ಜಿ ಹಾಗೂ ದಿಂಬು, ಬೆಡ್‌ಶೀಟ್ ಕೋರಿರುವ ಅರ್ಜಿಯನ್ನು ಸೆ.2ಕ್ಕೆ ಮುಂದೂಡಿದ್ದಾರೆ. ಇನ್ನೂ ಸಿಸಿಎಚ್ 64ನೇ ಕೋರ್ಟ್‌ನಲ್ಲಿ ಎ1 ಆರೋಪಿ ಪವಿತ್ರಾಗೌಡ ಜಾಮೀನು ಅರ್ಜಿ ವಿಚಾರಣೆ ನಡೆಯಿತು. ಈ ವೇಳೆ ಪವಿತ್ರಗೌಡ ಪರ ಹಿರಿಯ ವಕೀಲ ಬಾಲನ್ ವಾದ ಮಂಡಿಸಿ, ಪವಿತ್ರಗೌಡ ವಿರುದ್ಧ ಆರೋಪ ಪಟ್ಟಿಯನ್ನು ಬಿಎನ್‌ಎಸ್ ಬದಲು ಸಿಆರ್‌ಪಿಸಿ ಅಡಿಯಲ್ಲಿ ಸಲ್ಲಿಕೆ ಮಾಡಿದ್ದಾರೆ. ಇದು ಕಾನೂನುಬಾಹಿರವಾಗಿರುವುದರಿಂದ ಕಡ್ಡಾಯ ಜಾಮೀನಿಗೆ ನಮ್ಮ ಕಕ್ಷಿದಾರರು ಅರ್ಹರು, ಹೀಗಾಗಿ ಜಾಮೀನು ಮಂಜೂರು ಮಾಡುವಂತೆ ಕೋರಿದ್ದಾರೆ. ಸದ್ಯ ನ್ಯಾಯಾಲಯ ಪವಿತ್ರಗೌಡ ಜಾಮೀನು ಅರ್ಜಿ ತೀರ್ಪನ್ನು ಸೆ.2ಕ್ಕೆ ಪ್ರಕಟಿಸಲಿದೆ.



ಸದ್ವಿದ್ಯಾ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವೈದ್ಯಸಾಹಿತಿ ಡಾ.ಎಸ್.ಪಿ.ಯೋಗಣ್ಣ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷ ಪ್ರೊ.ಎಂ.ಎಸ್.ಕೆ ನರಹರಿ ಬಾಬು, ಗೌರವ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ನಿರ್ದೇಶಕ ಡಾ.ಕೆ.ರಘುರಾಂ ವಾಜಪೇಯಿ, ಉಪಾಧ್ಯಕ್ಷ ಬಾಲಾಜಿ, ನಿರ್ದೇಶಕ ಸಿ.ಆರ್.ನಾಗರಾಜು ಇದ್ದಾರೆ.

ಎಂ.ಎ.ಸಲೀಂ ರಾಜ್ಯ ಪೊಲೀಸ್ ಮಹಾನಿರ್ದೇಶಕ



ಬೆಂಗಳೂರು, ಆ.30–ಕರ್ನಾಟಕದ ಪೊಲೀಸ್ ಮಹಾನಿರ್ದೇಶಕ(ಡಿಜಿ–ಐಜಿಪಿ)ರಾಗಿ ಹಿರಿಯ ಐಪಿಎಸ್ ಅಧಿಕಾರಿ ಎಂ.ಎ.ಸಲೀಂ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಐಪಿಎಸ್ ಅಧಿಕಾರಿ ಡಾ.ಎಂ.ಎ.ಸಲೀಂ ಅವರನ್ನು ರಾಜ್ಯ ಪೊಲೀಸ್ ಮುಖ್ಯಸ್ಥರಾಗಿ ನೇಮಿಸುವ ರಾಜ್ಯ ಸರ್ಕಾರದ ನಡೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ರಾಜ್ಯ ಸರ್ಕಾರ ಈ ಆದೇಶ ಹೊರಡಿಸಿದೆ. ಯುಪಿಎಸ್‌ಸಿಯಿಂದ ಆಯ್ಕೆ ಪಟ್ಟಿ ಬಂದ ಒಂದು ವಾರದೊಳಗೆ ನಿಯಮಿತ ಡಿಜಿಪಿಯನ್ನು ನೇಮಿಸಲಾಗುವುದು ಎಂದು ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು. ಅದರಂತೆ ಇದೀಗ ಹಿರಿಯ ಐಪಿಎಸ್ ಅಧಿಕಾರಿ ಎಂ.ಎ. ಸಲೀಂ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮಕ್ಕಳ ನಡುವಿನ ಜಗಳಕ್ಕೆ ತಂದೆಯ ಕೊಲೆ

ಹಾಸನ, ಆ.30– ಇಬ್ಬರ ಮಕ್ಕಳ ನಡುವಿನ ಜಗಳದ ಕಾರಣಕ್ಕೆ ಓರ್ವ ಮಗುವಿನ ತಂದೆಯಿಂದ ಇನ್ನೊರ್ವ ಮಗುವಿನ ತಂದೆ ಬರ್ಬರವಾಗಿ ಕೊಲೆಯಾದ ಆಘಾತಕಾರಿ ಘಟನೆ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಮುಜವಾರ್ ಮೊಹಲ್ಲಾದಲ್ಲಿ ನಡೆದಿದೆ.

ಒಂದು ಮಗುವಿನ ತಂದೆ ಫರಾನ್ ಎಂಬಾತ ಇನ್ನೊಂದು ಮಗುವಿನ ತಂದೆ ತೌಫಿಕ್ (28) ಕೊಲೆಗೈದಿದ್ದಾನೆ. ಈ ಘಟನೆಯಿಂದ ತೌಫಿಕ್‌ನ ಕುಟುಂಬಸ್ಥರು ರೊಚ್ಚಿಗೆದ್ದು, ಆರೋಪಿ ಫರಾನ್‌ನ ಮನೆ ಜಖಂಗೊಳಿಸಿ ಕಾರಿಗೆ ಬೆಂಕಿ ಹಚ್ಚಿದ್ದಾರೆ.

ವಿವರ: ಅರಸೀಕೆರೆ ನಗರದ ಖಾಸಗಿ ಶಾಲೆಯಲ್ಲಿ ಓದುತ್ತಿದ್ದ ತೌಫಿಕ್ ಹಾಗೂ ಫರಾನ್‌ನ ಮಕ್ಕಳು ಆ.25ರಂದು ಕ್ಷುಲ್ಲಕ ಕಾರಣಕ್ಕೆ ಗಲಾಟೆ ಮಾಡಿಕೊಂಡಿದ್ದರು. ಈ ವಿಷಯವೇ ತಂದೆಯರಾದ ತೌಫಿಕ್ ಮತ್ತು ಫರಾನ್ ನಡುವೆ ಜಗಳಕ್ಕೆ ಕಾರಣವಾಗಿದೆ. ಕಳೆದ 4 ದಿನಗಳ ಹಿಂದೆ ಅರಸೀಕೆರೆಯ ಬಿಎಚ್ ರಸ್ತೆಯ ಲಸ್ಸಿ ಶಾಪ್‌ನಲ್ಲಿ ಎದುರುಬದರಾದ ಇವರಿಬ್ಬರು, ಮಕ್ಕಳ ಜಗಳದ ವಿಷಯವನ್ನು ಮತ್ತೆ ಕೆದಕಿದ್ದಾರೆ. ಈ ವೇಳೆ ಗಲಾಟೆ ತಾರಕಕ್ಕೇರಿದ್ದು, ಫರಾನ್ ತೌಫಿಕ್‌ನನ್ನು ತಳ್ಳಿದ್ದಾನೆ. ಇದರಿಂದ ಮೆಟ್ಟಿಲುಗಳ ಮೇಲೆ ಬಿದ್ದ ತೌಫಿಕ್ ತೀವ್ರವಾಗಿ ಗಾಯಗೊಂಡಿದ್ದರು. ಗಾಯಗೊಂಡ ತೌಫಿಕ್‌ನನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಆ.29ರ ರಾತ್ರಿ ತೌಫಿಕ್ ಮೃತಪಟ್ಟಿದ್ದಾರೆ.

ಈ ಸಾವಿನಿಂದ ಕುಪಿತಗೊಂಡ ತೌಫಿಕ್‌ನ ಕುಟುಂಬಸ್ಥರು, ಸಂಬಂಧಿಕರು ಫರಾನ್‌ನ ಮನೆಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. ಹತ್ತಾರು ಮಂದಿ ಜನರು ಫರಾನ್‌ನ ಮನೆಯನ್ನು ಜಖಂಗೊಳಿಸಿ, ಅವರ ಕಾರಿಗೆ ಬೆಂಕಿ ಹಚ್ಚಿದ್ದಾರೆ. ಘಟನೆಯಿಂದ ಉಂಟಾದ ಉದ್ವಿಗ್ನ ಪರಿಸ್ಥಿತಿ ತಡೆಗಟ್ಟಲು ಅರಸೀಕೆರೆ ನಗರ ಠಾಣೆ ವ್ಯಾಪ್ತಿಯಲ್ಲಿ ಬಂದೋಬಸ್ತ್ ಮಾಡಿದ್ದಾರೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಪ್ರಕರಣದ ಕುರಿತು ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಭಾಪತಿ ಸ್ಥಾನದಿಂದ ಇಳಿಸಲು ಯತ್ನಿಸಿದರೆ ರಾಜೀನಾಮೆ

ಸಭಾಪತಿ ಬಸವರಾಜ ಹೊರಟ್ಟಿ ನಿರ್ಧಾರ



ಶಿರಸಿ, ಆ.30– ವಿಧಾನಪರಿಷತ್ತಿನಲ್ಲಿ ಈ ಹಿಂದೆ ಪಕ್ಷಗಳ ಬಲಾಬಲ ಬದಲಾದರೂ ಸಭಾಪತಿಗೆ ಬದಲಿಸಿರಲಿಲ್ಲ. ಈಗ ಕಾಂಗ್ರೆಸ್‌ಗೆ ಬಹುಮತ ಬಂದರೂ ನನಗೆ ಆತಂಕವಿಲ್ಲ. ನನ್ನನ್ನು ಸಭಾ ಪತಿ ಸ್ಥಾನದಿಂದ ಇಳಿಸಲು ಪ್ರಯತ್ನಿಸಿದರೆ, ತಕ್ಷಣವೇ ರಾಜೀನಾಮೆ ನೀಡುವೆ ಎಂದು ವಿಧಾನಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಒಂದು ವರ್ಷ ಅಥವಾ ಹತ್ತು ವರ್ಷ ಸಭಾಪತಿಯಾದರೂ ಅಧಿಕಾರದ ಬಳಿಕ, ಮಾಜಿ ಎನ್ನುತ್ತಾರೆ. ಈ ಹಿಂದೆ ವಿ.ಎಸ್.ಉಗ್ರಪ್ಪ ಮತ್ತು ಡಿ.ಎಚ್. ಶಂಕರಮೂರ್ತಿ ಅವರನ್ನು ಪಕ್ಷ ಬಲಾಬಲ ಬದಲಾದಾಗ ಅಧಿಕಾರದಿಂದ ಇಳಿಸಲಾಗಿತ್ತು. ಈಗ ಕಾಂಗ್ರೆಸ್ ಅಂಥ ಕೆಲಸ ಮಾಡಿದಲ್ಲಿ, ಇತಿಹಾಸ ನಿರ್ಮಿಸಿದಂತಾಗುತ್ತದೆ. ಇಂದು ಪರಿಷತ್‌ನಲ್ಲಿ ಅಲ್ಲದೇ, ಎಲ್ಲಿಯೂ ಮೌಲ್ಯ ಉಳಿದಿಲ್ಲ. ಎಲ್ಲವೂ ಮಾಜಿ ಸಿಎಂ ರಾಮಕೃಷ್ಣ ಹೆಗಡೆ ಅವರ ಕಾಲದಲ್ಲೇ ಮುಗಿದಿದೆ. ಈಗ ಹಣದ ಮತ ಹಾಕುವುದು, ಪಡೆಯುವುದು ನಡೆದಿದೆ ಎಂದರು.

WANTED

1. General Manager (Hospitality Sector with 3 to 5 years Experience)
2. Office Executive with computer knowledge
3. Business Development Officer/ Marketing
4. Account/Admin

Please share your CV to theclovers.mysore@gmail.com or

9606998085

ಇಂಪೀರಿಯಲ್ ಸಿಟಿ

HP

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

MUDA LIMITS

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ

ಕೇವಲ ₹749/ ಪ್ರತಿ ಚದರ ಅಡಿ

ಬುಕಿಂಗ್ ಪ್ರಾರಂಭವಾಗಿದೆ

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50 | 40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್ 95133 01854 / 88840 71010

ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

ಜಮೀನು ಬೇಕಾಗಿದೆ

ವಸತಿ ಉದ್ದೇಶಕ್ಕಾಗಿ (Layout Purpose)

MUDA ವ್ಯಾಪ್ತಿಯೊಳಗೆ For Jointventure(J.V)

ಭೂಮಿ ಬೇಕಾಗಿದೆ. 2 ಎಕರೆಯಿಂದ 20 ಎಕರೆವರೆಗೆ

MOB: 8884766212

(ತೋಟಗಾರಿಕೆ ಇಲಾಖೆ)

ತೋಟಗಾರಿಕೆ ಉಪ ನಿರ್ದೇಶಕರು,
ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ಮೈಸೂರು

Ph: 08227-295185 Email: biocentremysuru@gmail.com

ಇ–ಟೆಂಡರ್ ಪ್ರಕಟಣೆ

ತೋಟಗಾರಿಕೆ ಉಪ ನಿರ್ದೇಶಕರು, ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ಮೈಸೂರು ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ

1) ಟೆಂಡರ್ ಸಂಖ್ಯೆ **KSHD/2025-26/IND0094 CALL-2, ದಿ: 29.08.2025**

ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ಮೈಸೂರು ಇಲ್ಲಿನ ವಿವಿಧ ಪ್ರಯೋಗ ಶಾಲೆಗಳಲ್ಲಿ ಬಳಸಲು ಲ್ಯಾಮಿನಾರ್ ಏರ್ ಫ್ಲೋ ಘಟಕಗಳು ಮತ್ತು ಸ್ವಯಂಚಾಲಿತ ಡಿಜಿಟಲ್ ಫರ್ಮೆಂಟರ್ ಯಂತ್ರಗಳ ಖರೀದಿ,

ಈ ಮೇಲ್ಕಂಡ ಇ–ಟೆಂಡರ್‌ಗಳಿಗೆ ಆನ್ ಲೈನ್‌ನಲ್ಲಿ, ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿ: 15.09.2025, 17:00 ಗಂಟೆಯವರೆಗೆ, ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಗೆ ಭೇಟಿ ನೀಡಿ.

ಸಹಿ/– ತೋಟಗಾರಿಕೆ ಉಪ ನಿರ್ದೇಶಕರು
ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ಮೈಸೂರು

DIPR/DDMYS/870/KSMCA/479/2025-26

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು /ಸೇವೆಯನ್ನು ಪಡೆಯಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26/ IND1619	ಒಕ್ಕೂಟಕ್ಕೆ ಅಗತ್ಯವಿರುವ ಆರ್.ಒ.ಪ್ಲಾಂಟ್ ಹಾಗೂ ಸಾಫ್ಟನರ್ ಪ್ಲಾಂಟ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ಕಮಿಷನಿಂಗ್ ಕೆಲಸಗಳ ಜೊತೆಗೆ ಅದರ ಸಿವಿಲ್(ಸಂಪ್ & ಶೆಡ್ ನಿರ್ಮಾಣ), ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಕೆಲಸಗಳನ್ನು ಟರ್ನ್ ಕೀ ಆಧಾರದ ಮೇಲೆ ನಿರ್ವಹಿಸುವ ಬಗ್ಗೆ.	12.09.2025 ಸಂಜೆ 5.00 ಗಂಟೆಯವರೆಗೆ
2	KMF/2025-26/ IND1623	ಮೆಗಾ ಡೈರಿ ಆವರಣದಲ್ಲಿ ದಿನಪ್ರತಿ 1200cum ಸಾಮರ್ಥ್ಯದ ಇ.ಟಿ.ಪಿ ಘಟಕದ ವಿನ್ಯಾಸ, ಸಿವಿಲ್ ಕಾಮಗಾರಿ, ಸರಬರಾಜು, ಸ್ಥಾಪನೆ ಹಾಗೂ ಪ್ರಸ್ತುತ ಚಾಲನೆಯಲ್ಲಿರುವ ಇ.ಟಿ.ಪಿ.ಯೊಂದಿಗೆ ಜೋಡಣೆ ಕೆಲಸಗಳನ್ನು ಟರ್ನ್ ಕೀ ಆಧಾರದಲ್ಲಿ ನಿರ್ವಹಿಸುವ ಬಗ್ಗೆ.	
3	KMF/2024-25/ SE2756/ CALL-4	ಒಕ್ಕೂಟದ ಮೆಗಾ ಡೈರಿಯಲ್ಲಿ 800 KLD ಸಾಮರ್ಥ್ಯದ ತ್ಯಾಜ್ಯನೀರಿನ ಸಂಸ್ಕರಣಾ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಮಾನವ ಸಂಪನ್ಮೂಲವನ್ನು ದ್ವೈವಾರ್ಷಿಕ ದರ ಗುತ್ತಿಗೆಯನ್ನು ವಹಿಸಿಕೊಡುವ ಬಗ್ಗೆ.	
4	KMF/2025-26/ IND1602	ಒಕ್ಕೂಟಕ್ಕೆ ಅಗತ್ಯವಿರುವ ಪ್ಯಾಲೆಟ್ಸ್‌ಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	06.09.2025 ಸಂಜೆ 5.00 ಗಂಟೆಯವರೆಗೆ
5	KMF/2025-26/ IND1603	ಭೂತಾಳ ಪಿಚ್ ಮೈದಾನದಲ್ಲಿ ಒಕ್ಕೂಟದ ಮಿಲ್ಕ್ ಪಾರ್ಲರ್ ಸ್ಟ್ರಕ್ಚರ್ ಅನ್ನು ಅಳವಡಿಸುವ ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸುವ ಬಗ್ಗೆ.	

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (7411654264,9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

12ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ.ನಾಗಶಯನರಾವ್ AEE

ಸದಾ ನಿಮ್ಮ ನೆನಪಿನಲ್ಲಿರುವ ಮೀನಾ, ಕಾರ್ತಿಕ್, ಕೌಶಿಕ್, ಅಭಿಲಾಷ, ಇಶಾನ್ ಮತ್ತು ಕುಟುಂಬ ವರ್ಗದವರು, ಚಾಮರಾಜನಗರ

9964283217

SITE WANTED

Sardar Vallabhai Patel Nagar, J.S.S Layout, K.S.R.T.C. Layout.

MEASUREMENT:
30x40, 30x50, 40x60

Mob: 9663906675

Hi! TAXI

ONLY ONE WAY TAXI CHARGE

MYSORE to BANGALORE City drop or Pick up

BANGALORE to MYSORE Airport drop or Pick up — MYSURU

9611177599

ತಕ್ಷಣ ಬೇಕಾಗಿದ್ದಾರೆ

ನಮಗೆ ಸಹಾಯಕರು ಬೇಕು.
ನೇರ ನೇಮಕಾತಿ.
ಸಂದರ್ಶನ ದಿನಾಂಕ–01/09/2025
ಸಮಯ – ಬೆಳಿಗ್ಗೆ 9.30ಕ್ಕೆ
ವೇತನ 17000/–

9606003196

ಜಮೀನು ಮಾರಾಟಕ್ಕಿದೆ

ಹುಣಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 30 ಗುಂಟೆ ಜಮೀನು ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ

6360633036




ನನ್ನಪ್ಪನಿಗೆ 80
ನನ್ನಪ್ಪನ ಜನ್ಮದಿನ
ನನ್ನ ಪಾಲಿನ ಪುಣ್ಯದಿನ
ಎಲ್ಲರಂಥಲ್ಲ ನನ್ನಪ್ಪ
ಅನುದಿನ ನನ್ನ ಅತ್ಯಾಪ್ತ
ನೀವು ತೋರಿಸಿದ ಬೆಳಕು
ನನ್ನ ಬದುಕಾಯ್ತು ಒಳಪು
ನಮಗಾಗಿ ನಿಮ್ಮ ಈ ಎಂಬತ್ತು
ವರ್ಷಗಳ ಪರಿಶ್ರಮಕ್ಕೆ ನಾವು
ಪ್ರತಿಫಲ ನೀಡಲು ನೀವು
ನೂರ್ಕಾಲ ಬಾಳುವಂತೆ
ಭಗವಂತನಲ್ಲಿ ನಮ್ಮ ಪ್ರಾರ್ಥನೆ...
- ಸಂದೇಶ್ .ಎನ್
ಹೆಸರಾಂತ ಉದ್ಯಮಿ, ಚಿತ್ರ ನಿರ್ಮಾಪಕ ಹಾಗೂ
ಕಾಂಗ್ರೆಸ್ ಮುಖಂಡರು


80ನೇ ವರ್ಷದ ಜನ್ಮದಿನದ ಸಮಾರಂಭಕ್ಕೆ ಸರ್ವರಿಗೂ ಸುಸ್ವಾಗತ
ಯಶಸ್ವಿ ಉದ್ಯಮಿಯಾಗಿ, ಪ್ರಸಿದ್ಧ ರಾಜಕಾರಣಿಯಾಗಿ,
ಹೆಸರಾಂತ ಸಮಾಜ ಸೇವಕರಾಗಿ ಹಾಗೂ
ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿರ್ಮಾಪಕರಾಗಿ
ಜನಮಾನಸದಲ್ಲಿರುವ ನಿಮ್ಮ ಬದುಕು ಸಾರ್ಥಕ.
ನೂರ್ಕಾಲ ಬದುಕಿ, ಸಮಾಜಕ್ಕೆ ಮತ್ತಷ್ಟು ಸೇವೆ
ಸಲ್ಲಿಸುವ ಸುಯೋಗವನ್ನು, ಆಯುಷ್ಯನ್ನು,
ಆರೋಗ್ಯವನ್ನು, ತಾಯಿ ಶ್ರೀ ಚಾಮುಂಡೇಶ್ವರಿ ದಯ
ಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.
ನಿಮ್ಮ ಪ್ರೀತಿಯ
ಸಂದೇಶ್ ಸ್ವಾಮಿ.
ಮಾಜಿ ಮಹಾ ಪೌರರು
ಮತ್ತು ಕುಟುಂಬವರ್ಗದವರು
80
ಶ್ರೀ ಸಂದೇಶ್ ನಾಗರಾಜ್
ದಿನಾಂಕ : 31-08-2025ನೇ ಭಾನುವಾರ
ಸಮಯ : ಬೆಳಿಗ್ಗೆ 11 ಗಂಟೆಗೆ
ಸ್ಥಳ : ವಸ್ತುಪ್ರದರ್ಶನ ಮೈದಾನ, ಮೈಸೂರು.
ಪ್ರಕಟಣೆ : ಶ್ರೀ ಸಂದೇಶ್ ಸ್ವಾಮಿ
ಅಭಿಮಾನಿ ಬಳಗ, ಮೈಸೂರು


ಗಣೇಶ್ ಬಿಗ್ ಪ್ರಿಂಟ್
@ 9341009009
9901219487
ಚಾಮರಾಜನಗರ
ಲೋಕಸಭಾ ಸದಸ್ಯರಾದ
ಶ್ರೀ ಸುನೀಲ್ ಬೋಸ್‌ರವರಿಗೆ
ಜನ್ಮದಿನದ ಸಂಭ್ರಮ
ಶುಭಕೋರುವವರು:- ಕೆ.ಎಂ. ಮಧುಕುಮಾರ್, ಕಗ್ಗಲೀಪುರ
ಜಿಲ್ಲಾಧ್ಯಕ್ಷರು, ಮೈಸೂರು
ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪರವರ ಅಭಿಮಾನಿ ಬಳಗ (ರಿ.)

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಎಕ್ಸ್‌ಟ್ರಾ ಇನ್ನಿಂಗ್ಸ್

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಆಗಸ್ಟ್ 31 ಭಾನುವಾರ 2025

ಪುಟಗಳು: VIII

ಬಾನು ಮುಷ್ತಾಕರಿಗೆ ದಸರಾ ಉದ್ಘಾಟನೆಗೆ ಅವಕಾಶ ಬೇಡ

ಜಿಲ್ಲಾಧಿಕಾರಿಗಳಿಗೆ ಹಿಂದೂ ಸಮನ್ವಯ ಸಮಿತಿ ಮನವಿ ಸಲ್ಲಿಸಿ ಆಗ್ರಹ



ಈ ಬಾರಿಯ ದಸರಾ ಉದ್ಘಾಟನೆಗೆ ಹಿರಿಯ ಸಾಹಿತಿ ಭಾನು ಮುಷ್ತಾಕ್ ಅವರಿಗೆ ನೀಡಿರುವ ಆಹ್ವಾನವನ್ನು ಕೂಡಲೇ ಹಿಂಪಡೆಯುವಂತೆ ಒತ್ತಾಯಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಸಲ್ಲಿಸಿದರು.

ಮೈಸೂರು, ಆ.30(ಎಸ್‌ಪಿಎನ್)– ಈ ಬಾರಿಯ ದಸರಾ ಉದ್ಘಾಟನೆಗೆ ಹಿರಿಯ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ರಾಜ್ಯ ಸರ್ಕಾರದ ನಿರ್ಧಾರವು ಭಕ್ತರಲ್ಲಿ ತೀವ್ರ ಅಸಮಾಧಾನವನ್ನುಂಟು ಮಾಡಿದ್ದು, ರಾಜ್ಯ ಸರ್ಕಾರ ಈ ಕೂಡಲೇ ಇವರಿಗೆ ನೀಡಿರುವ ಆಹ್ವಾನವನ್ನು ಹಿಂಪಡೆಯುವಂತೆ ಒತ್ತಾಯಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬಳಿಕ ಸಮಿತಿ ಸಂಚಾಲಕ ಶರತ್ ಕುಮಾರ್ ಮಾಧ್ಯಮಗಳೊಂದಿಗೆ ಮಾತನಾಡಿ, ಹಿಂದೂಗಳಿಗೆ ಮೈಸೂರು ದಸರಾ ಕೇವಲ ಸಾಂಸ್ಕೃತಿಕ ಹಬ್ಬವಲ್ಲ. ದೇಶದ ಅತೀ ದೊಡ್ಡ ಧಾರ್ಮಿಕ ಹಾಗೂ ಪಾರಂಪರಿಕ ಹಬ್ಬ. ಒಂಬತ್ತು ದಿನಗಳ ನವರಾತ್ರಿ ವೇಳೆ ಕಾಳಿ, ಮಹಾಲಕ್ಷ್ಮಿ, ಸರಸ್ವತಿ ಸೇರಿದಂತೆ ಒಂಬತ್ತು ದೇವಿ ಅವತಾರವನ್ನು ಆರಾಧಿಸುತ್ತಾರೆ ಎಂದರು.

ಇಂತಹ ಪವಿತ್ರ ಹಬ್ಬದ ಉದ್ಘಾಟನೆಗೆ ಆಹ್ವಾನಿತರಾದ ಹಿರಿಯ ಸಾಹಿತಿ ಬಾನು ಮುಷ್ತಾಕ್ ಅವರು, ಚಾಮುಂಡೇಶ್ವರಿ ದೇವಿಯ ಮೇಲೆ ಶ್ರದ್ಧೆ, ಮೂರ್ತಿ ಪೂಜೆಯ ಮೇಲೆ ಭಕ್ತಿ ಹಾಗೂ ನಾಡದೇವಿಯ ಮೇಲೆ ಗೌರವ ಹೊಂದಿರಬೇಕು. ಆದರೆ ಉದ್ಘಾಟಕರಾದ ಹಿರಿಯ ಸಾಹಿತಿ ಬಾನು ಮುಷ್ತಾಕ್ ಹಿಂದೂ ಧರ್ಮದ ಬಗ್ಗೆ ಗೌರವ ಹೊಂದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ ಎಂದರು.

ಬಾನು ಮುಷ್ತಾಕ್ ಅವರ ಹಿಂದಿನ ಭಾಷಣಗಳಲ್ಲಿ ನಾಡದೇವಿ ಭುವನೇಶ್ವರಿ ದೇವಿಯನ್ನು ಒಪ್ಪುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ದತ್ತಪೀಠ ಹೋರಾಟದ ಸಂದರ್ಭದಲ್ಲೂ ಮುಸ್ಲಿಂ ಸಮುದಾಯದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಇಂತಹವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವುದು ಸಮಯೋಚಿತವಲ್ಲ. ಸರ್ಕಾರದ ಈ ನಿರ್ಧಾರ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಡಿಲು ಸೇವಾ ಟ್ರಸ್ಟ್ ಮೈಸೂರು ನವೀನ್, ಹಿಂದೂ ಮುಖಂಡರಾದ ಅಶೋಕ್, ಮಂಜುನಾಥ್, ದೀಪಕ್, ಹರೀಶ್, ನಿತೀನ್ ಯಾದವ್, ಸಂತೋಷ್, ಹಿಂದೂ ಜನಜಾಗೃತಿ ಸಮಿತಿಯ ರಾಘವೇಂದ್ರ, ಪುಟ್ಟರಾಜಯ್ಯ, ಯಶ್‌ಪಾಲ್, ಗೋಪಾಲ ಕೃಷ್ಣ, ನಾಗರಾಜ್ ಉಪಸ್ಥಿತರಿದ್ದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಸಂದೇಶ್ ನಾಗರಾಜರಿಗೆ ಅಭಿನಂದನೆ

ಸುದೀರ್ಘ ಕಾಲ ಚಿತ್ರರಂಗಕ್ಕೆ ಸಂದೇಶ್‌ರ ಕೊಡುಗೆ ಕೊಂಡಾಡಿದ ಚಿತ್ರೋದ್ಯಮಿಗಳು



ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಸಭಾಂಗಣದಲ್ಲಿ ಶನಿವಾರ ನಡೆದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಾರ್ಯಕಾರಿ ಸಭೆಯ ನಡುವೆ ಹಿರಿಯ ನಿರ್ಮಾಪಕ ಸಂದೇಶ್ ನಾಗರಾಜ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಆ.30(ಎಸ್‌ಬಿಡಿ)– ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ಹಿರಿಯ ನಿರ್ಮಾಪಕರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರನ್ನು ಶನಿವಾರ ಆತ್ಮೀಯವಾಗಿ ಅಭಿನಂದಿಸಲಾಯಿತು.

ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಭಾನುವಾರ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಸಮಾರಂಭ ಆಯೋಜಿಸಿರುವ ಹಿನ್ನೆಲೆಯಲ್ಲಿ ಇಂದು ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಸಭಾಂಗಣದಲ್ಲಿ ಸಂದೇಶ್ ನಾಗರಾಜ್ ಅವರನ್ನು ಅಭಿನಂದಿಸಿ, ಗೌರವಿಸಲಾಯಿತು.

ವಾಣಿಜ್ಯ ಮಂಡಳಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಸಂದೇಶ್ ನಾಗರಾಜ್, ಇಂದು ನನ್ನ ಜೀವನದ ಅತ್ಯಂತ ಸಂತೋಷದ ದಿನವಾಗಿದೆ. ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿರುವುದು ತುಂಬಾ ಖುಷಿಯಾಗಿದೆ. ಇದು ನಾನು ಜೀವನದಲ್ಲಿ ನಡೆದು ಬಂದಿರುವ ರೀತಿ–ನೀತಿಗೆ ದಕ್ಕಿರುವ ಪ್ರತಿಫಲವೆಂದು ಭಾವಿಸಿದ್ದೇನೆ. ವಯಸ್ಸಾದ ಮೇಲೆ ತಂದೆ–ತಾಯಿಯನ್ನು ಮೂಲೆಯಲ್ಲಿ ಕೂರಿಸುವ ಕಾಲಘಟ್ಟದಲ್ಲಿ ನನ್ನ ಪುತ್ರ ಸಂದೇಶ್, ತನ್ನ ಮುಂದಾಳತ್ವದಲ್ಲೇ ಹುಟ್ಟುಹಬ್ಬ ಸಮಾರಂಭವನ್ನು ಆಯೋಜಿಸುವ ಮೂಲಕ ಮಾದರಿಯಾಗಿದ್ದಾನೆ ಎಂದು ಪ್ರಶಂಸಿಸಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಮಾತನಾಡಿ, ಸಂದೇಶ್ ನಾಗರಾಜ್ ಅವರ ಪುತ್ರ ಸಂದೇಶ್, ಮೈಸೂರಿನಲ್ಲಿ ಆಯೋಜಿಸಿರುವ ಸಮಾರಂಭದ ಆಹ್ವಾನ ಪತ್ರಿಕೆ ನೀಡಿದ ಕೂಡಲೇ ಎಲ್ಲರೂ ಭಾಗವಹಿಸಬೇಕೆಂಬ ಕಾರಣದಿಂದ ಮಂಡಳಿಯ ಕಾರ್ಯಕಾರಿ ಸಮಿತಿ ಸಭೆಯನ್ನೂ ಇಲ್ಲಿಯೇ ನಡೆಸಲು ನಿರ್ಧರಿಸಿದೆವು. ಸಂದೇಶ್ ನಾಗರಾಜ್ ಅವರು ನೂರನೇ ವರ್ಷದ ಹುಟ್ಟುಹಬ್ಬವನ್ನೂ ಸಂಭ್ರಮದಿಂದ ಆಚರಿಸಿಕೊಳ್ಳಲಿ ಎಂದು ಶುಭ ಹಾರೈಸಿದರು.

ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಮಾತನಾಡಿ, ನಮ್ಮೆಲ್ಲರ ಹಿರಿಯರಾದ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬ ಸಮಾರಂಭದಲ್ಲಿ ನಾವೆಲ್ಲಾ ಭಾಗವಹಿಸಲೇಬೇಕೆಂದು ಒಂದು ದಿನ ಮುಂಚಿತವಾಗಿ ಬಂದು ಇಲ್ಲಿಯೇ ಕಾರ್ಯಕಾರಿ ಸಭೆ ನಡೆಸಿದ್ದೇವೆ. ಸಂದೇಶ್ ನಾಗರಾಜ್ ಅವರು ಕುಳಿತಿದ್ದ ಆಸನದಲ್ಲಿ ನಾವು ಕುಳಿತಿರುವುದು ಸಂತೋಷ ತಂದಿದೆ ಎಂದರು.

ಮತ್ತೋರ್ವ ಮಾಜಿ ಅಧ್ಯಕ್ಷ ಕೆ.ವಿ.ಚಂದ್ರಶೇಖರ್ ಮಾತನಾಡಿ, ಕನ್ನಡ ಚಿತ್ರರಂಗವನ್ನು ಬೆಳೆಸಿರುವ ಮಹಾನ್ ವ್ಯಕ್ತಿಗಳಲ್ಲಿ ಸಂದೇಶ್ ನಾಗರಾಜ್ ಅವರೂ ಪ್ರಮುಖರು. ತಮ್ಮ 80ನೇ ವಯಸ್ಸಿನಲ್ಲೂ ಚಲನಚಿತ್ರ ನಿರ್ಮಾಣವನ್ನು ಮುಂದುವರೆಸುವ ಮೂಲಕ ಇತಿಹಾಸದಲ್ಲಿ ದಾಖಲಾಗುವ ಸೇವೆ ಮಾಡುತ್ತಿದ್ದಾರೆ. ಎಷ್ಟೋ ಮಂದಿ ಚಿತ್ರರಂಗದಲ್ಲಿ ಸಂಪಾದನೆ ಮಾಡಿ ಬೇರೆ ಬೇರೆ ಕಾರಣಗಳಿಂದ ದೂರ ಉಳಿಯುವ ಕಾಲಮಾನದಲ್ಲಿ ಸಂದೇಶ್ ನಾಗರಾಜ್ ಅವರು ಮಾದರಿಯಾಗಿದ್ದಾರೆ. ಚಿತ್ರರಂಗ ಹಾಗೂ ವಾಣಿಜ್ಯ ಮಂಡಳಿ ಮೇಲೆ ಇವರ ಋಣವಿದೆ. ಸಾಕಷ್ಟು ಜನರಿಗೆ ಸಹಾಯ ಮಾಡಿದ್ದರೂ ಅವರೆಲ್ಲೂ ಹೇಳಿಕೊಂಡವರಲ್ಲ. ಅವರನ್ನು ಅಭಿನಂದಿಸುವ ನೆಪದಲ್ಲಿ ಅವರ ಆಶೀರ್ವಾದ ಪಡೆಯುತ್ತಿದ್ದೇವೆ ಎಂದು ಹೇಳಿದರು.

ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷರು ಹಾಗೂ ಹಿರಿಯ ನಿರ್ಮಾಪಕರುಗಳಾದ ಎಸ್.ಎ.ಚಿನ್ನೇಗೌಡರು ಹಾಗೂ ಸಾ.ರಾ.ಗೋವಿಂದು ಮಾತನಾಡಿ, ಚಿತ್ರರಂಗದಲ್ಲಿ ಸಂದೇಶ್ ನಾಗರಾಜ್ ಅವರ ಸಾಧನೆಯನ್ನು ಕೊಂಡಾಡಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ವಾಣಿಜ್ಯ ಮಂಡಳಿ ಉಪಾಧ್ಯಕ್ಷರಾದ ಕೆ.ಓ.ರಂಗಪ್ಪ, ಸಫೈರ್ ವೆಂಕಟೇಶ್, ಕಾರ್ಯದರ್ಶಿಗಳಾದ ಎಲ್.ಸಿ.ಕುಶಾಲ್, ಪ್ರವೀಣ್ ಕುಮಾರ್, ಎಂ.ಎನ್.ಕುಮಾರ್, ಖಜಾಂಚಿ ಚಿಂಗಾರಿ ಮಹದೇವ್ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಇದೇ ವೇಳೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಾರ್ಯಕಾರಿ ಸಮಿತಿ ಸಭೆ ನಡೆಸಲಾಯಿತು.

ಸಂಚಾರ ನಿಯಮ ಉಲ್ಲಂಘನೆ ಮಾಡಿದವರಿಂದ ಒಂದೇ ದಿನ 4.16 ಲಕ್ಷ ದಂಡ ಪಾವತಿ

ಮೈಸೂರು, ಆ.30(ಬಿಎಲ್‌ಯು)– ಸಂಚಾರ ನಿಯಮ ಉಲ್ಲಂಘನೆ ಮಾಡಿದವರು ಶೇಕಡ 50ರಷ್ಟು ರಿಯಾಯಿತಿಯಲ್ಲಿ ದಂಡ ಪಾವತಿ ಮಾಡುವ ಅವಕಾಶವನ್ನು ಬಳಸಿಕೊಳ್ಳುತ್ತಿದ್ದು, ಆಗಸ್ಟ್ 28 ರಂದು ಒಂದೇ ದಿನ 4.16 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ ಎಂದು ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಲ್ಲಿಕ್ ತಿಳಿಸಿದ್ದಾರೆ. ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ವಾಹನ ಚಾಲಕರು 1,650 ಚಲನ್‌ಗಳಲ್ಲಿ 4,16 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ದಂಡ ಪಾವತಿಗೆ ಸೆಪ್ಟಂಬರ್ 12 ಕೊನೆಯ ದಿನವಾಗಿದ್ದು, ಈ ಅವಕಾಶ ಬಳಸಿಕೊಂಡು ದಂಡ ಪಾವತಿ ಮಾಡಬಹುದು ಎಂದು ಮಲ್ಲಿಕ್ ತಿಳಿಸಿದ್ದಾರೆ.



ರಾಷ್ಟ್ರಕವಿ ಕುವೆಂಪುಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಗೆ ಶಿಫಾರಸ್ಸು ಮಾಡಲು ಮನವಿ



ಮೈಸೂರು, ಆ.30(ಜಿಎ)–ರಾಷ್ಟ್ರಕವಿ ಕುವೆಂಪು ಅವರಿಗೆ ಕೇಂದ್ರ ಸರ್ಕಾರ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡುವಂತೆ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕೆಂದು ಕುವೆಂಪು ವಿಶ್ವ ಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ಮಾತನಾಡಿ, ಈ ಸಂಬಂಧ ಆ.31ರಂದು ನಗರಕ್ಕೆ ಆಗಮಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು. ಈ ಮನವಿ ಪತ್ರ ಸಲ್ಲಿಕೆಗೆ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ ಮೊದಲಾದವರು ಬೆಂಬಲಿಸಿದ್ದು, ಸಿಎಂಗೆ ಮನವಿ ಸಲ್ಲಿಕೆ ವೇಳೆ ಹಾಜರಿರಲಿದ್ದಾರೆ ಎಂದರು.

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಕೇಳದವರಿಲ್ಲ. ಅವರು ಕನ್ನಡ ಸಾಹಿತ್ಯ, ಸಂಸ್ಕೃತಿಯ ಶತ ಪುರುಷರೂ ಆಗಿದ್ದಾರೆ. ಯುಗದ ಕವಿ, ಜಗದ ಕವಿ ಎಂದೇ ಬಣ್ಣಿತರಾದವರಾಗಿದ್ದಾರೆ. ಇವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಲು ಕೇಂದ್ರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕು. ಇವರನ್ನು ವಿಶ್ವ ಮಾನವ ಸಂದೇಶದ ಕಾರಣದಿಂದಾಗಿ ವಿಶ್ವರತ್ನ ರೆಂದರೂ ತಪ್ಪೇನಿಲ್ಲವೆಂದರು.

ಅವರು ಬದುಕಿದ್ದಾಗಲೇ ಭಾರತ ರತ್ನ ನೀಡಿದ್ದರೆ ವಿಶೇಷವಾದ ಅರ್ಥ ಇರುತ್ತಿತ್ತು. ದುರದೃಷ್ಟವಶಾತ್ ಸಿಗಲಿಲ್ಲ. ಅವರ ಕೃತಿಗಳೇನಾದರೂ ಆಗಲೇ ಇಂಗ್ಲಿಷ್‌ಗೆ ಅನುವಾದಗೊಂಡಿದಿದ್ದಲ್ಲಿ ನೊಬೆಲ್ ಪ್ರಶಸ್ತಿ ಖಂಡಿತ ದೊರ ಕುತ್ತಿತ್ತು. ಆದ ಕಾರಣ ಈಗಲಾದರೂ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಬೇಕೆಂದು ಕೋರಿದರು.

ಪ್ರೊ.ಸಿ.ನಾಗಣ್ಣ ಮಾತನಾಡಿ, ನಾವೀಗ ಸಕಾರಾತ್ಮಕ ಯೋಚನೆ ಕಾಲಘಟ್ಟದಲ್ಲಿದ್ದೇವೆ. ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕೆಂಬುದು ಕನ್ನಡಿಗರ ಮನಸ್ಸಿನಲ್ಲಿ ಮೂಡಿದೆ. ಇದರಿಂದ ಕನ್ನಡ ಭಾಷೆ ಬೆಳವಣಿಗೆ ಆಗುತ್ತದೆ. ಕನ್ನಡಿಗರ ದೃಷ್ಟಿಯಿಂದ ಹೊಸ ಸಂಚಲನವುಂಟಾಗುತ್ತದೆ. ಅಲ್ಲದೆ ರಾಜ್ಯದ ಅಭಿವೃದ್ಧಿಗೂ ನಾಂದಿ ದೊರೆಯುತ್ತದೆ ಎಂದರು.


ಗೋಷ್ಠಿಯಲ್ಲಿ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಜಯಣ್ಣ ಇದ್ದರು.

ಇಂದು ಶರಣ ಶ್ರೀ ನುಲಿಯ ಚಂದಯ್ಯರ ಜಯಂತಿ ಮಹೋತ್ಸವ

ಮೈಸೂರು,ಆ.30(ಜಿಎ)–ಜಿಲ್ಲಾಡಳಿತ, ಮೈಸೂರು ಜಿಲ್ಲಾ ಕೊರಮ–ಕೊರಚ ಮಹಾಸಂಘದ ಸಂಯುಕ್ತಾಶ್ರಯದಲ್ಲಿ ಆ.31ರಂದು ಮಧ್ಯಾಹ್ನ 12 ಗಂಟೆಗೆ ಕಲಾಮಂದಿರದಲ್ಲಿ 'ಶರಣ ಶ್ರೀ ನುಲಿಯ ಚಂದಯ್ಯ' ರವರ 918ನೇ ಜಯಂತಿ ಮಹೋತ್ಸವವನ್ನು ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಕೊರಮ–ಕೊರಚ ಮಹಾಸಂಘದ ಅಧ್ಯಕ್ಷ ಡಿ.ಎನ್.ಮುತ್ತುರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಂತಿ ಮಹೋತ್ಸವವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಕಾರ್ಮಿಕ ಸಚಿವ ಸಂತೋಷ್‌ಲಾಡ್ ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಶರಣ ಶ್ರೀ ನುಲಿಯ ಚಂದಯ್ಯ ಅವರ ಭಾವ ಚಿತ್ರಕ್ಕೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಪುಷ್ಪಾರ್ಚನೆ ನೆರವೇರಿಸಲಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸ್ಥಳೀಯ ಶಾಸಕರು, ಸಂಸದರು, ನಿಗಮ ಮಂಡಳಿ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.



ವಕೀಲರು, ಸಂಶೋಧಕರಾದ ಕಿರಣ್‌ಕುಮಾರ್ ಕೊತ್ತಗೆರೆ ಉಪನ್ಯಾಸ ನೀಡಲಿದ್ದು, ಸರ್ಕಾರಿ ಹುದ್ದೆಗಳಲ್ಲಿ ಉನ್ನತ ಸ್ಥಾನದಲ್ಲಿ ಸಾರ್ವಜನಿಕ ಸೇವೆ ಮಾಡುತ್ತಿರುವ ಆರು ಮಂದಿ ಹಿರಿಯ ಅಧಿಕಾರಿಗಳನ್ನು ಸನ್ಮಾನಿಸಲಾಗುವುದು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಕಳೆದ ಸಾಲಿನಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಕೊರಮ–ಕೊರಚ ಸಮುದಾಯ 50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು ಎಂದರು.

ಅಸಂಘಟಿತ ಪರಿಶಿಷ್ಟ ಜಾತಿ ಅಲೆಮಾರಿ ಕೊರಮ–ಕೊರಚ ಸಮುದಾಯ ಗುರುಗಳಾದ ಶರಣ ನುಲಿಯ ಚಂದಯ್ಯ ಅವರ ಜಯಂತಿ ಮಹೋತ್ಸವವನ್ನು ಕಳೆದ ನಾಲ್ಕು ವರ್ಷಗಳಿಂದ ಸರ್ಕಾರದ ಮಟ್ಟದಲ್ಲಿ ಆಚರಿಸಲಾಗುತ್ತಿದ್ದು, ಜಿಲ್ಲೆಯ ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಪರಿಶಿಷ್ಟ ಜಾತಿ ಒಳಮೀಸಲಾತಿ ಹಂಚಿಕೆಯಲ್ಲಿ ಅಸಂವಿಧಾನಿಕ ಪದ ಬಳಕೆ: ಸಂಘದ ಕಾರ್ಯಾಧ್ಯಕ್ಷ ಪಿ.ನಾಗರಾಜ್ ಮಾತನಾಡಿ, ನ್ಯಾ.ನಾಗಮೋಹನ್‌ದಾಸ್ ಅವರ ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆ ಆಧಾರದ ಮೇಲೆ ರಾಜ್ಯ ಸರ್ಕಾರ ಶೇ.17ರಷ್ಟು ಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಶೇ.6ರಷ್ಟು, ಎಡಗೈ ಸಮುದಾಯಕ್ಕೆ ಶೇ.6ರಷ್ಟು ಕೊರಮ, ಕೊರಚ, ಬೋವಿ, ಲಂಬಾಣಿ ಸೇರಿದಂತೆ 63 ಸ್ಪೃಶ್ಯ ಸಮುದಾಯಗಳಿಗೆ ಶೇ.5ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಿದೆ. ಆದರೆ, ಸ್ಪೃಶ್ಯ ಎಂಬುದೇ ಅಸಂವಿಧಾನ ಪದವಾಗಿದ್ದು, ವಿಮುಕ್ತ, ಅಲೆಮಾರಿ ಮತ್ತು ಸೂಕ್ಷ್ಮ ಸಮುದಾಯಗಳೆಂದು ಪರಿಗಣಿಸುವಂತೆ ಮುತ್ತುರಾಜ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಮಹಿಳಾಧ್ಯಕ್ಷೆ ಟಿ.ವೇದಾವತಿ, ಜಂಟಿ ಕಾರ್ಯದರ್ಶಿ ಎನ್.ರವಿಕುಮಾರ್, ಖಜಾಂಚಿ ಸೋಮಣ್ಣ ರಂಗಸಮುದ್ರ, ಉಪಾಧ್ಯಕ್ಷ ರಮೇಶ್ ಸಾತಗಳ್ಳಿ, ಮುಖಂಡ ಲೋಹಿತ್ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ನಾಳೆ ರಾಷ್ಟ್ರಪತಿ ಭೇಟಿ; ಪ್ರವೇಶ ನಿರ್ಬಂಧ



ಮೈಸೂರು: ಚಾಮುಂಡಿ ಬೆಟ್ಟದಲ್ಲಿರುವ ನಾಡದೇವತೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ದರ್ಶನಾರ್ಥವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆ.1ರ ಸೋಮವಾರ ರಾತ್ರಿ 8 ಗಂಟೆಗೆ ಭೇಟಿ ನೀಡುವ ಕಾರ್ಯಕ್ರಮ ನಿಗದಿಯಾಗಿರುವುದರಿಂದ ಸದರಿ ದಿನದಂದು ಸಾರ್ವಜನಿಕರಿಗೆ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8.30ರವರೆಗೆ ತಾವರೆಕಟ್ಟೆಯಿಂದ ಚಾಮುಂಡಿಬೆಟ್ಟಕ್ಕೆ ಪ್ರವೇಶ ನಿಷೇಧಿಸಿದೆ.

ಈ ಹಿನ್ನೆಲೆಯಲ್ಲಿ ದೇವಾಲಯವನ್ನು ಬೆಳಗ್ಗೆ 7.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ರಾತ್ರಿ 8.30ರ ನಂತರ ಸಾರ್ವಜನಿಕರಿಗೆ ದರ್ಶನದ ವ್ಯವಸ್ಥೆ ಕಲ್ಪಿಸ ಲಾಗಿದ್ದು ಭಕ್ತಾದಿಗಳು ಸಹಕರಿಸಬೇಕು ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನ ಭಗೀರಥ ಶೈಕ್ಷಣಿಕ, ಚಾರಿಟಬಲ್ ಟ್ರಸ್ಟ್‌ನಿಂದ ಸೆ.7ರಂದು ಚಿಂತನ–ಮಂಥನ ಸಭೆ

ಉಪ್ಪಾರ ಸಮುದಾಯದ ಮಕ್ಕಳಿಗೆ ಶೈಕ್ಷಣಿಕ ನೆರವು ಸಮುದಾಯದ ಶೈಕ್ಷಣಿಕ ಪ್ರಗತಿ ಬಗ್ಗೆ ಚರ್ಚೆ

ಮೈಸೂರು,ಆ.30(ಜಿಎ)–ಬೆಂಗಳೂರಿನ ಭಗೀರಥ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಉಪ್ಪಾರ ಸಮುದಾಯದ ಮಕ್ಕಳಿಗೆ ಶೈಕ್ಷಣಿಕ ನೆರವು, ಸಮುದಾಯದಲ್ಲಿ ಶೈಕ್ಷಣಿಕ ಪ್ರಗತಿ ಉದ್ದೇಶದಿಂದ ಸಮುದಾಯದ ನೌಕರರು, ನಿವೃತ್ತರನ್ನು ಒಂದೆಡೆ ಸೇರಿಸಿ ಅವರ ಬೆಂಬಲ, ಸಲಹೆ ಪಡೆಯುವ ಉದ್ದೇಶದಿಂದ ಸೆ.7ರಂದು ಮೈಸೂರು ವಲಯದ ಚಿಂತನ ಮಂಥನ ಸಭೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಡಿ.ಜಗನ್ನಾಥ ಸಾಗರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 11 ಗಂಟೆಗೆ ನಗರದ ಸರಸ್ವತಿಪುರಂನಲ್ಲಿನ ಉಪ್ಪಾರ ವಿದ್ಯಾರ್ಥಿ ನಿಲಯದಲ್ಲಿ ಸಭೆ ನಡೆಯಲಿದೆ. ನಂತರ ಮಧ್ಯಾಹ್ನ 2ಕ್ಕೆ ಟ್ರಸ್ಟ್ ಸರ್ವ ಸದಸ್ಯರ ಸಭೆ ನಡೆಯಲಿದೆ ಎಂದರು.

ಉಪ್ಪಾರ ಸಮುದಾಯದಲ್ಲಿ ಪ್ರತಿಭಾವಂತರಿದ್ದರೂ ಬಡತನ ಕಾರಣ ಅವರು ಉನ್ನತ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇದುವರೆಗೆ ರಾಜ್ಯದ 24 ಜಿಲ್ಲೆಗಳ 128 ವಿದ್ಯಾರ್ಥಿಗಳಿಗೆ ಸುಮಾರು 23 ಲಕ್ಷ ರೂ.ಗಳಷ್ಟು ಆರ್ಥಿಕ ನೆರವು ನೀಡಲಾಗಿದೆ. ಸಮುದಾಯದ ಹೆಣ್ಣು ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಪಡೆಯಲಾಗುತ್ತಿಲ್ಲ. ಇವರಿಗೆ ದೂರದ ಊರುಗಳಲ್ಲಿ ಕಾಲೇಜು ಮೊದಲಾದ ಕಡೆ ಪ್ರವೇಶ ದೊರೆತರೂ ವಿದ್ಯಾರ್ಥಿ ನಿಲಯಗಳಿಲ್ಲ. ಹೀಗಾಗಿ ಮೈಸೂರಿನ ಟ್ರಸ್ಟ್‌ನಲ್ಲಿ ಉಳಿದಿರುವ ಸುಮಾರು 42 ಲಕ್ಷ ರೂ., ನಲ್ಲಿ ಒಂದು ನಿವೇಶನ ಖರೀದಿಸಿ, ಸರ್ಕಾರದ ನೆರವಿನಿಂದ ವಿದ್ಯಾರ್ಥಿನಿಯರಿಗಾಗಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದಲ್ಲದೆ ಸಮುದಾಯದ ನೌಕರರು, ಅಧಿಕಾರಿಗಳು, ನಿವೃತ್ತರು ಸಹಾ ಯಾವ ರೀತಿ ಇದಕ್ಕೆ ನೆರವಾಗಬಹುದು ಎಂಬ ಸಲಹೆ ಹಾಗೂ ನೆರವು ಪಡೆಯಲು ಈ ಚಿಂತನ ಮಂಥನ ಸಭೆ ಆಯೋಜಿಸಲಾಗಿದೆ. ಹೀಗಾಗಿ ಸಮುದಾಯದವರು ಪಾಲ್ಗೊಳ್ಳಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಎ.ಟಿ.ಸೋಮಶೇಖರಪ್ಪ ಕೃಷ್ಣಸ್ವಾಮಿ, ಸಿ.ಎ.ಮಹದೇವಶೆಟ್ಟಿ, ಡಾ.ಸುರೇಶ್, ಯಶ್ವಂತ್‌ಕುಮಾರ್ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ...




ಮೈಸೂರು ಭಾರತೀಯ ಜೈನ್ ಸಂಘಟನೆಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಲಲಿತ್‌ಕುಮಾರ್‌ಜೀ ಕೋಠಾರಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಅಧ್ಯಕ್ಷ ಪ್ರವೀಣ್ ಲುಂಕಾರ್, ಕುಶಾಲ್ ಪಾರ್‌ಲೇಚಾ, ನೇಮಿಚಂದ್ ಬಡೋಲಾ, ದೀಪಕ್ ಬೋಹ್ರಾ, ರಾಜೇಂದ್ರ ದೇಸರಾಲ, ಮನೋಹರ್ ಸಂಕ್ಲಾ, ಸಂತೋಷ್ ಸಲೇಚಾ, ಸೀಮಾ ಬೋಹ್ರಾ, ಕೌಶಿಕ್ ಜೈನ್, ವಿಮಲ್ ಪಿಟಲಿಯಾ, ನಿಶಾ ಜೈನ್, ಸುಕ್‌ರಾಜ್ ವಿನಾಯಕಿಯಾ, ಸುನೀಲ್ ಪಟ್ವಾ, ನವರತನ್‌ಮಾಲ್ ಪಿಟಾಲಿಯಾ ಇದ್ದರು.

ಶಿಕ್ಷಕರ ಪ್ರತಿಭಟನೆ ಮುಂದೂಡಿಕೆ

ಮೈಸೂರು,ಆ.30(ಎಸ್‌ಪಿಎನ್)–ಪಿಎಸ್‌ಟಿ ಶಿಕ್ಷಕರ ಸಾಮೂಹಿಕ ಹಿಂಬಡ್ತಿ ಸೇರಿದಂತೆ ಶಿಕ್ಷಕರ ಇತರೆ ಬೇಡಿಕೆಗಳ ಈಡೇರಿಕೆಗಾಗಿ ಸೆ.3ರಂದು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮನವಿ ಮೇರೆಗೆ ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ನೇತೃತ್ವದಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ ಡಾ.ರಶ್ಮಿ ಮಹೇಶ್, ಆಯುಕ್ತ ಕೆ.ವಿ.ತ್ರಿಲೋಕಚಂದ್ರ ಹಾಗೂ ಪ್ರಾಥಮಿಕ ಶಿಕ್ಷಣ ವಿಭಾಗದ ನಿರ್ದೇಶಕಿ ಅನಿತಾ ನಜಾರೀಯಾ ಅವರ ಉಪಸ್ಥಿತಿಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಸೆ.4ರ ಸಚಿವ ಸಂಪುಟ ಸಭೆಯಲ್ಲಿ ಶಿಕ್ಷಕ ಬೇಡಿಕೆಗಳನ್ನು ಚರ್ಚಿಸುವ ಕುರಿತು ಸ್ಪಷ್ಟ ಭರವಸೆ ನೀಡಿದ ಹಿನ್ನೆಲೆಯಲ್ಲಿ ಸೆ.3ರಂದು ಜಿಲ್ಲಾ ಮತ್ತು ತಾಲೂಕು ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ತಾತ್ಕಾಲಿಕ ಮುಂದೂಡಲಾಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಗಣಪತಿ ಪ್ರತಿಷ್ಠಾಪನೆ



ಮೈಸೂರಿನ ಬನ್ನಿಮಂಟಪದ ಹನುಮಂತನಗರ 3ನೇ ಹಂತದಲ್ಲಿ ಶ್ರೀ ಪಂಚಮುಖಿ ಗಣಪತಿ ಗೆಳೆಯರ ಬಳಗದಿಂದ ಗಣಪತಿ ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಈ ವೇಳೆ ಬಳಗದ ಸದಸ್ಯರಾದ ರಾಘವೇಂದ್ರ, ಮಂಜುನಾಥ್, ಮಹೇಶ್, ಚಂದ್ರಶೇಖರ್, ರಾಜೇಂದ್ರ, ಕುಮಾರ್, ಮಧುಸೂಧನ್, ನವೀನ್, ಸಾಗರ್, ಕೌಶಿಕ್, ದೀಪುಗೌಡ, ಅರುಣ್‌ಕುಮಾರ್, ಯಶ್ವಂತ್, ವಿಕ್ರಮ್, ದೀಪು, ದರ್ಶನ್, ಧ್ರುವ,ರವಿ, ರಾಕೇಶ್, ವಿನಯ್, ನಿತೀಶ್, ಅರ್ಕೇಶ್, ಮಣಿ, ಚಿಂಟು, ಚಂದನ್, ಅಭಿ, ಸಚಿನ್, ಸಂತೋಷ್, ಧೃತಿ, ಆದ್ಯ, ಕವಿನ್, ಸಂಘದ ಸದಸ್ಯರು, ಮೊಹಲ್ಲಾ ನಿವಾಸಿಗಳು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.08.2025 ಭಾನುವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಯೂತ್ ಹಾಸ್ಟೆಲ್ಸ್ ಅಸೋಸಿಯೇಶನ್ ಆಫ್ ಇಂಡಿಯಾ, ಗಂಗೋತ್ರಿ ಘಟಕ, ಮೈಸೂರ್ ಸ್ಕೂಲ್ ಆಫ್ ಆರ್ಕಿಟೆಕ್ಚರ್, ವಾಟರ್ ಫೋರಂ, ಅರನ್ಯ ಔಟ್‌ರೀಚ್ ಮತ್ತು ಟೀಂ ಅನ್‌ಬೌಂಡ್‌ಗಳು:** ಬೆಳಗ್ಗೆ 7.15ಕ್ಕೆ ರೋಮಾಂಚಕ ಟ್ರೆಷರ್ ಹಂಟ್–'ಮೈಸೂರನ್ನು ಪುನಃ ಅನ್ವೇಷಿಸಿ–ಮರೆತಿರುವ ಪರಂಪರೆ ಪಥ', ಮುಖ್ಯ ಅತಿಥಿಗಳು: ನೈಸರ್ಗಿಕ ವಿಜ್ಞಾನಿ ಪ್ರೊ.ಯು.ಎನ್.ರವಿಕುಮಾರ್, ಡಾ.ಆರ್.ಜಿ.ಸಿ.ಶೇಖರ್, ಡಾ.ಚಂಪಾ ಹೆಚ್.ಎಸ್.ಶ್ರೀಮತಿ ಸುಖ್ಜಿತ್ ಕೌರ್, ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾ ರಂಭ, ಮುಖ್ಯ ಅತಿಥಿಗಳು: ಮೈಸೂರು ಪುರಾತತ್ವ, ಸಂಗ್ರಹಾಲಯ ಮತ್ತು ಪಾರಂಪರಿಕ ಇಲಾಖೆ ಆಯುಕ್ತ ದೇವರಾಜು, ಸ್ಥಳ: ಬೋಗಾದಿ ರಸ್ತೆಯ ಸಮೀಪದ ಕೆ.ಹೆಮ್ಮನಹಳ್ಳಿ ಮಹಾಲಿಂಗೇಶ್ವರ ದೇವಸ್ಥಾನ.

■ **ಕರ್ನಾಟಕ ರಾಜ್ಯ ಸವಿತಾ ಸಮಾಜ ನೌಕರರ ಸಂಘ, ತೆಲಗುರೆಡ್ಡಿ ಶ್ರೀರಾಮಮಂದಿರ:** ಸವಿತಾ ಸಮಾಜದ ವಧು–ವರರ ಸಮಾವೇಶ, ಸ್ಥಳ: ತೆಲುಗುರೆಡ್ಡಿ ಶ್ರೀರಾಮಮಂದಿರ, ತಿಲಕ್‌ನಗರ, ಬೆಳಗ್ಗೆ 9ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ರಿಂದ. ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಶ್ರೀ ಶ್ರೀ ಪಂಚಮುಖಿ ಗಣಪತಿ ಗೆಳೆಯರ ಬಳಗ :** 21ನೇ ವರ್ಷದ ಶ್ರೀ ವಿನಾಯಕ ಪೂಜಾ ಮಹೋತ್ಸವ, ಬೆಳಗ್ಗೆ 9.30ಕ್ಕೆ ಗಣಪತಿ ಹೋಮ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸ್ಥಳ: ಹನುಮಂತನಗರ, ಬನ್ನಿಮಂಟಪ.

■ **ಬಿಇಎಂಎಲ್ ಬಸವ ಸಮಿತಿ:** ಬಸವ ಜಯಂತಿ, ಸಮಿತಿ 34ನೇ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ಶಿವಬಸವ ಸ್ವಾಮೀಜಿ, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಎಸ್.ಎಸ್.ಪಾಟೀಲ್, ಉದ್ಘಾಟನೆ: ಬಿಇಎಂಎಲ್ ಸಹಾಯಕ ಪ್ರಧಾನ ವ್ಯವಸ್ಥಾಪಕ ಟಿ.ವಿ.ನಾಗೇಶ್, ಬಸವ ಶ್ರೀ ಪ್ರಶಸ್ತಿ ಪ್ರದಾನ: ಗುರುರಾಜ ಟಿ.ಎಸ್., ಮೊರಬದ ಮಲ್ಲಿಕಾರ್ಜುನ ಅವರಿಂದ ಉಪನ್ಯಾಸ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಬೆಳಗ್ಗೆ 9.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ನೆಲೆ ಹಿನ್ನೆಲೆ, ಜೋಳಿಗೆ ಪ್ರಕಾಶನ, ಚಾಮರಾಜನಗರ:** ಹನೂರು ಚನ್ನಪ್ಪ ಅವರ ಕಬ್ಬಿಣದ ಕುದುರೆಗಳು ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೃತಿ ಕುರಿತು: ಸಂಸ್ಕೃತಿ ಚಿಂತಕ ಡಾ.ನೆಲ್ಲುಕುಂಟೆ ವೆಂಕಟೇಶಯ್ಯ, ಉಪಸ್ಥಿತರು: ಶಾಸಕ ತನ್ವೀರ್ ಸೇಠ್, ಕವಯಿತ್ರಿ ಡಾ.ಹೆಚ್.ಎಲ್.ಪುಷ್ಪ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಶಾಸಕ ಮಂಜುನಾಥ್, ಹನೂರು ಚನ್ನಪ್ಪ, ಅಧ್ಯಕ್ಷತೆ: ಸಾಹಿತಿ ಡಾ.ವಡ್ಡಗೆರೆ ನಾಗರಾಜಯ್ಯ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 10ರಿಂದ.

■ **ಮೈಸೂರು ಸಿಟಿ ಶ್ರೀ ಶಿವಛತ್ರಪತಿ ಕೋ–ಆಪರೇಟಿವ್ ಸೊಸೈಟಿ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸೊಸೈಟಿ ಅಧ್ಯಕ್ಷ ಕೆ. ನಾಗೇಂದ್ರರಾವ್, ಸ್ಥಳ: ಶ್ರೀ ಲೋಕಾಭಿರಾಮ ಸಮುದಾಯ ಭವನ, ದೇವರಾಜ ಅರಸು, ಬೆಳಗ್ಗೆ 10ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ :** ಸ್ಥಾಪಕ ಅಧ್ಯಕ್ಷ ದಿವಂಗತ ಬಿ.ಎಸ್.ನಾಗರಾಜ್ ಪುತ್ಥಳಿ ಅನಾವರಣ ಹಾಗೂ ಸಹಕಾರಿ ಮೊಬೈಲ್ ಅಪ್ಲಿಕೇಷನ್ ಬಿಡುಗಡೆ ಸಮಾರಂಭ, ಉದ್ಘಾಟನೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿ.ಎಸ್.ನಾಗರಾಜ್ ಪುತ್ಥಳಿ ಅನಾವರಣ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ

■ **ಕಲಾ ಸುರುಚಿ:** ಸಾಹಿತ್ಯ ಚಾವಡಿ, ಅಂಕಣ ಸಾಹಿತ್ಯ, ಸಾಧ್ಯತೆ, ಸವಾಲು ಮತ್ತು ಸಿದ್ಧತೆ, ಸಂವಾದದಲ್ಲಿ ಉಪಸ್ಥಿತರು: ಉದ್ಯಮಿ ಎನ್.ರವಿಶಂಕರ್, ಕಲಾವಿದೆ ದೀಪಾ ರವಿಶಂಕರ್, ಲೇಖಕಿ ಅಲಕಾ ಕಟ್ಟೆಮನೆ, ಎಂಜಿನಿಯರ್ ಅಜಯ್ ಸ್ವರೂಪ್, ಸ್ಥಳ:ಸುರುಚಿ ರಂಗ ಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ. ನೀಲಕಂಠಸ್ವಾಮಿ, ಸ್ಥಳ: ಮೈಸೂರು ಜಿಲ್ಲಾ ಕಂದಾಯ ಇಲಾಖಾ ನೌಕರರ ಸಂಘ, ಕಂದಾಯ ಭವನ, ಹಳೇ ಡಿಸಿ ಕಚೇರಿ ಹತ್ತಿರ, ಬೆಳಗ್ಗೆ 11ಕ್ಕೆ

■ **ವ್ಯವಸ್ಥಾಪಕರು :** ಚಲನಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್ ಅವರ 80ನೇ ವರ್ಷದ ಹುಟ್ಟುಹಬ್ಬ, ಸದ್ಗಪಚಂದ್ರ ದರ್ಶನ ಶಾಂತಿ (ಸಾತಾಭಿಷೇಕ) ಮಹೋತ್ಸವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪಸ್ಥಿತರು : ಸಚಿವರಾ ಕೆ.ವೆಂಕಟೇಶ್, ಚೆಲುವರಾಯಸ್ವಾಮಿ, ಶಿವರಾಜ ತಂಗಡಗಿ, ಜಮೀರ್ ಅಹಮದ್, ಡಾ.ಹೆಚ್.ಸಿ. ಮಹದೇವಪ್ಪ, ಭೈರತಿ ಸುರೇಶ್, ವಿಪಕ್ಷ ನಾಯಕ ಆರ್.ಅಶೋಕ್, ಎಂ.ಶ್ರೀನಿವಾಸ್, ಡಾ.ಯತೀಂದ್ರ, ಸಾ.ರಾ.ಮಹೇಶ್, ಶಾಸಕ ಜಿ.ಟಿ.ದೇವೇಗೌಡ, ಸಂಸದ ಸುನೀಲ್ ಬೋಸ್, ಅರ್ಜುನ್ ಜನ್ಯ ಮತ್ತು ಚಿತ್ರ ತಂಡದವರಿಂದ ರಸಮಂಜರಿ ಕಾರ್ಯಕ್ರಮ, ಸ್ಥಳ: ದಸರಾ ವಸ್ತುಪ್ರದರ್ಶನ ಮೈದಾನ, ಬೆಳಗ್ಗೆ 11ಕ್ಕೆ

■ **ನಂದಿನಿ ನಾಗರಿಕ ಹಿತರಕ್ಷಣಾ ಸಮಿತಿ :** ಮಧ್ಯಾಹ್ನ 12ಕ್ಕೆ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ 18ನೇ ವಾರ್ಷಿಕ ಮಹಾಕುಂಭಾಭಿಷೇಕ, ಗೌರಿ–ಗಣೇಶ ಹಬ್ಬದ ವಾರ್ಷಿಕೋತ್ಸವದ ಸಮಾರೋಪ ಸಮಾರಂಭ, ಉದ್ಘಾಟನೆ : ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಒಡೆಯರ್, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಇ.ಎಸ್.ನಾಗರಾಜು, ಅತಿಥಿಗಳು : ಮೈಮುಲ್ ಅಧ್ಯಕ್ಷ ಆರ್. ಚಲುವರಾಜು, ಮಾಜಿ ಮೇಯರ್ ರುಕ್ಮಿಣಿ ಮಾದೇಗೌಡ, ಪಾಲಿಕೆ ಮಾಜಿ ಸದಸ್ಯ ಶ್ರೀಮತಿ ರಜಿನಿ ಅಣ್ಣಯ್ಯ, ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಮಾಜಿ ನಿರ್ದೇಶಕ ಎಸ್.ಸಿ.ಅಶೋಕ್, ಒಕ್ಕಲಿಗರ ಸಂಘದ ಅಧ್ಯಕ್ಷ ಎಂ. ಸುರೇಶ್‌ಗೌಡ; ಸಂಜೆ 6ಕ್ಕೆ ಶ್ರೀ ವರಸಿದ್ಧಿ ವಿನಾಯಕ ಉತ್ಸವಮೂರ್ತಿ ಮೆರವಣಿಗೆ, ಸ್ಥಳ: ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ ಸನ್ನಿಧಿ, ನಂದಿನಿ ಬಡಾವಣೆ, 1ನೇ ಹಂತ.

■ **ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ :** ಹಿರಿಯ ವಿದ್ಯಾರ್ಥಿ ಸಂಘದ ಸಭೆ, ಸ್ಥಳ: ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ ಮತ್ತು ವಿದ್ಯಾರ್ಥಿ ನಿಲಯ, ವಿದ್ಯಾರಣ್ಯಪುರಂ, ಮಧ್ಯಾಹ್ನ 1ಕ್ಕೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಡಾ. ನಾಗಲಕ್ಷ್ಮಿ ನಾಗರಾಜ್, ಚಂಪಕಾ ಅಕಾಡೆಮಿ ಮತ್ತು ವೃಂದದವರಿಂದ ಭರತನಾಟ್ಯ, ಸ್ಥಳ: ಗಣಪತಿ ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ, ಸಂಜೆ 7ರಿಂದ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಲೇಖಕ, ವಿಮರ್ಶಕ ಕಾಳೀಹುಂಡಿ ಶಿವಕುಮಾರ್ ಅವರು ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪತಿ ಚಿತ್ರ–ಲೇಖನಗಳ ಪ್ರದರ್ಶನ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಬೆಳಗ್ಗೆ 11.30ಕ್ಕೆ

■ **ಜಿಲ್ಲಾಡಳಿತ, ಮೈಸೂರು ಜಿಲ್ಲಾ ಕೊರಮ–ಕೊರಚ ಮಹಾಸಂಘ :** 'ಶರಣ ಶ್ರೀ ನುಲಿಯ ಚಂದಯ್ಯ'ರವರ 918ನೇ ಜಯಂತಿ ಮಹೋತ್ಸವ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ವಿಶೇಷ ಅತಿಥಿಗಳು : ಕಾರ್ಮಿಕ ಸಚಿವರಾದ ಸಂತೋಷ್ ಎಸ್.ಲಾಡ್, ಶರಣ ಶ್ರೀ ನುಲಿಯ ಚಂದಯ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಡಾ.ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಕರ್ನಾಟಕ ಕಲಾಮಂದಿರ, ಮಧ್ಯಾಹ್ನ 12ಕ್ಕೆ.

■ **ವಿಶ್ವ ವಿಕಾಸ ಟ್ರಸ್ಟ್, ಹೆಚ್.ಜಿ.ನಾಗರಾಜು ಹೊಂಗನೂರು, ಚಾತುರ್ಮಾಸ್ಯ ವ್ಯವಸ್ಥಾಪಕರ ಸಮಿತಿ :** ವೈಶ್ವಕರ್ಮಣಿ ಬ್ರಾಹ್ಮಣ ನಿತ್ಯಧಾರ್ಮಿಕ ಪೂಜಾ ವಿಧಿ ವಿಧಾನ ಕೃತಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ, ಉದ್ಘಾಟನೆ : ನಿವೃತ್ತ ಡಿವೈಎಸ್ಪಿ ಎಂ.ಸಿ.ಮರಿಸ್ವಾಮಿ, ಅಧ್ಯಕ್ಷತೆ: ನಿವೃತ್ತ ಜಂಟಿ ನಿರ್ದೇಶಕ ಮಂಟೇಲಿಂಗಾಚಾರ್, ಸನ್ಮಾನಿತರು: ಹೆಚ್.ಜಿ.ನಾಗರಾಜು, ಉಪಸ್ಥಿತರು: ಹೆಚ್.ಎಸ್.ನಂಜುಂಡಸ್ವಾಮಿ, ಸ್ಥಳ: ಚಿಕ್ಕಹಳ್ಳಿ, ಟಿ.ನರಸೀಪುರ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಹಕಾರಿ ಸಂಘ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಸಿ.ಎಲ್.ಶರ್ಮಿಳಾ, ಸ್ಥಳ: ಕುದೇರು ಮಠ, ಆಲನಹಳ್ಳಿ, ಮಧ್ಯಾಹ್ನ 3ಕ್ಕೆ.

■ **ವ್ಯವಸ್ಥಾಪಕರು :** ಗಾನ ಲಹರಿ ತಂಡದಿಂದ ಚಲನಚಿತ್ರ ನಟ ಕ್ರೇಜಿ ಸ್ಟಾರ್ ರವಿಚಂದ್ರನ್ ಹಾಗೂ ಪ್ರಸಿದ್ಧ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಅವರ ಹಿಟ್ಸ್ ಮ್ಯೂಸಿಕಲ್ ಪ್ರೋಗ್ರಾಮ್ 'ಅಮರ ಮಧುರ ಪ್ರೇಮ' ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ನಾದ ಬ್ರಹ್ಮ ಸಂಗೀತ ಸಭಾ ಆವರಣ, ಸಂಜೆ 5.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 64ನೇ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಸಂಜೆ 5.30ರಿಂದ ಸುನೀತ ಚಂದ್ರಕುಮಾರ್ ನೇತೃತ್ವದಲ್ಲಿ ಮೈಸೂರಿನ ರಘುಲೀಲಾ ಸಂಗೀತ ಮಂದಿರದ ವಿದ್ಯಾರ್ಥಿಗಳಿಂದ ಜಾನಪದ ಗೀತೆಗಳು, ಸಂಜೆ 6.45 ರಿಂದ ವಿದ್ವಾನ್ ರಾಹುಲ್ ವೆಲ್ಲಾಲ್ ಅವರಿಂದ ಗಾಯನ, ವಿದ್ವಾನ್ ಎಚ್.ಎನ್.ಭಾಸ್ಕರ್–ಪಿಟೀಲು, ವಿದ್ವಾನ್ ಸಾಯಿ ಗಿರಿಧರ್–ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜಂ–ಘಟಮ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಅಂಡಾಲ್ ಮಂದಿರಂ ಟ್ರಸ್ಟ್ :** ವೇಲುಕ್ಕುಡಿ ಶ್ರೀ ರಂಗನಾಥನ್ ಸ್ವಾಮಿಯವರಿಂದ ವೆಂಕಟೇಶ ಸ್ತೋತ್ರ ಕುರಿತು ಉಪನ್ಯಾಸ, ಸ್ಥಳ: ಶ್ರೀ ಅಂಡಾಲ್ ಮಂದಿರಂ ಟ್ರಸ್ಟ್, ವಾಣಿವಿಲಾಸಪುರಂ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ :** ಸಿದ್ಧ ಸಮಾಧಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಅಂತರರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘ (ಇಸ್ಕಾನ್) :** ರಾಧಾರಾಣಿಯ ಅವತರಣೆಯ ದಿನವಾದ ಶ್ರೀ ರಾಧಾಷ್ಟಮಿಯಂದು ವಿಶೇಷ ಕಾರ್ಯಕ್ರಮ, ಬೆಳಗ್ಗೆ 10 ರಿಂದ ಹರಿನಾಮ ಸಂಕೀರ್ತನೆ, ಸಂಜೆ 6 ರಿಂದ ರಾಧಾ ಅಷ್ಟೋತ್ತರ ಶತನಾಮ ಹೋಮ, ಸುಶ್ರಾವ್ಯ ಸಂಕೀರ್ತನೆ ಹಾಗೂ ವಿಶೇಷ ವೀಡಿಯೋ ಪ್ರಸ್ತುತಿ, ಸ್ಥಳ: ಇಸ್ಕಾನ್ ದೇವಾಲಯ.

■ **ಮಹೇಶ್ ಥಿಯೇಟರ್ ಗ್ರೂಪ್, ಗೆಜ್ಜೆ ಹೆಜ್ಜೆ ರಂಗ ತಂಡ :** ನಗೆ ನಾಟಕ ಸನ್ಮಾನ ಮಾರಾಟಕ್ಕೆ..? ನಿರ್ದೇಶನ : ವಿ. ಉದಯ್ ಕುಮಾರ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

■ **ಕೆಎಸ್‌ಆರ್‌ಟಿಸಿ ಗೆಳೆಯರ ಬಳಗ:** ಬೆಳಗ್ಗೆ 10ಕ್ಕೆ ಸಾರಿಗೆ ನಿಗಮದ ಸಂಸ್ಥಾಪನಾ ದಿನಾಚರಣೆ ಅಂಗವಾಗಿ 3ನೇ ವರ್ಷದ ರಾಜ್ಯ ಮಟ್ಟದ ಸಾರಿಗೆ ನೌಕರರ ಇನ್‌ಡೋರ್ ಶೆಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ, ಉದ್ಘಾಟನೆ : ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ವಿಭಾಗೀಯ ನಿಯಂತ್ರಣಾಧಿಕಾರಿ ಬಿ. ಶ್ರೀನಿವಾಸ್; ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಎಐಟಿಯುಸಿ ಅಧ್ಯಕ್ಷ ಅನಂತ ಸುಬ್ಬರಾವ್, ಸ್ಥಳ: ಮೈಸೂರಿನ ಸ್ಪೋರ್ಟ್ಸ್ ಪಾರ್ಕ್, ರಾಜರಾಜೇಶ್ವರಿನಗರ.

■ **ರಂಗಾಯಣ :** ಬೆಳಗ್ಗೆ 11ಕ್ಕೆ ಆದಿವಾಸಿ ಅಲೆಮಾರಿ ಕಲಾವಿದರೊಂದಿಗೆ ಮಾತುಕತೆ ಸರಣಿಯಲ್ಲಿ ಹಾಸನ ಜಿಲ್ಲೆಯ ಹೂವಿನಹಳ್ಳಿ ಕಾವಲು ಶಿಳ್ಳೆಕ್ಯಾತ ಸಮುದಾಯದ ರಾಜಾರಾಮ ತೊಗಲು ಗೊಂಬೆ ಮೇಳದ ಕಲಾವಿದ ಗುಂಡೂರಾವ್ ಮತ್ತು ಸಂಗಡಿಗರೊಂದಿಗೆ ಮಾತುಕತೆ, ಸಂಜೆ 6.30ಕ್ಕೆ ಶ್ರೀ ರಾಜಾರಾಮ ತೊಗಲು ಗೊಂಬೆ ಮೇಳದ ಕಲಾವಿದರಿಂದ ಶಿವ ಜಲಂಧರ ತೊಗಲು ಗೊಂಬೆ ಆಟದ ಪ್ರದರ್ಶನ, ಸ್ಥಳ: ಭೂಮಿಗೀತ ರಂಗಮಂದಿರ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ :** ವೀರಶೈವ–ಲಿಂಗಾಯತ ವಧು–ವರರ ಸಮಾವೇಶ, ಸಾನ್ನಿಧ್ಯ : ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಅಧ್ಯಕ್ಷತೆ : ಮಹಾಸಭಾ ಜಿಲ್ಲಾ ಘಟಕದ ನಿರ್ದೇಶಕ ಕಲ್ಮಳ್ಳಿ ನಟರಾಜು, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಮಧ್ಯಾಹ್ನ 3 ರಿಂದ.

■ **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್ :** ಉಚಿತ ಕಾರ್ಯಾಗಾರ, ಪ್ರಮಾಣ ಪತ್ರ ವಿತರಣೆ, ಉಪಸ್ಥಿತರು : ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ, ಅಂಶಿ ಪ್ರಸನ್ನಕುಮಾರ್, ಡಾ. ಲಕ್ಷ್ಮೀನಾರಾಯಣ ಶೆಣೈ, ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಡಿಸ್ಕವರ್ ಡಿಸೈನ್, ಭಾರತದ ಪ್ರಥಮ ಅಂತರಶಾಲಾ ಡಿಸೈನ್ ಫೆಸ್ಟಿವಲ್, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪ್ರಾಸ್ತಾವಿಕ ಭಾಷಣ: ಶ್ಯಾಮ್‌ಸುಂದರ್, ಸ್ಥಳ: ಪ್ರೊ.ಕೆ.ಎಸ್.ರಂಗಪ್ಪ ಸಭಾಂಗಣ, ಮೈಸೂರು ವಿವಿ, ಸಂಜೆ 5.30 ರಿಂದ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ವಿದ್ವಾನ್ ಡಾ. ನರಸಿಂಹನ್ ಅನಂತರಂಗಾಚಾರ್ ಅವರಿಂದ ವೇದಾಂತ ದೇಶಿಕರ ಯತಿರಾಜ ಸಪ್ತತಿ ಕುರಿತು ಉಪನ್ಯಾಸ, ಸ್ಥಳ: ಶ್ರೀ ಪರಕಾಲ ಮಠ, ಜಗನ್ಮೋಹನ ಅರಮನೆ ಹತ್ತಿರ, ಸಂಜೆ 6ಕ್ಕೆ.

■ **ಅಷ್ಟಾಂಗಯೋಗ ವಿಜ್ಞಾನ ಮಂದಿರಂ :** ಬೆಂಗಳೂರಿನ ಜಿ. ನಾಗರಾಜ್ ಅವರಿಂದ ಗಣಪತಿಯ ಆರಾಧನೆ ಕುರಿತು ಪ್ರವಚನ, ಸ್ಥಳ: ಅಷ್ಟಾಂಗಯೋಗವಿಜ್ಞಾನಮಂದಿರಂ, ದಿವಾನ್ಸ್ ರಸ್ತೆ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂಶಾಸ್ತ್ರಿ, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ರಾಷ್ಟ್ರೀಯ ನೇತ್ರದಾನ ಪಾಕ್ಷಿಕದ ಸಂದರ್ಭದಲ್ಲಿ ಹಿರಿಯ ನಾಗರಿಕರ ಕಣ್ಣುಗಳ ಆರೋಗ್ಯ ಕುರಿತು ನೇತ್ರತಜ್ಞರಾದ ಡಾ.ಪಲ್ಲವಿ ಪ್ರಭು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಡಾ.ಕುಲದೀಪ್.ಎನ್., 10.00 ಕೇಳಿ ಗಿಳಿಗಳೇ – ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH - TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.55 ಮನ್ ಕೀ ಬಾತ್, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಕೆಂಪಮ್ಮ ಮತ್ತು ಸಂಗಡಿಗರಿಂದ ಸಿದ್ದಲಿಂಗೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ : ರಂಗಭೂಮಿ ಕಲಾವಿದೆ ಹಾಗೂ ಚಿತ್ರನಟಿ ಅಕ್ಷತಾ ಪಾಂಡವಪುರ ಅವರೊಂದಿಗೆ ಸಂದರ್ಶನ. ಇವರೊಂದಿಗೆ ಭಾಗವಹಿಸುತ್ತಾರೆ: ಪ್ರಭುಸ್ವಾಮಿ ಮಳಿಮಠ ಹಾಗೂ ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಪಂಡಿತ್ ಹರಿಪ್ರಸಾದ್ ಚೌರಾಸಿಯಾ ಅವರ ಬಾನ್ಸುರಿ ವಾದನ ಹಾಗೂ ಡಾ.ಎಂ.ಬಾಲ ಮುರಳಿಕೃಷ್ಣ ಅವರ ಹಾಡುಗಾರಿಕೆಯ ಜುಗಲ್ ಬಂದಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ವಿಸ್ಮಯಕಾರಿ ಕೀಟ ಪ್ರಪಂಚ ಈ ಕುರಿತು ಮಾತನಾಡುತ್ತಾರೆ ಡಾ.ಎ.ಪ್ರಭುರಾಜ್, 8.00 ಮನ್ ಕೀ ಬಾತ್–ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅವತರಣಿಕೆಯ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 (ರಾಷ್ಟ್ರೀಯ ಧ್ವನಿಮುದ್ರಣ ಭಂಡಾರದ ಕಾರ್ಯಕ್ರಮ), 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ. ಶಿಲ್ಪಾ ಮಿಶ್ರ ಅವರ ಠುಮ್ರಿ, ದಾದ್ರ ಗಾಯನ

ಧರ್ಮಸ್ಥಳ ಕೇಸ್‌ನಲ್ಲಿ ಎಸ್‌ಐಟಿ ತನಿಖೆಗೆ ಸಮಯ ನಿಗದಿ ಮಾಡಿಲ್ಲ

ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸ್ಪಷ್ಟನೆ

ಬೆಂಗಳೂರು, ಆ.30– ಧರ್ಮಸ್ಥಳ ಕೇಸ್‌ನಲ್ಲಿ ಎಸ್‌ಐಟಿ ತನಿಖೆ ಪೂರ್ಣ ಮಾಡಲು ಸಮಯ ನಿಗದಿ ಮಾಡಿಲ್ಲ. ಎಸ್‌ಐಟಿ ತನಿಖೆ ನಡೆಸುವಾಗಲೇ ಎನ್‌ಐಎ ತನಿಖೆ ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಎಸ್‌ಐಟಿ ಅವರಿಗೆ ಅವರದ್ದೇ ಆದ ತೀರ್ಮಾನ ಇರುತ್ತದೆ. ಎಸ್‌ಐಟಿ ಅವರು ತನಿಖೆ ಮಾಡುತ್ತಿದ್ದಾರೆ. ತನಿಖೆ ಮುಗಿಯುವವರೆಗೂ ಅವರು ಯಾವ ವಿಚಾರಗಳನ್ನೂ ಹೇಳುವ ಹಾಗೆ ಇಲ್ಲ. ನಾವೂ ಹೇಳೋ ಹಾಗೆ ಇಲ್ಲ. ತನಿಖೆ ತ್ವರಿತವಾಗಿ ಆಗಲಿ ಎಂದು ಹೇಳಬಹುದು. ಎಸ್‌ಐಟಿಗೆ ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟಿದ್ದೇವೆ ಅದನ್ನು ಮಾಡುತ್ತಾರೆ. ಅದರಲ್ಲಿ ಅವರಿಗೆ ಬೇರೆ ಬೇರೆ ಮಾಹಿತಿ ಸಿಗುವ ಹಾಗಿದ್ದರೆ ಅವರೇ ತನಿಖೆ ಮಾಡಿಕೊಳ್ತಾರೆ. ಅದಕ್ಕೆ ನಾವು ಯಾವುದೇ ಡೈರೆಕ್ಷನ್ ಕೊಡುವುದಿಲ್ಲ ಎಂದು ತಿಳಿಸಿದ್ದಾರೆ.

ಸೌಜನ್ಯ ತಾಯಿ ಕೊಟ್ಟಿರುವ ದೂರು ತನಿಖೆ ಆಗುತ್ತಾ ಎಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಅದನ್ನು ಎಸ್‌ಐಟಿ ಅವರು ನಿರ್ಧಾರ ಮಾಡುತ್ತಾರೆ. ನಾವು ಅದನ್ನ ಹೇಳಲು ಸಾಧ್ಯವಿಲ್ಲ. ಧರ್ಮಸ್ಥಳ ಕೇಸ್ ತನಿಖೆ ಇಷ್ಟೇ ದಿನದಲ್ಲಿ ಮಾಡಿ ಎಂದು ಹೇಳಿಲ್ಲ ಆದಷ್ಟೂ ಬೇಗ ತನಿಖೆ ಮಾಡಿ ಎಂದು ಹೇಳಿದ್ದೇವೆ. ಸಮಯ ನಿಗದಿ ಮಾಡಲು ಆಗುವುದೇ ಇಲ್ಲ. ತನಿಖೆ ಹೇಗೆ ಹೋಗುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ಬೇಗ ಮುಗಿದರೆ ಬೇಗ ವರದಿ ಕೊಡುತ್ತಾರೆ. ತನಿಖೆ ಪೂರ್ತಿ ಮುಗಿಯುವವರೆಗೂ ಅವರು ತನಿಖೆ ಮಾಡುತ್ತಲೇ ಇರುತ್ತಾರೆ ಎಂದು ಹೇಳಿದ್ದಾರೆ.

ಎನ್‌ಐಎ ತನಿಖೆಗೆ ಕೊಡಿ ಎಂಬ ವಿಪಕ್ಷಗಳ ಆಗ್ರಹ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಧರ್ಮಸ್ಥಳದ ಹೆಗ್ಗಡೆಯವರು ಸೇರಿದಂತೆ ಎಸ್‌ಐಟಿ ತನಿಖೆಯನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ತನಿಖೆ ನಡೆಯುತ್ತಿದೆ. ಈ ಸಮಯದಲ್ಲಿ ಬೇರೆ ಏಜೆನ್ಸಿಯಿಂದ ತನಿಖೆ ಆಗತ್ಯವಿಲ್ಲ. ಹೀಗಾಗಿ ಸದ್ಯಕ್ಕೆ ಎನ್‌ಐಎ ತನಿಖೆಗೆ ಕೊಡುವುದಿಲ್ಲ ಎಂದು ತಿಳಿಸಿದ್ದಾರೆ.

ಈವರೆಗೂ ಪ್ರಕರಣದಲ್ಲಿ ಯಾರನ್ನು ಬಂಧಿಸದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ತನಿಖೆಗಳು ನಾನು, ನೀವು, ಬೇರೆಯವರು ಹೇಳಿದ ಹಾಗೆ ನಡೆಯುವುದಿಲ್ಲ. ಎಸ್‌ಐಟಿ ಅವರಿಗೆ ಅವರದ್ದೇ ಆದ ತನಿಖೆಯ ಕ್ರಮಗಳಿವೆ. ಅದನ್ನು ಅವರು ಮಾಡುತ್ತಾರೆ. ಸ್ಯಾಂಪಲ್ ತಂದು ಎಫ್‌ಎಸ್‌ಎಲ್‌ಗೆ ಕೊಟ್ಟಿದ್ದಾರೆ. ಅದರ ಮಾಹಿತಿ ಪಡೆಯಬೇಕು. ಅದರ ರಿಪೋರ್ಟ್ ಬರಬೇಕು. ಅದರ ಮೇಲೆ ಏನೇನು ಇರುತ್ತದೆಯೋ ಗೊತ್ತಿಲ್ಲ ಎಂದರು. ಇನ್ನು ದ್ವಾರಕನಾಥ್ ಎನ್‌ಐಎ, ಸಿಬಿಐಗೆ ಕೊಟ್ಟರೆ ಕೇಸ್ ಮುಚ್ಚಿ ಹೋಗುತ್ತದೆ ಎಂಬ ಹೇಳಿಕೆ ವಿಚಾರವಾಗಿ ಮಾತನಾಡಿ, ಎಲ್ಲರ ಹೇಳಿಕೆಗೆ ನಾನು ಪ್ರತಿಕ್ರಿಯೆ ಮಾಡುವುದಿಲ್ಲ ಎಂದಿದ್ದಾರೆ.

ಎಚ್.ವಿ.ರಾಜೀವ್ ಜನ್ಮದಿನ ಆಚರಣೆ



ಮೈಸೂರು, ಆ. 30– ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಅವರ ಹುಟ್ಟುಹಬ್ಬದ ಪ್ರಯುಕ್ತ ಟಿಂಬರ್ ನಾಗರಾಜ್ ನೇತೃತ್ವದಲ್ಲಿ ಎಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ಅಗ್ರಹಾರದಲ್ಲಿರುವ ನೂರೊಂದು ಗಣಪತಿ ದೇವಸ್ಥಾನದಲ್ಲಿ ಎಚ್.ವಿ. ರಾಜೀವ್ ಅವರ ಜನ್ಮ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಶುಕ್ರವಾರ ಬೆಳಗ್ಗೆ ದೇವಸ್ಥಾನದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಎಚ್.ವಿ.ರಾಜೀವ್ ಅವರ ಹೆಸರಲ್ಲಿ ವಿಶೇಷ ಅರ್ಚನೆ ಮಾಡಿಸಿ ದೇವಾಲಯದ ಎದುರು ನೂರೊಂದು ಈಡುಗಾಯಿ ಹೊಡೆಯಲಾಯಿತು. ಬಳಿಕ ಆಗಮಿಸಿದ ಭಕ್ತರಿಗೆ ಸಿಹಿ ವಿತರಣೆ ಮಾಡಿ ರಾಜೀವ್ ಅವರಿಗೆ ಆರೋಗ್ಯ, ಆಯಸ್ಸು, ಯಶಸ್ಸು, ರಾಜಕೀಯದಲ್ಲಿ ಉನ್ನತ ಸ್ಥಾನಮಾನ ದೊರಕಲಿ ಎಂದು ಪ್ರಾರ್ಥನೆ ಸಲ್ಲಿಸಲಾಯಿತು.

ಮುಖಂಡರಾದ ಟಿಂಬರ್ ನಾಗರಾಜು, ಮಾಜಿ ಮೇಯರ್ ಬೈರಪ್ಪ, ನಗರ ಪಾಲಿಕೆಯ ಮಾಜಿ ಸದಸ್ಯ ಮಲ್ಲೇಶ್, ಅಹಿಂದ ಶಿವರಾಂ, ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸವರಾಜು, ರಿಷಿ ವಿಶ್ವಕರ್ಮ, ಸಿಟಿ ಆಚಾರ್ಯ, ಮೊಗಣ್ಣಚಾರ್, ಬಿಲ್ಡರ್ ವೆಂಕಟೇಶ್, ಯೋಗೇಶ್, ಬಿ.ಜಿ.ಕೇಶವ್, ಕುಮಾರ್, ರಾಮ್ ಪ್ರಸಾದ್, ಶಿವಕುಮಾರ್, ಕಿಟ್ಟಿ, ಡೇರಿ ವೆಂಕಟೇಶ್, ಶ್ರೀಕಂಠ, ಸುರೇಶ್, ಹರೀಶ್, ಕಂಸಾಳೆ ರವಿ, ಮಹಾದೇವಸ್ವಾಮಿ, ಮುರಳಿ, ಕುಮಾರಸ್ವಾಮಿ, ಹರಿದಾಸ್, ಸ್ವಾಮಿ ದೇವರು, ವಿವೇಕ್, ಗಿರೀಶ್, ಶಿವು ಮತ್ತಿತರರು ಉಪಸ್ಥಿತರಿದ್ದರು.

ದಸರಾ ಆಹಾರ ಮೇಳದಲ್ಲಿ ಸ್ವಚ್ಛತೆಗೆ ಎಂಜಿಪಿ ಆಗ್ರಹ

ಮೈಸೂರು, ಆ.30(ಎಸ್‌ಪಿಎನ್)– ಈ ಬಾರಿ ದಸರಾ ಆಹಾರ ಮೇಳದಲ್ಲಿ ಗುಣಮಟ್ಟದ ಆಹಾರ, ತಿಂಡಿ–ತಿನಿಸು ಮಾರಾಟಕ್ಕೆ ಹಾಗೂ ಮಳಿಗೆ ಮಾಲೀಕರ ಪೂರ್ಣ ವಿವರಗಳನ್ನು ಗ್ರಾಹಕರಿಗೆ ಕಾಣಿಸುವಂತೆ ಪ್ರದರ್ಶಿಸಬೇಕೆಂದು ಮೈಸೂರು ಗ್ರಾಹಕರ ಪರಿಷತ್ ಸಭೆಯಲ್ಲಿ ಸದಸ್ಯರು ಜಿಲ್ಲಾಡಳಿತವನ್ನು ಒತ್ತಾಯಿಸಿದರು.



ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರದ ನಿಯೋಜಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ ಅವರೊಂದಿಗೆ ಮೈಗ್ರಾಪ ಸದಸ್ಯರು ಚರ್ಚಿಸುತ್ತಿರುವುದು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಕ್ಯಾನ್ಸರ್ ಕಾರಕ ಅಂಶಗಳ ಕುರಿತು ಹಾಗೂ ಆಹಾರ ಸುರಕ್ಷತೆ ಕುರಿತು ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದ ನಿಯೋಜಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ ಅವರೊಂದಿಗೆ ಸಂವಾದ ಸಂದರ್ಭದಲ್ಲಿ ಚರ್ಚಿಸಿದರು.

ಎಂಜಿಪಿ ಸದಸ್ಯ ಬಾಮಿ ವಿ.ಶೆಣೈ ಮಾತನಾಡಿ, ಪ್ರತಿ ಬಾರಿ ದಸರಾ ಸಂದರ್ಭದಲ್ಲೂ ಆಹಾರ ಮೇಳದಲ್ಲಿ ಗುಣಮಟ್ಟದ ಆಹಾರ ಮಾರಾಟಕ್ಕೆ ಒತ್ತು ನೀಡುವುದಿಲ್ಲ ಎಂಬ ದೂರುಗಳಿವೆ. ಈ ವಿಷಯದಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಗ್ರಾಹಕರಿಗೆ ಯಾವ ರೀತಿ ನ್ಯಾಯ ಒದಗಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತ್ರಿಯಿಸಿದ ಪ್ರಾಧಿಕಾರದ ನಿಯೋಜಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ, ಹಿಂದಿನ ಬಾರಿ ದಸರಾ ಆಹಾರ ಮೇಳದಲ್ಲಿ ಆಹಾರ ಸುರಕ್ಷತೆ ಬಗ್ಗೆ ಮಳಿಗೆದಾರರಿಗೆ ಮಾಹಿತಿ ನೀಡಲಾಗಿತ್ತು. ಆಹಾರ ಮೇಳದಲ್ಲಿ ಆಹಾರ ಸುರಕ್ಷತೆ ಕುರಿತು ಅನುಮಾನ ಬಂದರೆ, ದೂರು ನೀಡುವಂತೆ ಡಿಜಿಟಲ್ ಬೋರ್ಡ್‌ಗಳ ಮೂಲಕ ಮೊಬೈಲ್ ನಂಬರ್ ಪ್ರದರ್ಶನ ಮಾಡಲಾಗಿತ್ತು. ಈ ಬಾರಿಯೂ ಅದೇ ಪದ್ಧತಿ ಮುಂದುವರೆಯುತ್ತದೆ ಎಂದು ಉತ್ತರಿಸಿದರು.

ಮೈಸೂರು ನಗರದ ಫುಟ್‌ಪಾತ್ ಗಾಡಿಗಳಲ್ಲಿ ತಯಾರಿಸಿ ಗ್ರಾಹಕರಿಗೆ ಮಾರಾಟ ಮಾಡುವ ಆಹಾರದಲ್ಲಿ ಗುಣಮಟ್ಟ, ಸ್ವಚ್ಛತೆ ಇರುವುದಿಲ್ಲ ಎಂದು ಹಲವರು ದೂರಿದ್ದಾರೆ. ಇದರ ಬಗ್ಗೆ ದೂರು ನೀಡಲು ಆ ವರ್ತಕರ ಮಾಹಿತಿ ಗ್ರಾಹಕರ ಬಳಿ ಇರುವುದಿಲ್ಲ. ದೂರು ನೀಡಲು ಯಾವುದೇ ಅಧಿಕಾರಿಗಳ ಮೊಬೈಲ್ ನಂಬರ್ ಸಾಮಾನ್ಯ ಗ್ರಾಹಕರ ಬಳಿ ಇರುವುದಿಲ್ಲ ಆ ಸಂದರ್ಭದಲ್ಲಿ ಏನು ಮಾಡಬೇಕು ಸದಸ್ಯೆ ಗೀತಾ ವೇಲುಮಣಿ ಪ್ರಶ್ನಿಸಿದರು.

ಇದಕ್ಕೆ ಪ್ರತ್ರಿಯಿಸಿದ ರವೀಂದ್ರ, ಕಲಬೆರಕೆ ಪರೀಕ್ಷೆಯಲ್ಲಿ ಸಾಬೀತಾದರೆ, ಅಂತಹ ಮಾಲೀಕರ ವಿರುದ್ಧ ಕೇಸ್ ದಾಖಲಿಸಿ, ದಂಡ ವಿಧಿಸಲಾಗುತ್ತದೆ. ಲೈಸನ್ಸ್ ಕೂಡ ರದ್ದು ಮಾಡಲು ಶಿಫಾರಸ್ಸು ಮಾಡುತ್ತೇವೆ ಎಂದು ಉತ್ತರಿಸಿದರಲ್ಲದೆ, ಆಹಾರ ಸುರಕ್ಷತೆ ಕುರಿತಾಗಿ ಗ್ರಾಹಕರು ಮೊ.ಸಂ:99116–60369ಗೆ ಮಾಹಿತಿ ನೀಡಬಹುದು ಎಂದರು.

2024ರ ಸೆ.2ರಿಂದ ಇಂದಿನವರಿಗೆ 29 ಪ್ರಕರಣಗಳು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಐದು ಪ್ರಕರಣಗಳು ಇತ್ಯರ್ಥಗೊಂಡಿದೆ. 6.20 ಲಕ್ಷ ರೂ. ದಂಡ ಮಸೂಲಿ ಮಾಡಲಾಗಿದೆ. ಅಪರ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ 8 ಪ್ರಕರಣ ವಿಚಾರಣ ಹಂತದಲ್ಲಿದ್ದು, ಇದರಲ್ಲಿ ನಾಲ್ಕು ಪ್ರಕರಣಗಳು ಇತ್ಯರ್ಥಗೊಂಡಿದೆ ಎಂದು ಮಾಹಿತಿ ನೀಡಿದರು.

ಯಾವುದೇ ಕಂಪನಿಯ ಆಹಾರ ಸಾಮಾಗ್ರಿಗಳನ್ನು ಗ್ರಾಹಕರು, ನೋಡಿ ಖರೀದಿಸಬೇಕು. ಇಂತಹ ವಸ್ತುಗಳನ್ನು ಖರೀದಿಸುವಾಗ ಎಂಆರ್‌ಪಿ, ಆಹಾರದ ಪ್ಯಾಕೇಜ್ ಅವದಿ ಪರಿಶೀಲನೆ ಮಾಡಿ, ಉಪಯೋಗಿಸಬೇಕು. ಉದಾಹರಣೆಗೆ ಮಾಗಿ, ನೂಡೆಲ್ಸ್ ಸೇರಿದಂತೆ ಪದಾರ್ಥಗಳು ಉಲ್ಲೇಖಿಸಿ ಖಾಸಗಿ ಕಂಪನಿಯ ಅಧಿಕಾರಿ ಡಾ.ರವಿಚಂದ್ರ ಬೇಕಲ್ ಸಭೆಗೆ ಮಾಹಿತಿ ನೀಡಿದರು.

ಬೀದಿಬದಿ ತರಕಾರಿ, ಆಹಾರ ಬಗ್ಗೆ ಎಚ್ಚರ ಎಚ್ಚರ: ಬೀದಿ ಬದಿ ಮಾರಾಟ ಮಾಡುವ ತರಕಾರಿಗಳನ್ನು ಶುದ್ಧೀಕರಿಸುವುದಿಲ್ಲ. ಕೊಳೆತ ತರಕಾರಿಗಳ ಜೊತೆಗೆ ಎಲ್ಲಾ ತರಕಾರಿಗಳನ್ನು ಬೆರಸಿ ಮಾರಾಟ ಮಾಡುತ್ತಾರೆ. ಗ್ರಾಹಕರು ಇದನ್ನೇ ಖರೀದಿಸಿ, ಸೇವಿಸಿದರೆ ಕ್ಯಾನ್ಸರ್ ಕಾರಕ ಅಂಶಗಳನ್ನು ನಮ್ಮ ದೇಹದೊಳಗೆ ಸೇರುತ್ತವೆ. ಇದರ ಬಗ್ಗೆ ಗಮನಹರಿಸಬೇಕು ಎಂದು ಡಾ.ರೇಣು ಅಗ್ರವಾಲ್, ಡಾ.ರವಿಚಂದ್ರ ಬೇಕಲ್ ಎಚ್ಚರಿಸಿದರು.

ಸಭೆಯಲ್ಲಿ ಸದಸ್ಯರಾದ ಡಿ.ವಿ.ದಯಾನಂದ ಸಾಗರ್, ಮಧುಕೇಶ್ವರ್, ಕೆ.ವಿ.ಬಾನುಪ್ರಶಾಂತ್, ಎಸ್.ದೇವರಾಜ್, ವಿಶ್ವನಾಥ್, ಸಂಜಯ್ ದತ್ತಾತ್ರಿ, ರವಿಶಂಕರ್ ಬಳೆ, ವಸಂತಕುಮಾರ್ ಮೈಸೂರಮಠ್, ಎಫ್.ಮನ್ಸೂರ್ ಅಹ್ಮದ್, ಡಾ.ಬಿ.ಆರ್.ಸಾಯಿನಾಥ್ ಐಯ್ಯರ್, ಡಿ.ಸುಶೀಲ, ಅರುಣ ಕೆ.ಸುಬ್ರಹ್ಮಣ್ಯ, ಜಿ.ಮಂಜುನಾಥ ಸೇರಿದಂತೆ ಇತರರಿದ್ದರು.

ಧರ್ಮರಕ್ಷಣೆಗೆ ಧರ್ಮಸ್ಥಳಕ್ಕೆ ಸತ್ಯಯಾತ್ರೆ

- ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಘೋಷಣೆ
- ಧರ್ಮಸ್ಥಳ ಪ್ರಕರಣ ಎನ್‌ಐಎ ತನಿಖೆಗೆ ಒಪ್ಪಿಸಲು ಆಗ್ರಹ

ಬೆಂಗಳೂರು, ಆ.30(ಕೆಎಂಶಿ)–ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ಮೇಲೆ ರಾಜ್ಯದ ಜನರಿಗೆ ನ್ಯಾಯ ದೊರಕುವ ನಿರೀಕ್ಷೆ ಇಲ್ಲದ ಕಾರಣ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸಬೇಕು ಎಂದು ಜಾತ್ಯತೀತ ಜನತಾದಳ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.



ಧರ್ಮಸ್ಥಳ ವಿರುದ್ಧದ ಅಪಪ್ರಚಾರ ಷಡ್ಯಂತ್ರದಲ್ಲಿ ವಿದೇಶಿ ಹಣದ ಕೈವಾಡ ಶಂಕೆಯಿದೆ. ಕ್ಷೇತ್ರದ ವಿರುದ್ಧ ಜನರಲ್ಲಿ ತಪ್ಪು ಭಾವನೆ ರೂಪಿಸಲು ವಿದೇಶಿ ಹಣ ಬಳಕೆಯಾಗಿರುವ ಶಂಕೆ ಇದೆ ಎಂದರು.

ಸತ್ಯಾಸತ್ಯತೆ ಹೊರತರಲು ಎನ್‌ಐಎಗೆ ತನಿಖೆ ವಹಿಸುವ ಅವಶ್ಯಕತೆ ಇದೆ. ಧರ್ಮಸ್ಥಳದ ಪಾವಿತ್ರ್ಯತೆ ಹಾಳು ಮಾಡುವ ಒಳಸಂಚು ರೂಪಿಸಲಾಗಿದೆ ಎಂದರು.

ಪಕ್ಷ ಕೈಗೊಂಡಿರುವ ಧರ್ಮಸ್ಥಳ ಯಾತ್ರೆಗೆ ಹಾಸನ ಕೇಂದ್ರ ಸ್ಥಾನವಾಗಿದ್ದು, ಮುಖಂಡರು, ಕಾರ್ಯಕರ್ತರು ಇಲ್ಲಿಂದ ತೆರಳಿ, ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಿ ಮಂಜುನಾಥಸ್ವಾಮಿ ದೇವಸ್ಥಾನದವರೆಗೆ ಪಾದಯಾತ್ರೆ ನಡೆಸಲಾಗುವುದು.

ಯಾತ್ರೆಯಲ್ಲಿ ಜೆಡಿಎಸ್‌ನ ಲೋಕಸಭಾ ಸದಸ್ಯರು, ಶಾಸಕರು, ಮಾಜಿ ಸಂಸದರು, ಮಾಜಿ ಸಚಿವರು, ಮಾಜಿ ಶಾಸಕರು, ಕಾರ್ಯಕರ್ತರು, ಭಕ್ತರು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಲಿದ್ದಾರೆ.

ಧರ್ಮಸ್ಥಳಕ್ಕೆ ನೈತಿಕ ಬೆಂಬಲ ವ್ಯಕ್ತಪಡಿಸಲು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೂಚನೆಯಂತೆ ಆಗಸ್ಟ್ 31 ರಂದು ಜೆಡಿಎಸ್ ಧರ್ಮಸ್ಥಳ ಸತ್ಯಯಾತ್ರೆ ಹಮ್ಮಿಕೊಂಡಿದೆ.

ರಾಜಕೀಯ ಬೆರೆಸದೆ ಧರ್ಮಸ್ಥಳ ಸತ್ಯಯಾತ್ರೆ ನಡೆಸುತ್ತಿದ್ದೇವೆ, ಧರ್ಮ ರಕ್ಷಣೆ ಉದ್ದೇಶದಿಂದ ಯಾತ್ರೆ ಆಯೋಜಿಸಲಾಗಿದೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಗ್ಯದ ಬಗ್ಗೆ ಆತಂಕ ಬೇಡ, ಸಂಪೂರ್ಣ ಆರೋಗ್ಯವಾಗಿದ್ದಾರೆ ಎಂದರು.

ಸಂಚಾರ ನಿಯಮ ಉಲ್ಲಂಘನೆಯಲ್ಲಿ ದಾಖಲೆ ಬರೆದ ಬೆಂಗಳೂರು ಟೆಕ್ಕಿ

ರಿಯಾಯಿತಿ ನಂತರವೂ ಅರ್ಧ ಲಕ್ಷ ದಂಡ ಪಾವತಿ!

ಬೆಂಗಳೂರು, ಆ.30– ರಾಜಧಾನಿಯ ಟೆಕ್ಕಿಯೊಬ್ಬರು ಬೆಂಗಳೂರು ಟ್ರಾಫಿಕ್ ಪೊಲೀಸರ ದಂಡದ ರಿಯಾಯ್ತಿ ಯೋಜನೆಯ ಲಾಭವನ್ನು ಭರಪೂರವಾಗಿ ಪಡೆದುಕೊಂಡಿದ್ದಾರೆ. ಆ ಮೂಲಕ, ಅರ್ಧ ಲಕ್ಷಕ್ಕೂ ಹೆಚ್ಚು ಹಣವನ್ನು ಉಳಿಸಿಕೊಂಡಿದ್ದಾರೆ.

ಬೆಂಗಳೂರಿನ ಈ ಟೆಕ್ಕಿ ಬಳಿ ಎರಡು ವಾಹನಗಳಿವೆ. ಬೆಂಗಳೂರು ಪೊಲೀಸರ ರಿಯಾಯ್ತಿ ಸ್ಕೀಂ ಅನ್ನು ನೋಡಿ, ಇಂದಲ್ಲಾ ನಾಳೆ ದಂಡ ಕಟ್ಟಲೇಬೇಕು, ಟ್ರಾಫಿಕ್ ನಿಯಮ ಉಲ್ಲಂಘಿಸಿದ್ದಂತೂ ಹೌದು, ದಂಡ ಕಟ್ಟೇ ಬಿಡೋಣ ಎಂದು ಪೊಲೀಸರ ಬಳಿ ಬಂದಿದ್ದಾರೆ. ಅವರ ಒಂದು ವಾಹನದಲ್ಲಿ ನೂರಕ್ಕೂ ಹೆಚ್ಚು, ಎರಡನೇ ವಾಹನದಲ್ಲಿ ಮೂವತ್ತು ಟ್ರಾಫಿಕ್ ಉಲ್ಲಂಘನೆ ಕೇಸ್ ದಾಖಲಾಗಿತ್ತು. ಎರಡು ವಾಹನಗಳ ಒಟ್ಟು 130 ಟ್ರಾಫಿಕ್ ಉಲ್ಲಂಘನೆ ಕೇಸ್ ಈ ಟೆಕ್ಕಿಯ ವಾಹನಗಳ ಮೇಲೆ ಇದ್ದವು.



ಇವರು ಒಟ್ಟು 1,13,000 ರೂ. ದಂಡ ಪಾವತಿಸಬೇಕಾಗಿತ್ತು. ಆದರೆ, ವಿಶೇಷ ಡ್ರೈವ್ ಇರುವ ಹಿನ್ನೆಲೆಯಲ್ಲಿ 56,500 ರೂಪಾಯಿ ಪಾವತಿಸಿ ಉಸ್ಸಾಪ್ಪ ಎಂದಿದ್ದಾರೆ.

ಎಎಸ್‌ಐ ದೇವರಾಜ್.ಎಸ್ ಅವರು ವಾಟ್ಸಾಪ್ ಗ್ರೂಪ್‌ನಲ್ಲಿ ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಹೀಗಾಗಿ, ಇದು ಬೆಳಕಿಗೆ ಬಂದಿದೆ ಟ್ರಾಫಿಕ್ ಉಲ್ಲಂಘನೆ ಮಾಡಿದವರಿಗೆ ಇದೊಂದು ಒಳ್ಳೆಯ ನಿದರ್ಶನವಾಗಲಿ ಎನ್ನುವ ಆಶಯ ಅವರದ್ದಾಗಿದೆ.

ಟ್ರಾಫಿಕ್ ರಿಯಾಯಿತಿ ಡ್ರೈವಿಗೆ ಉತ್ತಮ ರೆಸ್ಪಾನ್ಸ್ ಸಿಗುತ್ತಿದೆ. ಇದುವರೆಗೆ ಸುಮಾರು 18.9 ಕೋಟಿ ರೂ.ದಂಡ ಸಂಗ್ರಹಿಸಲಾಗಿದೆ. ಬೆಂಗಳೂರು ಟೆಕ್ಕಿಯ ಒಂದು ವಾಹನಕ್ಕೆ 46,500 ಇನ್ನೊಂದು ವಾಹನದ ಮೇಲೆ 10,000 ರೂಪಾಯಿ ದಂಡ ವಿಧಿಸಲಾಗಿದೆ. ಬೆಂಗಳೂರಿನ ಎಇಸಿಎಸ್ ಲೇಔಟ್‌ನಲ್ಲಿ ದಂಡ ಸಂಗ್ರಹಿಸಲಾಗಿದೆ. ನೋ ಪಾರ್ಕಿಂಗ್ ಏರಿಯಾದಲ್ಲಿ ಗಾಡಿ ನಿಲ್ಲಿಸಿದ್ದು, ಡ್ರೈವ್ ಮಾಡುತ್ತಿದ್ದ ವೇಳೆ ಮೊಬೈಲ್ ಬಳಕೆ ಮುಂತಾದ ಟ್ರಾಫಿಕ್ ಉಲ್ಲಂಘನೆಗಳು ಈತನ ಮೇಲಿತ್ತು. ಇದುವರೆಗೆ, ಬೆಂಗಳೂರು ಟ್ರಾಫಿಕ್ ಪೊಲೀಸರು ಸುಮಾರು 6.7ಲಕ್ಷ ಟ್ರಾಫಿಕ್ ಉಲ್ಲಂಘನೆ ಕೇಸ್ ಅನ್ನು ಕ್ಲಿಯರ್ ಮಾಡಿದ್ದಾರೆ.

ಅನನ್ಯಾ ಭಟ್ ನಾಪತ್ತೆ ಕಟ್ಟುಕಥೆ

ಕೊಡಗು ಮೂಲದ ವಾಸಂತಿ ಶ್ರೀವತ್ಸ ಇನ್ನೂ ಜೀವಂತ

ಎಸ್‌ಐಟಿ ಮುಂದೆ ಸುಜಾತಾ ಭಟ್ ಶಾಕಿಂಗ್ ಹೇಳಿಕೆ

ಬೆಳ್ತಂಗಡಿ, ಆ.30– ಅನನ್ಯ ಭಟ್ ನಾಪತ್ತೆ ಪ್ರಕರಣಕ್ಕೆ ಇದೀಗ ತಿರುವು ಸಿಕ್ಕಿದೆ. ಎಸ್‌ಐಟಿ ತನಿಖಾಧಿಕಾರಿ ಗುಣಪಾಲ ಜೆ ಅವರ ಮುಂದೆ ಸುಜಾತಾ ಭಟ್ ತಪ್ಪೊಪ್ಪಿಕೊಂಡಿದ್ದು, ಈ ಪ್ರಕರಣದಲ್ಲಿ ಹೇಳಲಾಗಿದ್ದ ಬಹುತೇಕ ವಿಷಯಗಳು ಕಾಲ್ಪನಿಕ ಸೃಷ್ಟಿ ಎಂದಿದ್ದಾಳೆ. ಅಲ್ಲದೆ, ಕೊಡಗು ಮೂಲದ ವಾಸಂತಿ ಶ್ರೀವತ್ಸ ಸತ್ತಿಲ್ಲ, ಆಕೆ ಇನ್ನೂ ಜೀವಂತವಿದ್ದಾಳೆ ಎಂದು ಶಾಕಿಂಗ್ ಹೇಳಿಕೆ ನೀಡಿದ್ದಾಳೆ.

ಎಸ್‌ಐಟಿ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ ವೇಳೆ, ಸುಜಾತಾ ಭಟ್, ವಾಸಂತಿ ಇನ್ನೂ ಜೀವಂತವಿದ್ದಾಳೆ ಎಂದು ಅಚ್ಚರಿಗೊಳಿಸುವ ಹೇಳಿಕೆ ನೀಡಿದ್ದಾಳೆ. ತನಿಖಾಧಿಕಾರಿಗಳ ಮುಂದೆ ಅವಳದ್ದು ಎಂದು ತೋರಿಸಲಾದ ಒಂದು ಫೋಟೋ ಕುರಿತು ಸ್ಪಷ್ಟನೆ ನೀಡುತ್ತಾ, ಅದು ಅನನ್ಯಾ ಭಟ್‌ನದು ಅಲ್ಲ, ವಾಸಂತಿಯದ್ದೇ ಫೋಟೋ ಎಂದು ಬಾಂಬ್ ಸಿಡಿಸಿದ್ದಾಳೆ.

ಇದಕ್ಕೂ ಮೊದಲು, ನದಿಯಲ್ಲಿ ಪತ್ತೆಯಾದ ಕೊಳೆತ ಶವವನ್ನು ವಾಸಂತಿಯ ಶವ ಎಂದು ಗುರುತಿಸಲಾಗಿತ್ತು. ಆದರೆ ಸುಜಾತಾ ಭಟ್, ಆ ಶವವು ವಾಸಂತಿಯದ್ದಲ್ಲ ಎಂದು ನೇರವಾಗಿ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದು, ಆ ಕೊಳೆತ ಶವ ವಾಸಂತಿಯದ್ದೇ ಎಂದು ನೀವು ಹೇಗೆ ನಂಬಿದಿರಿ ಎಂದು ಅಧಿಕಾರಿಗಳಿಗೆ ಮರು ಪ್ರಶ್ನೆ ಹಾಕಿದ್ದು, ಈ ಪ್ರಶ್ನೆಯೇ ತನಿಖಾಧಿಕಾರಿಗಳನ್ನು ದಂಗಾಗುವಂತೆ ಮಾಡಿದೆ. ಸುಜಾತಾ ಭಟ್ ನೀಡಿರುವ ಈ ಹೊಸ ಹೇಳಿಕೆಯ ಹಿನ್ನೆಲೆಯಲ್ಲಿ ಎಸ್‌ಐಟಿ ಅಧಿಕಾರಿಗಳು ಪ್ರಕರಣವನ್ನು ಹೊಸದಾಗಿ ಪರಿಶೀಲಿಸಲು ತೀರ್ಮಾನಿಸಿದ್ದಾರೆ. ವಾಸಂತಿ ನಿಜವಾಗಿಯೂ ಮೃತಪಟ್ಟಿದ್ದಾಳೆಯೇ ಅಥವಾ ಇನ್ನೂ ಜೀವಂತವಿದ್ದಾಳೆಯೇ ಎಂಬ ಪ್ರಶ್ನೆಗೆ ಉತ್ತರ ಹುಡುಕುವ ನಿಟ್ಟಿನಲ್ಲಿ ಮುಂದಿನ ತನಿಖೆ ನಡೆಯಲಿದೆ.

ಕೊಡಗು ಮೂಲದ ವಾಸಂತಿ ಪ್ರಕರಣದಲ್ಲಿ ಈಗಾಗಲೇ ಹಲವಾರು ಕಥೆಗಳು, ಅನುಮಾನಗಳು ಮತ್ತು ಗೊಂದಲಗಳು ಕೇಳಿಬಂದಿವೆ. ಇತ್ತೀಚಿನ ಸುಜಾತಾ ಭಟ್ ಹೇಳಿಕೆ ನಿಜಕ್ಕೂ ತನಿಖೆಗೆ ಬೆಳಕು ಚೆಲ್ಲುವುದೋ, ಅಥವಾ ಮತ್ತೊಂದು ಕಟ್ಟುಕಥೆಯಾಗಿಬಿಡುವುದೋ ಎಂಬ ಕುತೂಹಲ ಇದೀಗ ಹೆಚ್ಚಿದೆ.

ಸುಜಾತಾ ಭಟ್ ನಾಲ್ಕು ದಿನಗಳ ಕಾಲ ನಡೆದ ವಿಚಾರಣೆಯಲ್ಲಿ ತನಿಖಾಧಿಕಾರಿಗಳ ಪ್ರಶ್ನೆಗಳಿಗೆ ಸ್ಪಷ್ಟ ದಾಖಲೆಗಳನ್ನು ಒದಗಿಸಲಾಗದೇ, ಕೊನೆಗೆ ತಾನು ಹೇಳಿದ್ದ ಕಥೆ ಶೇ.80 ರಷ್ಟು ಸುಳ್ಳು ಎಂದು ಒಪ್ಪಿಕೊಂಡಿದ್ದಾಳೆ. ಆಕೆಯ ಪ್ರಕಾರ ಭೂ ವಿವಾದ ಇರುವುದೇ ಸತ್ಯ. ಆದರೆ ಉಳಿದ ಪಾತ್ರಗಳು, ಘಟನೆಗಳು ಎಲ್ಲಾ ಕಾಲ್ಪನಿಕ. ಅನನ್ಯ ಭಟ್ ಮಿಸ್ಸಿಂಗ್ ಕಥೆ ತಾನೇ ಕಟ್ಟಿದ್ದು. ಸುಜಾತಾ ಭಟ್ ತನ್ನ ಹೇಳಿಕೆಯಲ್ಲಿ ಅರವಿಂದ, ವಿಮಲಾ ಸೇರಿದಂತೆ ಅನೇಕ ಹೆಸರುಗಳು ಕೇವಲ ಕಾಲ್ಪನಿಕ ಪಾತ್ರಗಳು ಎಂದು ಒಪ್ಪಿಕೊಂಡಿದ್ದಾಳೆ. ಅವಳ ಹೇಳಿಕೆಯ ಪ್ರಕಾರ, ನಿಜವಾದ ವಿಚಾರ ಭೂ ವಿವಾದಕ್ಕೆ ಮಾತ್ರ ಸೀಮಿತ. ಆ ಭೂ ವಿವಾದವನ್ನು ಮತ್ತೆ ಕೆದಕಲು ಹಾಗೂ ಅದರಲ್ಲಿ ಪಾಲು ಪಡೆಯಲು ಕೆಲವರು ಈ ಕತೆಯನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಸುಜಾತಾ ಎಸ್‌ಐಟಿ ಮುಂದೆ ಹೇಳಿದ್ದಾಳೆ.

ಧರ್ಮಸ್ಥಳದಲ್ಲಿ ಸೌಜನ್ಯಳ ಅಪಹರಣ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ!

ಎಸ್‌ಐಟಿಗೆ ಮಂಡ್ಯದ ಸಾಕ್ಷಿದಾರ ಮಹಿಳೆ ಪತ್ರ

ಬೆಳ್ತಂಗಡಿ, ಆ.30– ಒಂದೆಡೆ ಧರ್ಮಸ್ಥಳದಲ್ಲಿ ನೂರಾರು ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂಬ ಸಾಕ್ಷಿದಾರ–ದೂರುದಾರ ಚಿನ್ನಯ್ಯನ ಆರೋಪ ಕುರಿತು ವಿಶೇಷ ತನಿಖಾ ತಂಡ ಕಳೆದೆರಡು ತಿಂಗಳುಗಳಿಂದ ತೀವ್ರ ವಿಚಾರಣೆ ನಡೆಸುತ್ತಿರುವಂತೆಯೇ ಮತ್ತೊಂದೆಡೆ ಸೌಜನ್ಯ ಪ್ರಕರಣದಲ್ಲಿ ಸಾಕ್ಷಿ ಹೇಳಲು ಹಲವು ಮಂದಿ ಮುಂದೆ ಬಂದಿದ್ದಾರೆ.

ಈ ಸಂಬಂಧ ಮಂಡ್ಯ ಜಿಲ್ಲೆಯ 60 ವರ್ಷದ ಚಿಕ್ಕಕೆಂಪಮ್ಮ ಎಂಬುವರು ಎಸ್‌ಐಟಿಗೆ ಪತ್ರ ಬರೆದಿದ್ದಾರೆ. 2012ರ ಅ.9 ರಂದು ಯುವತಿಯನ್ನು ಅಪಹರಣ ಮಾಡಿದ್ದನ್ನು ಕಣ್ಣಾರೆ ನೋಡಿರುವುದಾಗಿ ಅವರು ಹೇಳಿಕೊಂಡಿದ್ದಾರೆ. ಅದೇ 2012ರ ಅ.9 ರಂದು ಸೌಜನ್ಯ ನಾಪತ್ತೆಯಾಗಿದ್ದರು. ಅತ್ಯಾಚಾರ ಮತ್ತು ಬರ್ಬರವಾಗಿ ಹತ್ಯೆಯಾಗಿದ್ದ ಆಕೆಯ ಮೃತದೇಹ ಅ.10ರಂದು ಪತ್ತೆಯಾಗಿತ್ತು. ಹೀಗಾಗಿ ಚಿಕ್ಕಕೆಂಪಮ್ಮ ನೋಡಿದ ಅಪಹರಣಕ್ಕೊಳಗಾದ ಯುವತಿ ಸೌಜನ್ಯ ಇರಬಹುದು ಎನ್ನಲಾಗುತ್ತಿದ್ದು, ಸೌಜನ್ಯ ಕೇಸ್ ರೀ ಓಪನ್ ಆಗುವ ಸಾಧ್ಯತೆಯಿದೆ.

ಪತ್ರದಲ್ಲಿ ಏನಿದೆ: ಧರ್ಮಸ್ಥಳದ ಸುತ್ತಮುತ್ತ ನಡೆದಿದೆ ಎನ್ನಲಾಗುತ್ತಿರುವ ಹಲವಾರು ಅಪಹರಣ, ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳ ಸಮಗ್ರ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚನೆ ಮಾಡಲಾಗಿದ್ದು, ಇಲ್ಲಿನ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸಾಕ್ಷಿಗಳು ಇದ್ದರೆ ಬಂದು ಹೇಳಿಕೆ ನೀಡಬಹುದು ಎಂದು ತಿಳಿಸಿರುವುದು ಸ್ವಾಗತಾರ್ಹ ವಿಚಾರ. ನನಗೆ ಹೆಚ್ಚು ಧೈರ್ಯವನ್ನು ಕೊಟ್ಟಿದೆ. ಹಾಗಾಗಿ ನಾನು ಒಂದು ಸಾಕ್ಷಿಯಾಗಿ ತಮ್ಮ ಮುಂದೆ ಬರಲು ಇಚ್ಛಿಸುತ್ತೇನೆ.

ನಾನು ಚಿಕ್ಕಕೆಂಪಮ್ಮ. ನನಗೆ 62 ವರ್ಷ ವಯಸ್ಸಾಗಿದ್ದು, ಮಂಡ್ಯ ಜಿಲ್ಲೆಯವರು. ನಮ್ಮ ತಂದೆಯವರು ಪ್ರತಿ ವರ್ಷ ಧರ್ಮಸ್ಥಳಕ್ಕೆ ತೆರಳಿ ಶ್ರೀ ಮಂಜುನಾಥ ಸ್ವಾಮಿ ದರ್ಶನ ಪಡೆದು ಬರುತ್ತಿದ್ದರು. ನಮ್ಮ ತಂದೆ ಮರಣ ಹೊಂದಿದ ನಂತರ ನಾನು ಅವರು ಪುಣ್ಯಸ್ಮರಣೆ ಕಾರ್ಯವನ್ನು ಪ್ರತಿ ವರ್ಷ ಮಾಡುತ್ತಾ ಬರುತ್ತಿದ್ದೆ. ನಮ್ಮ ತಂದೆಯ ಹೆಸರಿನಲ್ಲಿ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಹುಂಡಿಗೆ ಕಾಣಿಕೆಯಾಕಬೇಕಿತ್ತು. ಅಲ್ಲದೆ, ನನಗೆ ಚರ್ಮ ಸೋಂಕು ಇದ್ದ ಕಾರಣ ಧರ್ಮಸ್ಥಳದಲ್ಲಿರುವ ಪ್ರಕೃತಿ ಚಿಕಿತ್ಸಾಲಯಕ್ಕೆ ಹೋಗಿ ಒಮ್ಮೆ ತೋರಿಸಿ ಎಂದು ಪರಿಚಿತರು ಸಲಹೆ ನೀಡಿದ್ದರು. ಆದಕಾರಣ ನಾನು ಧರ್ಮಸ್ಥಳಕ್ಕೆ ಹೋದರೆ ಎರಡು ಕಾರ್ಯಗಳನ್ನು ಮುಗಿಸಿ ಬರಬಹುದೆಂದು ನಾನು ಮತ್ತು ನಿಂಗಮ್ಮ ಅಲಿಯಾಸ್ ಕೆಂಚಮ್ಮ (ಇತ್ತೀಚೆಗೆ ಮೃತಪಟ್ಟರು) ಇಬ್ಬರೂ 2012 ರ ಅಕ್ಟೋಬರ್ 8ರಂದು ಮಂಡ್ಯದಿಂದ ರೈಲಿನಲ್ಲಿ ಹೊರಟು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಇಳಿದು, ಅಲ್ಲಿಂದ ಬಸ್‌ನಲ್ಲಿ ಅಕ್ಟೋಬರ್ 9ರ ಮುಂಜಾನೆ ಸುಮಾರು 6 ಗಂಟೆಗೆ ಧರ್ಮಸ್ಥಳ ತಲುಪಿದೆವು.

ಮೊದಲಿಗೆ ಧರ್ಮಸ್ಥಳ ಮಂಜುನಾಥ ಸ್ವಾಮಿಯ ದರ್ಶನವನ್ನು ಪಡೆದುಕೊಂಡು, ಅಲ್ಲೇ ದೇವಸ್ಥಾನದ ಪ್ರಸಾದ ಸೇವಿಸಿ, ಸ್ವಲ್ಪಕಾಲ ವಿಶ್ರಾಂತಿ ಪಡೆದು ಪ್ರಕೃತಿ ಚಿಕಿತ್ಸಾಲಯಕ್ಕೆ ತೆರಳಬೇಕು ಎನ್ನುವಷ್ಟರಲ್ಲಿ ಮಧ್ಯಾಹ್ನವಾಗಿತ್ತು. ನಂತರ ಧರ್ಮಸ್ಥಳದ ದೇವಾಲಯದಿಂದ ಶಾಂತಿವನಕ್ಕೆ ಆಟೋದಲ್ಲಿ ಹೊರಟೆವು. ನಾವು ಶಾಂತಿವನವನ್ನು ತಲುಪಿದಾಗ ಮಳೆ ಬರುತ್ತಿದ್ದು, ಅಂದಾಜು 3ರಿಂದ 3.20ರ ಸಮಯವಾಗಿತ್ತು. ಆ ಸ್ಥಳದಲ್ಲಿ ಗಿಡಮರಗಳು ಹೆಚ್ಚಾಗಿದ್ದು, ಜನಸಂದಣಿ ಕಡಿಮೆ ಇತ್ತು. ಆಸ್ಪತ್ರೆಗೆ ಯಾರಾದರೂ ಹೋಗಿ ಬರುತ್ತಾರಲ್ಲ ಅವರನ್ನು ವಿಚಾರಿಸೋಣವೆಂದು ಹಾಗೂ ಮಳೆ ಬರುತ್ತಿದ್ದ ಕಾರಣ ನಾವು ಅಲ್ಲೆ ಇದ್ದ ಬಸ್ ನಿಲ್ದಾಣದಲ್ಲಿ ಕುಳಿತುಕೊಂಡೆವು. 10 ರಿಂದ 15 ನಿಮಿಷಗಳು ಕಳೆಯಿತು. ನಾವು ಇದ್ದ ಸ್ಥಳಕ್ಕೆ ಎರಡು ದ್ವಿಚಕ್ರ ವಾಹನಗಳು ಬಂದವು. ಒಂದು ದ್ವಿಚಕ್ರ ವಾಹನದಲ್ಲಿ ಇಬ್ಬರು ಇದ್ದು, ಮತ್ತೊಂದು ದ್ವಿಚಕ್ರ ವಾಹನದಲ್ಲಿ ಒಬ್ಬ ವ್ಯಕ್ತಿ ಇದ್ದ. ಈ ಮೂವರು ವ್ಯಕ್ತಿಗಳನ್ನು ಮಾತನಾಡಿಸಲು ಬೇರೊಂದು ದ್ವಿಚಕ್ರ ವಾಹನದಲ್ಲಿ ಇನ್ನೂ ಮೂವರು ಬಂದು ಹೊರಟು ಹೋದರು. ನಂತರ ಒಂದು ಆಟೋರಿಕ್ಷಾ ಬಂದಿತು. ನಾವು ಕುಳಿತ್ತಿದ್ದ ಸ್ಥಳಕ್ಕೆ ವಿರುದ್ಧ ವಾದ ಜಾಗದಿಂದ 200 ಮೀಟರ್‌ನಷ್ಟು ದೂರದಲ್ಲಿ ಒಂದು ಕಾಲುದಾರಿ ಇತ್ತು ಆ ದಾರಿಯಲ್ಲಿ ಅವರೆಲ್ಲ ಹೋಗಿ ಬರುವುದು ಮಾಡುತ್ತಿದ್ದರು. ಇವರು ನಮ್ಮ ಕಡೆ ಬಂದರೆ ವಿಚಾರಿಸೋಣವೆಂದು ನಾವು ಅವರನ್ನೇ ನೋಡುತ್ತಾ ನಿಂತಿದ್ದೆವು.



ಸಾಂದರ್ಭಿಕ ಚಿತ್ರ

ಅದರಲ್ಲಿ ಇದ್ದ ಒಬ್ಬ ಅಪರಿಚಿತ ವ್ಯಕ್ತಿ ಬಿಕ್ಕಲ/ತೊದಲ (ಪ್ರತಿ ಬಾರಿ ಮಾತನಾಡುವಾಗ ಮೊದಲ ಅಕ್ಷರವನ್ನು ತೊದಲಿಸುತ್ತಿದ್ದ). ಆತ ನಮ್ಮನ್ನು 'ಆಂಟಿ ನೀವು ಎಲ್ಲಿಂದ ಬಂದಿದ್ದೀರಾ, ಯಾಕೆ ಬಂದಿದ್ದೀರಾ' ಎಂದು ಕೇಳಿದ. ಅದಕ್ಕೆ ನಾನು 'ಯಾಕಪ್ಪ, ನಾವು ಇಲ್ಲೇ ಪ್ರಕೃತಿ ಚಿಕಿತ್ಸಾಲಯಕ್ಕೆ ಡಾಕ್ಟರ್ ಅನ್ನು ನೋಡಲು ಬಂದಿದ್ದೇವೆ' ಎಂದು ಹೇಳಿದೆ. ಅದಕ್ಕೆ ಆತ 'ಇಲ್ಲಿ ಡಾಕ್ಟರ್ ಇಲ್ಲವಲ್ಲ. ನೀವು ಯಾಕೆ ಇಲ್ಲಿ ಕಾಯುತ್ತಾ ಕುಳಿತ್ತಿದ್ದೀರಾ, ಬೇಕಾದಷ್ಟು ಪ್ರಕೃತಿ ಚಿಕಿತ್ಸಾಲಯಗಳು ಇವೆ. ನೀವು ಬೇರೆ ಕಡೆ ತೋರಿಸಿಕೊಳ್ಳಬಹುದಲ್ವಾ' ಎಂದು ಹೇಳಿದ. ಅದಕ್ಕೆ ನಾನು 'ಸರಿ ಆಯ್ತು ಬಿಡಿ' ಎಂದು ಉತ್ತರ ನೀಡಿ ಅಲ್ಲೇ ನಿಂತುಕೊಂಡೆವು.

ಆಗ ತೊದಲಿಸಿಕೊಂಡು ಮಾತನಾಡುತ್ತಿದ್ದ ವ್ಯಕ್ತಿ ಯಾರಿಗೋ ಕರೆ ಮಾಡಿ 'ಇಲ್ಲಿ ಇಬ್ಬರು ಲೇಡಿಸ್ ಇದ್ದಾರೆ, ಹೋಗುತ್ತಿಲ್ಲ' ಎಂದು ತಿಳಿಸಿದ. ಫೋನಿನಲ್ಲಿ 'ನಿಚ್ಚು ನಿಚ್ಚು' ಎಂದು ಮಾತನಾಡುತ್ತಿದ್ದದ್ದನ್ನು ನಾನು ಗಮನಿಸಿದ್ದೇನೆ. ನಂತರ ಅವರು ಮುಂದೆ ಸ್ವಲ್ಪ ದೂರು ಹೋಗಿ, ನಿಂತುಕೊಂಡು, ಫೋನಿನಲ್ಲಿ ಮಾತನಾಡುತ್ತಲೇ ಇದ್ದರು. 3 ನಿಮಿಷದ ನಂತರ ಮತ್ತಿಬ್ಬರು ಬಂದು 'ಆಂಟಿ ನೀವು ಹೊರಟುಬಿಡಿ. ಇಲ್ಲಿ ಯಾರು ಜನಗಳಿಲ್ಲ. ಯಾರು ಬರುವುದಿಲ್ಲ, ನೀವಿಬ್ಬರು ಲೇಡಿಸ್ ಇದ್ದಿರಾ, ಹೊರಡಿ' ಎಂದು ಹೇಳಿದರು. ಹಾಗೂ 'ಆಟೋದಲ್ಲಿ ನಿಮ್ಮನ್ನು ಬಿಟ್ಟು ಕೊಡುವುದೇ' ಎಂದು ಸಹ ಕೇಳಿದರು. ನಾವು 'ಬೇಡ ಆಸ್ಪತ್ರೆಗೆ ಬಂದಿದ್ದೇವೆ, ನಾವೇ ಹೋಗುತ್ತೇವೆ' ಎಂದು ಹೇಳಿದಾಗ, 'ದುಡ್ಡನ್ನೇನು ಕೊಡಬೇಡಿ ಬನ್ನಿ ಬಿಟ್ಟು ಬರುತ್ತೇವೆ' ಎಂದರು. ಆಗ, ನಮಗೆ ಪರಿಚಯವೇ ಇಲ್ಲ ದುಡ್ಡು ಕೊಡಬೇಡಿ ಎನ್ನುತ್ತಿದ್ದಾರಲ್ಲ ಎಂದು ನಾವು ಆಟೋದಲ್ಲಿ ಹೋಗದೇ ಅಲ್ಲೇ ಇದ್ದೆವು. 2 ನಿಮಿಷಗಳ ನಂತರ ಅವರು ನಾವು ಇದ್ದ ಜಾಗದಿಂದ ಮರಳಿದರು.

ನಂತರ ಆ ಸಮಯದಲ್ಲಿ ಅಂದಾಜು 16 ವರ್ಷ ವಯಸ್ಸಿನ ಪ್ರಾಯದ ಹೆಣ್ಣು ಮಗುವೊಂದು ಛತ್ರಿಯನ್ನು ಹಿಡಿದುಕೊಂಡು ಸಮವಸ್ತ್ರದಲ್ಲಿ ನಮ್ಮ ಎದುರುಗಡೆಯಿಂದ ನಡೆದುಕೊಂಡು ಬರುತ್ತಿತ್ತು. ಆಕೆಯನ್ನು ನೋಡಿದ ನಾನು, ನನ್ನ ಜೊತೆ ಇದ್ದ ಕೆಂಚಮ್ಮರವರಿಗೆ 'ನೋಡಿ ಕೆಂಚಮ್ಮ ಆ ಹುಡುಗಿ ನಮ್ಮ ಜ್ಯೋತಿ ತರ ಇದ್ದಾಳೆ ಅಲ್ಲವೇ, ನಾನು ಆಕೆಯೇ ಎಂದುಕೊಂಡೆ' ಎಂದು ಹೇಳಿ, ಆಕೆಯನ್ನೇ 2 ರಿಂದ 3 ನಿಮಿಷಗಳ ಕಾಲ ನೋಡುತ್ತಿದ್ದೆ. ನಂತರ ನನ್ನ ಜೊತೆ ಇದ್ದ ಕೆಂಚಮ್ಮರವರು ನೇಚರ್ ಕಾಲ್ (ಮೂತ್ರವಿಸರ್ಜನೆ) ಮಾಡಬೇಕು ಎಂದು ಅಲ್ಲೇ ಸಮೀಪ ಇದ್ದ ಮರದ ಬಳಿ ಹೋದರು. ನಾನು ಅಲ್ಲೇ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದೆ.

ಅಷ್ಟರಲ್ಲಿ ಜೋರಾಗಿ ಕೂಗಿಕೊಂಡ ಶಬ್ದ ನನಗೆ ಕೇಳಿಬಂತು. ನಾನು ತಿರುಗಿ ನೋಡಿದಾಗ, ಅಲ್ಲಿ ಒಂದು ದೊಡ್ಡ ಬೂದು ಬಣ್ಣದ ಕಾರು ಬಂದು ನಿಂತಿತ್ತು. ನನ್ನನ್ನು ಮಾತನಾಡಿಸಿದ ಅಪರಿಚಿತ ವ್ಯಕ್ತಿಗಳು ಆ ಹುಡುಗಿಯನ್ನು ಹಿಡಿದುಕೊಂಡಿದ್ದರು. ಅ ಹುಡುಗಿ ಜೋರಾಗಿ ಹಾ.. ಅಪ್ಪ... ಅಮ್ಮ... ಎಂದು ಜೋರಾಗಿ ಕಿರುಚಾಡುತ್ತಿದ್ದಳು. ಆ ಹುಡುಗಿ ಬಿಡಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಳು, ಆಗ ಆಕೆಯು ಹಿಡಿದಿದ್ದ ಛತ್ರಿ ಕೆಳಗಡೆ ಬಿತ್ತು. ಅಲ್ಲದೇ ಮತ್ತೊಂದು ವಸ್ತು ಕೂಡ ಕೆಳಗಡೆ ಬಿತ್ತು ಆದರೆ ಆ ವಸ್ತು ಏನು, ಯಾರದ್ದು ಎಂದು ನನಗೆ ತಿಳಿಯಲಿಲ್ಲ. ನಂತರ ಆ ಹುಡುಗಿಯ ಕೈಯನ್ನು ತಿರುಚಿದರು. ಆಕೆಯ ಬಾಯಿಯನ್ನು ಮುಚ್ಚಿದರು. ನಂತರ ಆಕೆಯ ಕೂಗಾಟ ನಿಂತಿತ್ತು. ಇದನ್ನು ಸ್ವಲ್ಪ ದೂರದಿಂದಲೇ ನೋಡಿದ ನಾನು ಆ ಕಡೆ ಓಡಿ ಬರುತ್ತಿದ್ದೆ. ಇನ್ನೇನೋ ನಾನು ಅಲ್ಲಿ ತಲುಪುವಷ್ಟರಲ್ಲಿ ಅವರೆಲ್ಲ ಆ ಹುಡುಗಿಯನ್ನು ಕಿಡ್ನಾಪ್ ಮಾಡಿಕೊಂಡು ಹೊರಟುಬಿಟ್ಟರು. ಆ ಬಾಲಕಿಯನ್ನು ಅಲ್ಲಿದ್ದ ಕಾರಿನೊಳಗೋ ಅಥವಾ ಆಟೋದಲ್ಲಿ ದಬ್ಬಿದರೋ ಎಂದು ನೋಡುವಷ್ಟರಲ್ಲಿ ಅವರು ಅ ಸ್ಥಳದಿಂದ ಪಾಸಾಗಿ ಮುಂದೆ ಹೊರಟು ಹೋದರು.

ಮೊದಲಿಗೆ ಕಾರು ಹೋಯಿತು. ನಂತರ ಆ ಕಾರಿನ ಹಿಂದೆಯೇ ಆಟೋ ತೆರಳಿತು. ಆದರೆ, ಅವರೆಲ್ಲ ಹೊರಟ ನಂತರ ಅಲ್ಲೇ ಒಬ್ಬ ದಪ್ಪ ಹಾಗೂ ಕುಳ್ಳನೆಯ ವ್ಯಕ್ತಿ ಉಳಿದುಕೊಂಡ, ನಾವು ಬಂದು ಬಿಡುತ್ತೇವೆ ಎಂಬ ಉದ್ದೇಶದಿಂದಲೋ ಆತ ಅಲ್ಲೇ ಇದ್ದ ಎನ್ನಿಸುತ್ತದೆ. ಆತ ನಮ್ಮ ಕಡೆಯೇ ನಡೆದುಕೊಂಡು ಬರುತ್ತಿದ್ದ. ಆತನನ್ನು ನಾನೇ 'ಯಾಕೆ ಆ ಹುಡುಗಿ ಆ ರೀತಿ ಕಿರುಚಿಕೊಂಡಿತು. ಅವರೆಲ್ಲ ಸೇರಿಕೊಂಡು ಯಾಕೆ ಈ ರೀತಿ ಮಾಡಿದರೂ, ಅ ಹುಡುಗಿಯನ್ನು ಎಲ್ಲಿಗೆ ಕರೆದುಕೊಂಡು ಹೋದರು' ಎಂದು ಪ್ರಶ್ನೆ ಮಾಡಿದೆ. ಅದಕ್ಕೆ ಆ ವ್ಯಕ್ತಿ 'ಇಲ್ಲಾ.. ಇಲ್ಲಾ.. ಅದು ಅವರ ಮನೆಯಿಂದ ಬೇಜಾರಿನಲ್ಲಿ ಆಕೆ ಬಂದದ್ದು. ಮನೆಯವರೇ ಅವರು, ಅದಕ್ಕೆ ಆಕೆಯನ್ನು ಕರೆದುಕೊಂಡು ಹೋದದ್ದು' ಎಂದು ಹೇಳಿದ. ಅದಕ್ಕೆ ನಾನು 'ಕರೆದುಕೊಂಡು ಹೋಗಲು ಯಾಕೆ ಇಷ್ಟೊಂದು ಜೋರಾಗಿ ಕಿರುಚಿಕೊಂಡಳು, ಅವರ ಮನೆಯವರೆ ಬಂದಿದ್ದರೆ ಕಿರುಚಿಕೊಳ್ಳೋ ಅವಶ್ಯಕತೆ ಇರಲಿಲ್ಲ ಅಲ್ಲವೇ' ಎಂದು ಪ್ರಶ್ನೆ ಮಾಡಿದಾಗ, ಆತ 'ನಿಮಗೆ ಯಾಕೆ ಬೇಕು ಇದೆಲ್ಲ. ನೀವು ಎಲ್ಲಿಂದ ಬಂದ್ರಿ, ನೀವು ಸುಮ್ಮನೆ ಹೋಗಿ, ನಿಮಗೆ ಯಾಕೆ ಬೇಕು ಅದೆಲ್ಲ' ಎಂದು ಗದರಿಸಿದ. ನಂತರ ನಾವು ಸ್ವಲ್ಪ ಸಮಯ ಅಲ್ಲೇ ನಿಂತು ಸುತ್ತಮುತ್ತ ನೋಡುತ್ತಿದ್ದೇವು, 'ನೀವು ಹೊರಡಿ ಈಗ' ಎಂದು ಜೋರಾಗಿ ಹೇಳಿದ.

ನಂತರ ನಾವು ಅಲ್ಲಿಂದ ನಡೆದುಕೊಂಡು ಮುಂದೆ ಬಂದು, ನಾವು ಇಲ್ಲಿಗೆ ಬಂದಿದ್ದು ಸುಮ್ಮನೆ ವ್ಯರ್ಥವಾಯಿತು ಎಂದು ಮಾತನಾಡಿಕೊಳ್ಳುತ್ತಾ ಅಲ್ಲಿಂದ ಹೊರಟು ಮತ್ತೆ ಬಸ್ಸಿನಲ್ಲಿ ಕುಕ್ಕೆ ಸುಬ್ರಮಣ್ಯಕ್ಕೆ ಬಂದೆವು. ನಂತರ ಅಲ್ಲಿ ಕುಕ್ಕೆ ಸುಬ್ರಮಣ್ಯದಲ್ಲಿ ದೇವರ ದರ್ಶನ ಪಡೆದು, ವಾಪಸ್ಸು ಮನೆಗೆ (ದಿನಾಂಕ 10/08/2012) ಬಂದೆವು.

ಇತ್ತೀಚಿನ ದಿನಗಳಲ್ಲಿ ಟಿವಿ ಮಾಧ್ಯಮಗಳ ಮೂಲಕ ಧರ್ಮಸ್ಥಳದಲ್ಲಿ ನಡೆದ ಪ್ರಕರಣಗಳ ಬಗ್ಗೆ ನೋಡಿದೆ ಹಾಗೂ ನಾನು ಈ ಹಿಂದೆ ಮಾತನಾಡಿದ ವ್ಯಕ್ತಿಗಳನ್ನು ಸಹ ನೋಡಿ, 'ನಾನು ಧರ್ಮಸ್ಥಳಕ್ಕೆ ತೆರಳಿದಾಗ ಇವರೇ ಅಲ್ಲವೇ ಅ ಬಾಲಕಿಯನ್ನು ಅಪಹರಣ ಮಾಡಿದವರು, ಇವರೇ ಅಲ್ಲವೇ ನನ್ನನ್ನು ಅ ದಿನ ಮಾತನಾಡಿಸಿದ್ದು' ಎಂದು ಖಾತ್ರಿಪಡಿಸಿಕೊಂಡೆ. ನಾವು 2012ರಲ್ಲಿ ನೋಡಿದ ಬಾಲಕಿಯ ಅಪಹರಣ ಮಾಡಿ, ಆಕೆಯನ್ನು ಅತ್ಯಾಚಾರ–ಕೊಲೆ ಮಾಡಿದ್ದಾರೆ ಎಂಬುದು ತಿಳಿಯಿತು. ನಂತರ ನನಗೆ ಈ ಘಟನೆಗಳಿಂದ ಮನಸ್ಸಿಗೆ ತುಂಬಾ ನೋವಾಗುತ್ತಿತ್ತು. ಪದೇ ಪದೆ ಅದೇ ವಿಚಾರಗಳು ನೆನಪಿಗೆ ಬರುತ್ತಿದ್ದವು. ಮಾಧ್ಯಮದಲ್ಲಿ ನಾನು ನೋಡಿದ ಕೆಲವು ವ್ಯಕ್ತಿಗಳನ್ನು ನಾನು ಗುರುತಿಸಬಲ್ಲೆ. ನಾನು ನೋಡಿದ ಸನ್ನಿವೇಶ ನನ್ನ ಕಣ್ಣಲ್ಲಿ ಅಚ್ಚಳಿಯದೆ ಉಳಿದಿದೆ.

ನಾನು ನೋಡಿದ ಸತ್ಯ ವಿಚಾರಗಳನ್ನು ನ್ಯಾಯಾಲಯದ ಮುಂದೆ ಹೇಳುವ ತನಕ ನನಗೆ ಮುಕ್ತಿ ಸಿಗುವುದಿಲ್ಲ ಎಂದೇ ನಾನು ನಂಬಿದ್ದೇನೆ. ಮೊದಲಿನಿಂದಲೂ ನ್ಯಾಯಕ್ಕೆ ಧರ್ಮಕ್ಕೆ ತಲೆಬಾಗಿ ಪ್ರಾಮಾಣಿಕವಾಗಿ ಜೀವಿಸುತ್ತಿರುವ ನನಗೆ ಯಾವುದೇ ಭಯವಿಲ್ಲ. ಈ ವಿಚಾರದಲ್ಲಿ ಯಾರ ಒತ್ತಡವಾಗಲಿ, ಕುಮ್ಮಕ್ಕಾಗಲಿ ನನ್ನ ಮೇಲೆ ಇರುವುದಿಲ್ಲ. ನಾನು ಯಾವ ಬಗೆಯ ತನಿಖೆಗೂ ಬದ್ಧಳಾಗಿರುತ್ತೇನೆ. ಆದುದರಿಂದ ನನ್ನ ಹೇಳಿಕೆಯನ್ನು ಪಡೆದು, ನನ್ನನ್ನು ಸಾಕ್ಷಿಯನ್ನಾಗಿ ಪರಿಗಣಿಸಿ ಹಾಗೂ ನಾನು ಆ ದಿನ ಆ ಹೆಣ್ಣು ಮಗಳ ಅಪಹರಣದಲ್ಲಿ ಭಾಗಿಯಾದವರ ಗುರುತಿಸಬಲ್ಲವಳಾಗಿದ್ದೇನೆ. ದಯ ಮಾಡಿ ಈ ಕಾನೂನು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ ಎಂದು ಚಿಕ್ಕಕೆಂಪಮ್ಮ ಬರೆದಿದ್ದಾರೆ.

ಗ್ಯಾರಂಟಿ ಯೋಜನೆ: 3200 ಕೋಟಿ ರೂ. ಬಿಡುಗಡೆ

ಮಂಡ್ಯ,ಆ.30– ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಜಿಲ್ಲೆಗೆ 3200 ಕೋಟಿ ರೂ. ಹಣ ಬಿಡುಗಡೆ ಆಗಿದೆ. ದೇಶಕ್ಕೆ ಮಾದರಿಯಾಗಿರುವ ಈ ಯೋಜನೆಯ ಬಗ್ಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರಚಾರ ಕೈಗೊಳ್ಳಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಕರೆ ನೀಡಿದರು.



ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬಗ್ಗೆ ಶಾಸಕ ದಿನೇಶ್ ಗೂಳಿಗೌಡ ಪ್ರಗತಿ ಪರಿಶೀಲನೆ ನಡೆಸಿದರು.

ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ಯಾರಂಟಿ ಯೋಜನೆಗಳಿಗಾಗಿ ನಮ್ಮ ಸರ್ಕಾರ 94 ಸಾವಿರ ಕೋಟಿ ರೂ. ಖರ್ಚು ಮಾಡಿದೆ. ಈ ಯೋಜನೆಗಳು ದೇಶ ವಿದೇಶಗಳಲ್ಲಿ ಪ್ರಶಂಸೆಗೆ ಪಾತ್ರವಾಗಿದೆ. ಗ್ಯಾರಂಟಿ ಯೋಜನೆಗಳಿಂದ ದೇಶದಲ್ಲೇ ರಾಜ್ಯದ ತಲಾದಾಯ ನಂಬರ್ ಒನ್ ಆಗಿದೆ. ಸಾಮಾನ್ಯ ಜನರು ಸ್ವಾಗತಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ವಿಧಾನ ಸಭಾ ಕ್ಷೇತ್ರವಾರು ಗ್ಯಾರಂಟಿ ಸಮಾವೇಶ ಮಾಡುವ ಮೂಲಕ ಹಳ್ಳಿಹಳ್ಳಿಗಳಲ್ಲಿ ಸರ್ಕಾರದ ಸಾಧನೆ ಮುಟ್ಟಿಸಲಾಗುವುದು ಎಂದರು.

ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಕೂಡಲೇ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದೆ. ರಾಜ್ಯದ ಗ್ಯಾರಂಟಿ ಯೋಜನೆಗಳು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮಾದರಿ (ಮಾಡೆಲ್) ಯೋಜನೆಗಳಾಗಿವೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಹೇಳಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎಂ.ರೇವಣ್ಣ ಮಾರ್ಗದರ್ಶನದಲ್ಲಿ ಪಂಚ ಗ್ಯಾರಂಟಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿವೆ. ಶಾಸಕರು ಹಾಗೂ ಜಿಲ್ಲಾ ಸಮಿತಿ ಸದಸ್ಯರು ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದು ನಮ್ಮ ನಡೆ ಫಲಾನುಭವಿಗಳ ಕಡೆಯತ್ತ ಸಾಗುತ್ತಿದೆ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ, ಉಪಾಧ್ಯಕ್ಷ ಪ್ರಶಾಂತ್ ಬಾಬು, ರಾಜೇಂದ್ರ, ಶಿವಣ್ಣ, ಹನುಮಂತಯ್ಯ, ಸದಸ್ಯರುಗಳು ಹಾಗೂ ಜಿಪಂನ ಮುಖ್ಯ ಯೋಜನಾಧಿಕಾರಿ ಧನುಷ್, ಜಿಲ್ಲಾ ಗ್ಯಾರಂಟಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಅಧಿಕಾರಿ ವರ್ಗದವರು ಇದ್ದರು.

ಒತ್ತುವರಿದಾರರು ಸ್ವತ್ತನ್ನು ಹಿಂದಿರುಗಿಸದಿದ್ದರೆ ಕ್ರಮ

ಮಂಡ್ಯ,ಆ.30– ಮೈಷುಗರ್ ಕಂಪನಿ ವ್ಯಾಪ್ತಿಯಲ್ಲಿ ಅಕ್ರಮವಾಗಿ ಇರುವವರು ಕೂಡಲೇ ಸದರಿ ಸ್ವತ್ತನ್ನು, ಕಂಪನಿ ಸ್ವಾಧೀನಕ್ಕೆ ಹಿಂದಿರುಗಿಸದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷ ಸಿ.ಡಿ.ಗಂಗಾಧರ್ ಎಚ್ಚರಿಕೆ ನೀಡಿದ್ದಾರೆ



ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಷುಗರ್ ಕಂಪನಿಯ ಸುಮಾರು 7.10 ಎಕರೆ ವಾಣಿಜ್ಯ ಭೂಮಿ ಹಾಗೂ ಸುಮಾರು 20.29 ಎಕರೆ ವ್ಯವಸಾಯ ಭೂಮಿಯು ಅನಧಿಕೃತ ಅನುಭವದಲ್ಲಿರುವುದನ್ನು ಪತ್ತೆ ಹಚ್ಚಲಾಗಿದೆ. ಈ ವ್ಯಾಪ್ತಿಯಲ್ಲಿ ಅಕ್ರಮವಾಗಿ ಅನುಭವದಲ್ಲಿರುವ ಭೂಮಿ ಪತ್ತೆಗೆ ತಹಶೀಲ್ದಾರ್ ಜೊತೆಗೂಡಿ ಕಂಪನಿಯ ಆಡಳಿತ ಮಂಡಳಿಯು ಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರೊಂದಿಗೆ ಚರ್ಚಿಸಿ ಮಾಹಿತಿ ಕಲೆಹಾಕಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸದರಿಯವರು ಈ ಆಸ್ತಿಗಳ ಸಂಬಂಧ ಸೂಕ್ತ ದಾಖಲೆಗಳಿದ್ದರೆ, ಮೈಷುಗರ್ ಕಂಪನಿಗೆ ತಿಳಿಸಿ, ಒದಗಿಸಬೇಕು. ಇಲ್ಲವಾದಲ್ಲಿ ತೆರವುಗೊಳಿಸಿ ಮೈಷುಗರ್ ಕಂಪನಿ ಸುಪರ್ದಿಗೆ ನೀಡಬೇಕು. ಅನುಭವದಲ್ಲಿರುವವರಿಗೆ ಬೇರಾವುದೇ ಜೀವನಾಧಾರ ಇಲ್ಲವಾದಲ್ಲಿ ವಾಣಿಜ್ಯ ಭೂಮಿಯನ್ನು ಮಾಸಿಕ ಬಾಡಿಕೆ ಪಾವತಿಸಬೇಕು. ವ್ಯವಸಾಯ ಭೂಮಿಗೆ ವಾರ್ಷಿಕ ಗೇಣಿ ಪಾವತಿ ಮೂಲಕ ಅನುಭವಕ್ಕೆ ಪಡೆಯಬಹುದಾಗಿದೆ ಈ ಸಂಬಂಧ ಅನುಭವದಲ್ಲಿರುವವರಿಗೆ ಯಾವುದೇ ರೀತಿಯ ನೋಟಿಸ್ ನೀಡಲಾಗುವುದಿಲ್ಲ. ಸದರಿ ಆಸ್ತಿಯು ಸಂಪೂರ್ಣವಾಗಿ ಮೈಷುಗರ್ ಕಂಪನಿಯ ಒಡೆತನದಲ್ಲಿದ್ದು, ತೆರವುಗೊಳಿಸಬೇಕು. ಇಲ್ಲವಾದಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಗೋಷ್ಠಿಯಲ್ಲಿ ಮುಖಂಡರಾದ ರಾಮಕೃಷ್ಣ, ಬೋರೇಗೌಡ, ಹೆಚ್.ವಿ. ನಾಗರಾಜು, ಉದಯ್‌ಕುಮಾರ್, ದ್ಯಾವಣ್ಣ, ವಿಜಿ ಕುಮಾರ್ ಇದ್ದರು.

ತವರೂರಿನಿಂದ ಸಂದೇಶ್ ನಾಗರಾಜ್‌ರಿಗೆ ಅಭಿನಂದನೆ



ಟಿಎಪಿಸಿಎಂಎಸ್ ಆಡಳಿತ ಮಂಡಳಿಯಿಂದ ಸಂಸ್ಥೆಯ ನಿರ್ದೇಶಕರಾದ ಸಂದೇಶ್ ನಾಗರಾಜುರನ್ನು ಅಭಿನಂದಿಸಲಾಯಿತು.

ಪಾಂಡವಪುರ, ಆ.30– ವಿಧಾನಪರಿಷತ್ ಮಾಜಿ ಸದಸ್ಯ, ಉದ್ಯಮಿ ಸಂದೇಶ್ ನಾಗರಾಜು ಉದ್ಯಮ, ರಾಜಕೀಯ, ಸಹಕಾರ ಹಾಗೂ ಚಿತ್ರರಂಗ– ಹೀಗೆ ವಿವಿಧ ಕ್ಷೇತ್ರ ದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಡಿ. ಶ್ರೀನಿವಾಸ್ ಹೇಳಿದ್ದಾರೆ.

ಪಟ್ಟಣದ ಟಿಎಪಿಸಿಎಂಎಸ್ ಆಡಳಿತ ಕಚೇರಿಯಲ್ಲಿ ಸಂಸ್ಥೆಯ ನಿರ್ದೇಶಕರೂ ಆದ ಸಂದೇಶ್ ನಾಗರಾಜು ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಸುಮಾರು 60 ವರ್ಷಗಳಿಂದ ಸಿನಿಮಾ, ರಾಜಕೀಯ, ಸಹಕಾರ ಕ್ಷೇತ್ರ ಸೇರಿದಂತೆ ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಟಿಎಪಿಸಿಎಂಎಸ್ ನಿರ್ದೇಶಕರಾಗಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ, ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಕೆಲಸ ಮಾಡುವ ಮೂಲಕ ಜನಸೇವೆ ಮಾಡಿದ್ದಾರೆ. ಟಿಎಪಿಸಿಎಂಎಸ್‌ಗೆ ವೈಯಕ್ತಿಕವಾಗಿ 10 ಲಕ್ಷ ಹಣ ನೀಡಿದ ಕೊಡುಗೈ ದಾನಿಗಳಾಗಿದ್ದಾರೆ. 80 ವಸಂತಗಳನ್ನು ಪೂರೈಸಿರುವ ಇವರು ಮುಂದಿನ ದಿನಗಳಲ್ಲಿ ಮತ್ತಷ್ಟು ಉತ್ತುಂಗ ಸ್ಥಿತಿಗೆ ಏರಲಿ ಎಂದು ಹಾರೈಸಿದರು.

ಇಷ್ಟು ವರ್ಷದಲ್ಲಿ ಸಾಕಷ್ಟು ಸನ್ಮಾನ, ಅಭಿನಂದನೆಗಳನ್ನು ಸ್ವೀಕರಿಸಿದ್ದೇನೆ. ಆದರೆ, ನನ್ನ ಹುಟ್ಟೂರು, ಸ್ವಂತ ತಾಲೂಕಿನಲ್ಲಿ ಸ್ವೀಕರಿಸಿದ ಸನ್ಮಾನ ನನಗೆ ಸಾಕಷ್ಟು ತೃಪ್ತಿ ಹಾಗೂ ಖುಷಿ ತಂದುಕೊಟ್ಟಿದೆ. ಹಾಗಾಗಿ ನಾನು ನಿಮ್ಮೆಲ್ಲರಿಗೂ ಆಭಾರಿಯಾಗಿದ್ದೇನೆ. ಎಂದು ಅವರು ಪ್ರತಿಕ್ರಿಯಿಸಿದರು.

ಟಿಎಪಿಸಿಎಂಎಸ್ ಉಪಾಧ್ಯಕ್ಷೆ ತಿಬ್ಬಮ್ಮ (ಪದ್ಮಮ್ಮ), ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ನಿರ್ದೇಶಕರಾದ ರಾಮಕೃಷ್ಣೇಗೌಡ, ಕೆ.ಎಸ್.ದಯಾನಂದ್, ಶ್ರೀಕಾಂತ್, ಬೆಟ್ಟಸ್ವಾಮಿ ಗೌಡ, ಕಣಿವೆ ಯೋಗೇಶ್, ಪುಷ್ಪಾವತಿ, ಚಿಟ್ಟಿಬಾಬು, ಜಯಶೀಲ, ಮಾಲತಿ, ಕಾರ್ಯದರ್ಶಿ ನವೀನ್ ಕುಮಾರ್, ಅರಳಕುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷ ಸೀತಾಪುರ ವಿಶ್ವನಾಥ್ ಮತ್ತಿತರರು ಹಾಜರಿದ್ದರು

ಸತ್ಯಯಾತ್ರೆಯಲ್ಲಿ ಪಾಲ್ಗೊಳ್ಳಲು ನಿಖಿಲ್ ಕರೆ

ಭಾರತೀನಗರ, ಆ.30– ಸಮಾಜ ಘಾತಕರು, ದುಷ್ಟ ಶಕ್ತಿಗಳು ಶ್ರೀಕ್ಷೇತ್ರ ಧರ್ಮಸ್ಥಳದ ಮೇಲೆ ಕಳಂಕ ತರಲು ಹೊರಟಿವೆ. ಅದನ್ನು ತೊಳೆಯುವುದಕ್ಕಾಗಿ ಪಕ್ಷದಿಂದ ಧರ್ಮಸ್ಥಳ ಸತ್ಯಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿ ದ್ದಾರೆ.



ದೊಡ್ಡರಸಿನಕೆರೆಯ ಕ್ರಿಕೆಟ್ ಪಂದ್ಯಾವಳಿಗೆ ನಿಖಿಲ್ ಕುಮಾರಸ್ವಾಮಿ ಚಾಲನೆ ನೀಡಿದರು.

ಸಮೀಪದ ಚಿಕ್ಕಮರೀಗೌಡನದೊಡ್ಡಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ದೊಡ್ಡರಸಿನಕೆರೆ ಮುಟ್ಟನಹಳ್ಳಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ (ಡಿಎಂಪಿಎಲ್) ಚಾಲನೆ ನೀಡಿ ಮಾತನಾಡಿದ ಅವರು, ದೇಶ ವಿದೇಶಗಳಿಂದ ಕೋಟ್ಯಾಂತರ ಭಕ್ತಾದಿಗಳನ್ನು ಹೊಂದಿರುವ ಕ್ಷೇತ್ರಕ್ಕೆ ಅಪಮಾನ ಮಾಡಲು ಮುಂದಾಗಿದ್ದಾರೆ. ಈ ಕಳಂಕವನ್ನು ಹೋಗಲಾಡಿಸಲು ನಮ್ಮ ಜೆಡಿಎಸ್‌ನಿಂದ 25 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು, ಅಭಿಮಾನಿಗಳು ಧರ್ಮಸ್ಥಳ ಸತ್ಯಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಚಿಕ್ಕವಯಸ್ಸಿನಿಂದಲೂ ಮಂಜುನಾಥ ಸ್ವಾಮಿ, ಅಣ್ಣಪ್ಪಸ್ವಾಮಿಯ ಸ್ಮರಣೆಯಲ್ಲಿಯೇ ಲಕ್ಷಾಂತರ ಜನ ಜೀವಿಸುತ್ತಿದ್ದು, ಕೆಲ ಪಟ್ಟಭದ್ರ ಹಿತಾಸಕ್ತಿಗಳು ಮಂಜುನಾಥ ನೆಲೆಸಿರುವ ಕ್ಷೇತ್ರಕ್ಕೆ ಕಳಂಕ ತರಲು ಯತ್ನಿಸಿದ್ದು, ಇದನ್ನು ತೊಡೆದು ಹಾಕುವ ದೃಷ್ಟಿಯಿಂದ ಸತ್ಯಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ಹಾಗಾಗಿ ಎಲ್ಲಾ ಭಕ್ತರು, ಜನರು ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಿ ಯಶಸ್ವಿಗೊಳಿಸಿಕೊಡಬೇಕೆಂದು ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿ, ಧರ್ಮಸ್ಥಳ ಸತ್ಯಯಾತ್ರೆಯಲ್ಲಿ ಯಾವುದೇ ರಾಜಕೀಯ ಬೆರಸುವಂತದ್ದಲ್ಲ, ಪಕ್ಷಾತೀತವಾಗಿ ಮಾಡುವಂತದ್ದಾಗಿದೆ. 700, 800 ವರ್ಷಗಳ ಇತಿಹಾಸ ಇರುವಂತಹ ಧರ್ಮಸ್ಥಳಕ್ಕೆ ಬಂದಿರುವ ಕಳಂಕವನ್ನು ತೊಳೆದು ಹಾಕುವ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಲು ಧರ್ಮಸ್ಥಳ ಸತ್ಯಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಪಕ್ಷಾತೀತವಾಗಿ ಎಲ್ಲರೂ ಭಾಗವಹಿಸಬೇಕೆಂದು ಮನವಿ ಮಾಡಿದರು.

ಬಾನು ಮುಷ್ತಾಕ್ ಹಿಂದೂ ವಿರೋಧಿ

ನಾಡಹಬ್ಬ ದಸರಾವನ್ನು ಹಿಂದಿನಿಂದಲೂ ಪ್ರಗತಿಪರ ಚಿಂತಕರು, ಲೇಖಕರು, ಸಮಾಜ ಸುಧಾರಕರಿಂದ ಉದ್ಘಾಟನೆ ಮಾಡಿಸುತ್ತಾ ಬರಲಾಗುತ್ತಿದೆ. ಈ ಬಾರಿ ಆಯ್ಕೆಯಾಗಿರುವ ಬಾನು ಮುಷ್ತಾಕ್ ಅರಿಸಿನ ಕುಂಕುಮ, ನಾಡಧ್ವಜದ ಬಗ್ಗೆ ಲಘುವಾಗಿ ಮಾತನಾಡಿರುವುದು ಗಮನಿಸಿದಲ್ಲಿ ಹಿಂದೂ ಸಮಾಜದ ಬಗ್ಗೆ ಅವರಿಗಿರುವ ವಿರೋಧಿತನವನ್ನು ತೋರಿಸುತ್ತದೆ ಹಿಂದೂ ವಿರೋಧಿ ಮನಸ್ಥಿತಿಯಿರುವಂತಹವರನ್ನು ನಾಡಹಬ್ಬ ದಸರಾ ಉದ್ಘಾಟನೆಗೆ ಆಹ್ವಾನಿಸುವ ನಿರ್ಧಾರ ಕೈಬಿಟ್ಟು, ಇನ್ನೂ ಉತ್ತಮರನ್ನು ಆಯ್ಕೆ ಮಾಡಬೇಕೆಂದು ಒತ್ತಾಯಿಸಿದರು.

ಜಾ.ದಳ ತಾಲೂಕು ಘಟಕದ ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ರಾಜ್ಯ ಘಟಕದ ಕಾರ್ಯದರ್ಶಿ ಕೆಸ್ತೂರು ಬಿಳಿಯಪ್ಪ, ಮನ್ಮುಲ್ ಮಾಜಿ ಅಧ್ಯಕ್ಷ ರಾಮಚಂದ್ರು ಅಪ್ಪ ಪಿ.ಗೌಡ, ಗುರುದೇವರಹಳ್ಳಿ ಅರವಿಂದ್, ಕರಡಕೆರೆ ಹನುಮಂತೇಗೌಡ, ಡಿ.ಎ.ಕೆರೆ ಪ್ರದೀಪ್, ಚಿಕ್ಕಹುಚ್ಚೇಗೌಡ, ಸೊಸೈಟಿ ಅಧ್ಯಕ್ಷ ಮಹೇಶ್, ಕಾರ್ಯಕ್ರಮದ ಆಯೋಜಕರಾದ ನಂದನ್, ಹರ್ಷಿತ್‌ಗೌಡ, ಸುದರ್ಶನ, ಅಭಿಷೇಕ್, ನಿಶಾಂತ್, ಗೌತಮ್, ಬಸವರಾಜು, ಶಿವಲಿಂಗ, ಸಂದೀಪ್, ಕಿರಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಹಲಗೂರು, ಆ,30– ಹಲಗೂರು ಸಮೀಪದ ಬೆನಮನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೃಷ್ಣೇಗೌಡ ಹಾಗೂ ಉಪಾಧ್ಯಕ್ಷರಾಗಿ ರತ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೃಷ್ಣೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರತ್ನಮ್ಮ ಬಿಟ್ಟು ಬೇರಾರೂ ನಾಮಪತ್ರ ಸಲ್ಲಿಸದ ಕಾರಣ, ಚುನಾವಣಾ ಅಧಿಕಾರಿ ಜಿ.ಎಂ.ರಾಮಕೃಷ್ಣ ಇವರನ್ನೇ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ಸಂಘದ ಶ್ರೇಯೋಭಿವೃದ್ಧಿಗೆ ಎಲ್ಲಾ ಸದಸ್ಯರ ಸಹಕಾರ ಅಗತ್ಯ, ನನ್ನ ಅಧಿಕಾರಾವಧಿಯಲ್ಲಿ ಎಲ್ಲ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಸಂಘದ ಏಳಿಗೆಗೆ ದುಡಿಯುವುದಾಗಿ ಕೃಷ್ಣೇಗೌಡ ಆಶ್ವಾಸನೆ ನೀಡಿದರು. ನಿರ್ದೇಶಕರಾದ ಬಿ.ಸಿ.ಭೀಮೇಗೌಡ, ಜಿ.ರಮೇಶ್, ಬಿ.ಪಿ.ಪ್ರಕಾಶ್, ಬಿ.ಎಸ್. ತೇಜಸ್ವಿನ್, ಚನ್ನಬಸಮ್ಮ, ಸುಧಾ, ಬಿ.ಎಂ.ನಾಗರಾಜು ಉಪಸ್ಥಿತರಿದ್ದರು.



ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಖಂಡಿಸಿ ಹುಣಸೂರಲ್ಲಿ ಬಿಜೆಪಿ ಪ್ರತಿಭಟನೆ



ಸಂವಿಧಾನ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ಮುಖಂಡರು, ಕಾರ್ಯಕರ್ತರು.

ಹುಣಸೂರು: ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಾಲಯ ಹಾಗೂ ಧರ್ಮಾಧಿಕಾರಿ ಡಾ.ವೀರೇಂದ್ರಹೆಗ್ಗಡೆಯವರ ವಿರುದ್ಧ ನಡೆಯುತ್ತಿರುವ ಷಡ್ಯಂತರ ಖಂಡಿಸಿ ಬಿಜೆಪಿ ಪಕ್ಷದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಸೇರಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಈ ವೇಳೆ ಮಾತನಾಡಿದ ನಗರಸಭೆ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ. ಬಿಜೆಪಿ ತಾಲೂಕು ಅಧ್ಯಕ್ಷ ಕಾಂತರಾಜು, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಬಿಳಿಕೆರೆ ಪ್ರಸನ್ನ ಮತ್ತಿತರರು ಲಕ್ಷಾಂತರ ಭಕ್ತರ ಆರಾಧ್ಯ ದೈವ, ವಿಶ್ವದಾದ್ಯಂತ ಭಕ್ತ ಸಮೂಹ ಹೊಂದಿರುವ ಸತ್ಯ, ನ್ಯಾಯಕ್ಕೆ ಹೆಸರಾಗಿರುವ ಧರ್ಮಸ್ಥಳದ ಮಂಜುನಾಥ ಸ್ವಾಮಿಗೆ ಅಪಚಾರ ಸಲ್ಲದು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ಜನಕಲ್ಯಾಣ ಕಾರ್ಯಕ್ರಮ ಸಹಿಸದ ಎಡಪಂಥೀಯರು ನಡೆಸುತ್ತಿರುವ ಷಡ್ಯಂತರಕ್ಕೆ ಕುಮ್ಮಕ್ಕು ನೀಡುತ್ತಿರುವ ಕಾಂಗ್ರೆಸ್ ಸರ್ಕಾರ ತಕ್ಷಣವೇ ಬೇಷರತ್ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು.

ತಾಲೂಕು ಮಾಜಿ ಅಧ್ಯಕ್ಷ ಹನಗೋಡು ಮಂಜುನಾಥ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಗ್ರಾಮಾಭಿವೃದ್ಧಿ, ಹಳ್ಳಿಗಳಲ್ಲಿ ಮಹಿಳೆಯರ ಜಾಗೃತಿ, ಆರ್ಥಿಕ ಸ್ವಾವಲಂಬನೆ, ದೇವಾಲಯಗಳ ಜೀರ್ಣೋದ್ದಾರ, ನಿರ್ಗತಿಕರಿಗೆ ಉಚಿತ ಮನೆ ನಿರ್ಮಾಣ, ಮಾಸಾಶನ ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನಮನ್ನಣೆ ಗಳಿಸಿರುವುದನ್ನು ಸಹಿಸದೆ ಡಾ.ವೀರೇಂದ್ರ ಹೆಗ್ಗಡೆ ಮತ್ತವರ ಕುಟುಂಬದವರ ವಿರುದ್ಧ ವ್ಯಾಪಕ ಅಪಪ್ರಚಾರ ನಡೆಸುತ್ತಿದ್ದಾರೆ ಎಂದರು.

ಜಿ.ಪಂ. ಮಾಜಿ ಸದಸ್ಯ ನಾಗರಾಜ ಮಲ್ಲಾಡಿ ಮಾತನಾಡಿದರು. ನಂತರ ತಾಲೂಕು ಆಡಳಿತಸೌಧದವರೆಗೆ ಮೆರವಣಿಗೆಯಲ್ಲಿ ತೆರಳಿ ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ನಗರಸಭಾ ಸದಸ್ಯ ವಿವೇಕ್, ಮಹಿಳಾ ಘಟಕದ ಜಿಲ್ಲಾ ಉಪಾಧ್ಯಕ್ಷೆ ವೆಂಕಟಮ್ಮ, ಅಧ್ಯಕ್ಷೆ ಕಮಲಮ್ಮ, ಮಂಜುಳಮ್ಮ, ಮುಖಂಡರಾದ ಸವಿತಾಚೌವ್ಹಾಣ್, ವಕೀಲ ಶಿವಕುಮಾರ್, ಚಂದ್ರು, ಅಶೋಕ್, ನಟರಾಜ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ, ಗ್ರಾಮೀಣಾಭಿವೃದ್ಧಿ ಬ್ಯಾಂಕಿನಿಂದ

ಮುಂದಿನ ವರ್ಷದಿಂದ ರೈತರುಗಳಿಗೆ 20 ಕೋಟಿ ಕೃಷಿ ಸಾಲ

ತಿ.ನರಸೀಪುರ, ಆ.30– ಮುಂದಿನ ಆರ್ಥಿಕ ವರ್ಷದಲ್ಲಿ ರೈತರುಗಳಿಗೆ 20 ಕೋಟಿ ರೂ.ಗಳ ಕೃಷಿ ಸಾಲ ನೀಡಲು ಉದ್ದೇಶಿಸಲಾಗಿದೆ ಎಂದು ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ ತಿಳಿಸಿದ್ದಾರೆ.



ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ಬ್ಯಾಂಕಿನ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಉದ್ಘಾಟಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಬ್ಯಾಂಕಿನ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2022–23ನೇ ಸಾಲಿನಲ್ಲಿ ಬ್ಯಾಂಕಿನಿಂದ ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರುಪಾವತಿ ಮಾಡದೇ ಸುಸ್ತಿದಾರರಾದ ಹಿನ್ನೆಲೆಯಲ್ಲಿ ಬ್ಯಾಂಕ್ ನಷ್ಟ ಅನುಭವಿಸಬೇಕಾಯಿತು. ಆದರೆ ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ಸರ್ವ ಸದಸ್ಯರು ಹಾಗೂ ಬ್ಯಾಂಕಿನ ಅಧಿಕಾರಿಗಳ ಕ್ರಿಯಾಶೀಲ ಕಾರ್ಯಾಚರಣೆಯಿಂದ ಸಾಲ ವಸೂಲಾತಿ ಉತ್ತಮವಾಗಿ ನಡೆದಿದ್ದು ಬ್ಯಾಂಕು ಲಾಭಾಂಶದೆಡೆಗೆ ದಾಪುಗಾಲು ಹಾಕಿದೆ, ಹಾಗಾಗಿ ಪ್ರಸಕ್ತ ವರ್ಷದಲ್ಲಿ 487.76 ಲಕ್ಷ ರೂ.ಗಳ ಸಾಲ ವಿತರಣೆ ಮಾಡಲಾಗಿದ್ದು, ಮುಂದೆ 20 ಕೋಟಿ ರೂ.ಗಳ ಸಾಲ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಬ್ಯಾಂಕಿನ ಷೇರುದಾರರು ಸರಿಯಾದ ದಾಖಲಾತಿಯೊಂದಿಗೆ ಸಾಲಕ್ಕೆ ಅರ್ಜಿ ಸಲ್ಲಿಸಿದರೆ ಯಾವುದೇ ರೈತರಿಗೂ ಸಾಲ ನಿರಾಕರಣೆ ಮಾಡದೇ ಎಲ್ಲ ರೈತರಿಗೂ ಸಾಲ ವಿತರಣೆ ಮಾಡಲಾಗುತ್ತದೆ.ಆದರೆ ಸಾಲ ಪಡೆದ ರೈತರು ಸಕಾಲಕ್ಕೆ ಪಡೆದ ಸಾಲವನ್ನು ಮರುಪಾವತಿ ಮಾಡುವ ಮೂಲಕ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರ ನೀಡಬೇಕಿದೆ ಎಂದರು.

ಬ್ಯಾಂಕು 88 ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ್ದು, ತಾಲೂಕಿನಾದ್ಯಂತ ರೈತ ಸಮುದಾಯಕ್ಕೆ ಅರ್ಥಪೂರ್ಣವಾದ ನಿರಂತರ ಸೇವೆ ಒದಗಿಸುತ್ತಾ ಬಂದಿದೆ. ಸರ್ಕಾರಿ ಆದೇಶದನ್ವಯ ಷೇರಿನ ಮುಖಬೆಲೆಯನ್ನು 1 ಸಾವಿರ ರೂ.ಗಳಿಗೆ ಹೆಚ್ಚಿಸಲಾಗಿದೆ ಮಾರ್ಚ್ 25 ರ ಅಂತ್ಯಕ್ಕೆ 6075 'ಎ' ತರಗತಿ ಸದಸ್ಯತ್ವವನ್ನು ಬ್ಯಾಂಕ್ ಹೊಂದಿದ್ದು, 91.75 ಲಕ್ಷ ಷೇರು ಬಂಡವಾಳವನ್ನು ಹೊಂದಲಾಗಿದೆ ಎಂದು ತಿಳಿಸಿದರು.

ಹೆಚ್ಚಿನ ಸಾಲದ ಗುರಿ: 2024–25 ನೇ ಸಾಲಿಗೆ ಬ್ಯಾಂಕು 487.77 ಲಕ್ಷ ರೂ.ಗಳ ಆರ್ಥಿಕ ಹಂಚಿಕೆ ನೀಡಿದ್ದು, ಮುಂದಿನ ವರ್ಷದಲ್ಲಿ ಅಂದಾಜು 20 ಕೋಟಿ ರೂ.ಗಳ ಸಾಲ ನೀಡಲು ಯೋಜನೆ ರೂಪಿಸಿದೆ. ಕ್ಷೇತ್ರದ ಶಾಸಕರೇ ಮುಖ್ಯಮಂತ್ರಿಗಳಾಗಿರುವುದರಿಂದ ಹೆಚ್ಚಿನ ಆರ್ಥಿಕ ನೆರವು ಕೇಳಲಾಗುತ್ತದೆ. ಸಂಯಕ್ತ ಯೋಜನೆ, ರೇಷ್ಮೆ ಯೋಜನೆ, ಕೋಳಿ ಸಾಕಾಣಿಕೆ ಯೋಜನೆ, ವೈಯಕ್ತಿಕ ಹೈನುಗಾರಿಕೆ ಯೋಜನೆಗಳಲ್ಲಿ 15 ಲಕ್ಷದವರೆಗೂ ಶೇ.3 ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಇರುವುದರಿಂದ ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಕೋರಿದರು.

ಸರ್ಕಾರದ ವತಿಯಿಂದ ಯಶಸ್ವಿನಿ ಯೋಜನೆ ಜಾರಿಗೊಂಡಿದ್ದು ಅದರ ಪ್ರಯೋಜನಕ್ಕೆ ರೈತರು ಮುಂದಾಗಬೇಕು. ಬ್ಯಾಂಕು ರೈತ ಸಮುದಾಯಕ್ಕೆ ಆರ್ಥಿಕ ಸಹಾಯ ಮಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಂ ಡಿದೆ, ತಾಲೂಕಿನ ರೈತರು ಬ್ಯಾಂಕಿನಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಮೂಲಕ ಶೇ.3 ರ ಬಡ್ಡಿ ಸಹಾಯಧನದ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು.

ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕ ಎನ್. ಮಹೇಶ್ 2024–25ನೇ ಸಾಲಿನ ವಾರ್ಷಿಕ ವರದಿ ಮಂಡಿಸಿದರು. ಕಾರ್ಯಕ್ರಮಕ್ಕೆ ಮೊದಲು ಸದರಿ ಸಾಲಿನಲ್ಲಿ ಮರಣ ಹೊಂದಿದ ಸಹಕಾರಿಗಳಿಗೆ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬ್ಯಾಂಕಿ ನಿಂದ ಸಾಲ ಪಡೆದು ಕ್ರಮವಾಗಿ ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದ 15 ಮಂದಿ ರೈತರನ್ನು ಸನ್ಮಾನಿಸಲಾಯಿತು.

ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷ ಎನ್.ಎನ್. ಮಹದೇವಸ್ವಾಮಿ, ನಿರ್ದೇಶಕರಾದ ಕೆ.ವಜ್ರೇಗೌಡ,ಎಂ.ಎಸ್.ಶಿವಮೂರ್ತಿ, ಎನ್.ಲಿಂಗಪ್ಪಾಜಿ, ಎಂ.ನಾಗರತ್ನ, ರಾಜಮಣ್ಣಿ, ಎ.ಎಂ.ಮಹದೇವ, ಎಸ್.ಮಹೇಶ್, ಟಿ.ಎಸ್. ಪ್ರಸನ್ನ, ಸಿ.ಸೋಮಣ್ಣ ಆರ್.ಮಹೇಶ್, ಎನ್. ಅನಿಲ್ ಕುಮಾರ್, ಎಂ.ಕೆ.ಶಿವಕುಮಾರ್, ಬ್ಯಾಂಕಿನ ಪ್ರಭಾರ ಲೆಕ್ಕಿಗ ಪ್ರಭುಸ್ವಾಮಿ, ಟಿ.ಎಂ. ನಾಗರತ್ನ ಬಾಯಿ, ತನುಜ, ಬಿ.ಶಂಕರ ಸೇರಿದಂತೆ ಷೇರುದಾರರು ಹಾಜರಿದ್ದರು.

ಗಾಂಜಾ ಮಾರಾಟ ಯತ್ನ: ವ್ಯಕ್ತಿ ಬಂಧನ




ಹೆಚ್.ಡಿ.ಕೋಟೆ: ಪಟ್ಟಣದ ಗದ್ದಿಗೆ ಸರ್ಕಲ್ ಬಳಿ ಅಕ್ರಮವಾಗಿ ಒಣ ಗಾಂಜಾ ಸೊಪ್ಪು ಮಾರಾಟ ಮಾಡಲು ಹೊಂಚು ಹಾಕುತ್ತಿದ್ದ ವ್ಯಕ್ತಿಯನ್ನು, ಹೆಚ್.ಡಿ.ಕೋಟೆ ಪೊಲೀಸರು ಬಂಧಿಸಿ ಪ್ಯಾಸೆಂಜರ್ ಆಟೋವನ್ನು ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ನಿವಾಸಿ ದೇವರಾಜು ಕುಮಾರ್ @ ಅಪ್ಪು ಕುಮಾರ್ ಬಂಧಿತನಾಗಿದ್ದು, 175 ಗ್ರಾಂ. ಗಾಂಜಾ ಸೊಪ್ಪನ್ನು ಬಿಡಿಬಿಡಿಯಾಗಿ ಪ್ಯಾಕ್ ಮಾಡಿ ಮಾರಾಟ ಮಾಡುತ್ತಿದ್ದಾಗ ಸಿಕ್ಕಿ ಬಿದ್ದಿದ್ದಾನೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಹಾಗೂ ಅಡಿಷನಲ್ ಎಸ್ಪಿ ಮಲ್ಲಿಕ್, ನಾಗೇಶ್, ಹುಣಸೂರು ಉಪ ವಿಭಾಗದ ಡಿವೈಎಸ್ಪಿ ಗೋಪಾಲಕೃಷ್ಣ ಇನ್ಸ್‌ಪೆಕ್ಟರ್ ಗಂಗಾಧರ್, ಅವರ ಮಾರ್ಗದರ್ಶನದಲ್ಲಿ ದಾಳಿ ಮಾಡಿ ಆರೋಪಿ ಮತ್ತು ಮಾಲನ್ನು ವಶಕ್ಕೆ ಪಡೆದು ಪ್ರಕರಣ ದಾಖಲು ಮಾಡಿದ್ದಾರೆ, ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪುಟ್ಟಣ್ಣ ಕಣಗಾಲ್ ಗ್ರಾಮದಲ್ಲಿ ಚಿರತೆ ಸಾವು

ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಪುಟ್ಟಣ್ಣ ಕಣಗಾಲು ಗ್ರಾಮದಲ್ಲಿ ಚಿರತೆಯೊಂದು ಮೃತಪಟ್ಟಿದ್ದು ಇಂದು ಸಂಜೆ ದನ ಮೇಯಿಸಲು ಹೋದ ರೈತರಿಗೆ ಬಿದ್ದಿದ್ದು ರೈತರಿಗೆ ಕಾಣಿಸಿಕೊಂಡು ಅರಣ್ಯ ಇಲಾಖೆ ಮಾಹಿತಿ ನೀಡಿದ್ದಾರೆ.



ಇದೀಗ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಲು ಮೃತಪಟ್ಟಿರುವ ಚಿರತೆ ಯಾವ ರೀತಿ ಮೃತಪಟ್ಟಿದೆ ಎಂಬುದನ್ನು ಅರಣ್ಯ ಇಲಾಖೆ ಖಚಿತ ಪಡಿಸಬೇಕಾಗಿದೆ.

ಇಂದು ಬನ್ನೂರಿನಲ್ಲಿ ಬೃಹತ್ ಉದ್ಯೋಗ ಮೇಳ

ಬನ್ನೂರು: ಪಟ್ಟಣದಲ್ಲಿ ಸಂಸದ ಸುನಿಲ್‌ಬೋಸ್ ಹುಟ್ಟುಹಬ್ಬ ಅಂಗವಾಗಿ ಬೃಹತ್ ಉದ್ಯೋಗಮೇಳವನ್ನು ಭಾನುವಾರ (ಆ.31) ಹಮ್ಮಿಕೊಂಡಿದ್ದು, ಅದರ ಪೂರ್ವಭಾವಿ ಸಿದ್ಧತೆಯನ್ನು ಕಾಂಗ್ರೆಸ್ ಮುಖಂಡರು ಶನಿವಾರ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬನ್ನೂರು ಟೌನ್ ಕಾಂಗ್ರೆಸ್ ಅಧ್ಯಕ್ಷ ಮುನಾವರ್ ಪಾಷ, ಸಂಸದರ ಹುಟ್ಟುಹಬ್ಬ ಅಂಗವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉದ್ಯೋಗಮೇಳವನ್ನು ಆಯೋಜನೆ ಮಾಡಿದ್ದು, ಎಸ್‌ಎಸ್‌ಎಲ್‌ಸಿಯಿಂದ ಯಾವುದೇ ಮಾಸ್ಟರ್ ಡಿಗ್ರಿ ಪಡೆದವರು ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೇಳದ ಸದುಪಯೋಗ ಪಡೆದುಕೊಳ್ಳಬಹುದು ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು ಎನ್ನುವಂತ ಮಹತ್ವಕಾಂಕ್ಷೆಯಿಂದ ಈ ಕಾರ್ಯಕ್ರಮವನ್ನು ಬನ್ನೂರು ಕಾಂಗ್ರೆಸ್ ಮುಖಂಡರ ನೇತೃತ್ವದಲ್ಲಿ ಆಯೋಜಿಸಲಾಗಿದೆ.

ಮಗಳ ಮೇಲೆ ನಿರಂತರ ಅತ್ಯಾಚಾರ: ಅಪ್ಪನ ಬಂಧನ

ಬೆಟ್ಟದಪುರ: ಗ್ರಾಮವೊಂದರಲ್ಲಿ ಬಾಲಕಿಯೊಬ್ಬಳು ಎಂಟು ತಿಂಗಳ ಗರ್ಭಿಣಿಯಾಗಿದ್ದು, ಮಗಳನ್ನೇ ಲೈಂಗಿಕವಾಗಿ ಬಳಸಿಕೊಂಡ ಆರೋಪದ ಮೇಲೆ ತಂದೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅನಾರೋಗ್ಯದಿಂದ ಬಾಲಕಿ ಆಸ್ಪತ್ರೆಗೆ ದಾಖಲಾಗಿದ್ದ ವೇಳೆ ಈ ಪ್ರಕರಣ ಬೆಳಕಿಗೆ ಬಂದಿದೆ. ವೈದ್ಯರು ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಬಾಲಕಿಯನ್ನು ವಿಚಾರಿಸಿದಾಗ ತಂದೆಯೇ ಒಂದು ವರ್ಷದಿಂದ ನಿರಂತರವಾಗಿ ಲೈಂಗಿಕವಾಗಿ ಬಳಸಿಕೊಂಡಿರುವುದಾಗಿ ತಿಳಿಸಿದ್ದಾಳೆ. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಆರೋಪಿಯನ್ನು ಪೋಕ್ಸೊ ಕಾಯ್ದೆಯಡಿ ಬಂಧಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಬೆಟ್ಟದಪುರ ಪೊಲೀಸರು ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ಬಲರಾಮ ಜಯಂತಿ ಆಚರಣೆ

ಟಿ.ನರಸೀಪುರ, ಆ.30– ಭಾರತಿ ಕಿಸಾನ್ ಸಂಘದ ವತಿಯಿಂದ ಬನ್ನಳ್ಳಿ ಹುಂಡಿ ಗ್ರಾಮ ಘಟಕದ ವತಿಯಿಂದ ಶ್ರೀ ರೈತರ ಆರಾಧ ದೈವ ಭಗವಾನ್ ಬಲರಾಮರ ಜಯಂತಿಯನ್ನು ಅದ್ದೂರಿಯಾಗಿ ಗ್ರಾಮ ಘಟಕದ ಅಧ್ಯಕ್ಷರಾದ ಜಯಶೀಲ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.



ಶ್ರೀ ಬಲರಾಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವ ಮುಖಂಡರು.

ಶ್ರೀ ಬಲರಾಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮುಖಾಂತರ ಕಾರ್ಯಕ್ರಮವನ್ನು ಗ್ರಾಮ ಘಟಕದ ಅಧ್ಯಕ್ಷರಾದ ಜಯಶೀಲ ಅವರು ಗ್ರಾಮ ಗ್ರಾಮಗಳಲ್ಲಿ ಗ್ರಾಮ ಘಟಕಗಳನ್ನು ಮಾಡಿದರೆ ಗ್ರಾಮಗಳಿಗೆ ಅನುಕೂಲವಾಗುತ್ತದೆ. ನಮ್ಮೂರಿನ ಕೆಲಸವನ್ನು ನಾವೇ ಮಾಡಲು ಜವಾಬ್ದಾರಿ ಸಿಗುತ್ತದೆ ಎಂದು ಗ್ರಾಮಸ್ಥರಲ್ಲಿ ಮನವಿ ಮಾಡಿದರು

ಸಭೆಯನ್ನು ಉದ್ದೇಶಿ ಮಾತನಾಡಿದ ತಾಲೂಕು ಅಧ್ಯಕ್ಷ ನಾಗಲಗೆರೆ ಶಿವಕುಮಾರ್ ಅವರು ಭಗವಾನ್ ಬಲರಾಮರು ರೈತರಿಗೆ ಭೂಮಿಯನ್ನು ಉಳುಮೆ ಮಾಡಿ ಬೇಸಾಯ ಮಾಡುವಂತೆ ಕಲಿಸಿಕೊಟ್ಟವರು. ಯಮುನಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಿ ಜಮೀನಿಗೆ ನೀರು ಹರಿಯುವಂತೆ ಮಾಡಿದವರು ಬಲರಾಮರು ಎಂದರು.

ಹಾಗೂ ವಿಸ್ತಾರವಾಗಿ ಜಿಲ್ಲಾಧ್ಯಕ್ಷರಾದ ಪ್ರಭು ಸ್ವಾಮಿ ಚಿಕ್ಕಹೊಮ್ಮ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರವಿ ಗಂಡತೂರುರವರು ರೈತರ ಮನಮುಟ್ಟುವಂತೆ ಭಾಷಣ ಮಾಡಿದರು ಆ ಸಮಯದಲ್ಲಿ ನಂಜನಗೂಡು ಉಪಾಧ್ಯಕ್ಷರಾದ ಅಶೋಕ್‌ರವರು ಸಂಘಟನಾ ಕಾರ್ಯದರ್ಶಿಗಳಾದ ಸೋಮಶೇಖರ್‌ರವರು ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ಮಹಾದೇವ ಪ್ರಭು ನಾಗರಾಜು ನಿಲ್ಸೋಗೆ ದುಂಡ ನಾಯಕರು ಸಿದ್ದರಾಜು, ಆನಂದ ರಂಗಸ್ವಾಮಿ ವಿರೂಪಾಕ್ಷ ಮಲ್ಲಿಕಾರ್ಜುನ ಗಿರೀಶ ಸತೀಶ್ ಮೂರ್ತಿ, ಗೌಡರು ವಿಷಕಂಠ ಹಾಗೂ ಮಹೇಶ್ ಮಂಜು ಅಡಿಗೆ ಭಟ್ರು ನವೀನ್ ಮಧು ಮಂಜುನಾಥ್ ಮೇಗಡಹಳ್ಳಿ ಮುಕುಂದ ಹಾಗೂ ಗ್ರಾಮದ ಯಜಮಾನರು ಇದ್ದರು.

ಇನ್‌ಸ್ಟಾಗ್ರಾಂನಲ್ಲಿ ಹುಡುಗಿ, ಆಂಟಿಯರಿಗೆ ಡೇಟಿಂಗ್‌ಗೆ ಆಹ್ವಾನ : ಆರೋಪಿ ಬಂಧನ

ಮಡಿಕೇರಿ,ಆ.30– ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಮಡಿಕೇರಿಯಲ್ಲಿ ಹುಡುಗಿ, ಆಂಟಿ ಡೇಟಿಂಗ್ ಮಾಡಲಿಕ್ಕೆ ಸರ್ವೀಸ್ ಬೇಕಾದ್ರೆ ಕಾಲ್ ಮಾಡಿ ಎಂದು ಮೊಬೈಲ್ ಸಂಖ್ಯೆ ನೀಡಿ ವಿಡಿಯೋ ತುಣುಕನ್ನು ಅಪ್ ಲೋಡ್ ಮಾಡಿದ್ದ ಆರೋಪಿಯನ್ನು ಸುಮೋಟೋ ಕೇಸ್ ಅಡಿ ಮಡಿಕೇರಿ ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಬೆಳಗಲಿ ಗ್ರಾಮ ನಿವಾಸಿ ನಾಗಪ್ಪ ಹನುಮಂತ ಲಮಾಣಿ(26) ಎಂಬಾತನೇ ಬಂಧಿತ ಆರೋಪಿಯಾಗಿದ್ದಾನೆ. ಆರೋಪಿಯ ಖಾತೆಯಲ್ಲಿದ್ದ 80 ಸಾವಿರ ನಗದು, 5 ಸಿಮ್ ಕಾರ್ಡ್‌ಗಳು, ಹಾಗೂ 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಆ.21 ರಂದು ಆರೋಪಿ ಸಾಮಾಜಿಕ ಜಾಲ ತಾಣ ಇನ್‌ಸ್ಟಾಗ್ರಾಂನಲ್ಲಿ 'ಮಡಿಕೇರಿಯಲ್ಲಿ ಹುಡುಗಿ ಆಂಟಿ ಡೇಟಿಂಗ್ ಮಾಡಲಿಕ್ಕೆ ಸರ್ವೀಸ್ ಬೇಕಾದ್ರೆ ಕಾಲ್ ಮಾಡಿ' ಎಂದು ಹೇಳಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮತ್ತು ಸಾರ್ವಜನಿಕ ಸ್ಥಳಗಳ ವಿಡಿಯೋ ಮಾಡಿ ಇನ್‌ಸ್ಟಾಗ್ರಾಂನಲ್ಲಿ ಅಪ್ ಲೋಡ್ ಮಾಡಿದ್ದ. ಈ ವಿಚಾರ ಬೆಳಕಿಗೆ ಬಂದ ತಕ್ಷಣವೇ ಸುಮೋಟೋ ಕೇಸ್ ದಾಖಲಿಸಿಕೊಂಡ ಮಡಿಕೇರಿ ನಗರ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.


ನಾಗಪ್ಪ ಹನುಮಂತ ಲಮಾಣಿ

ಆರೋಪಿ ಈ ಹಿಂದೆ ತನ್ನ ಪತ್ನಿಯೊಂದಿಗೆ ಮಡಿಕೇರಿಗೆ ಆಗಮಿಸಿ ಇಲ್ಲಿನ ಲಾಡ್ಜ್ ಒಂದರಲ್ಲಿ ಪತ್ನಿಯನ್ನು ಬಿಟ್ಟು ಸಾರ್ವಜನಿಕ ಸ್ಥಳಗಳ ವಿಡಿಯೋ ಮಾಡಿ ಹೈದರಾ ಬಾದ್ ಮೂಲದ ಯುವತಿಯರ ಫೋಟೋ ಬಳಸಿಕೊಂಡು ಆ್ಯಪ್ ಮೂಲಕ ಸಾರ್ವಜನಿಕರನ್ನು ವಂಚಿಸಲು ವಿಡಿಯೋ ಅಪ್ ಲೋಡ್ ಮಾಡಿದ್ದ. ಈ ವಿಡಿಯೋವನ್ನು ನೋಡಿ ಮಡಿಕೇರಿ ಮತ್ತು ಕುಶಾಲನಗರದ ಕೆಲವರು ಹಣವನ್ನೂ ಹಾಕಿ ಮೋಸ ಹೋಗಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ ನೀಡಿದ್ದಾರೆ. ಒಂದು ತಿಂಗಳ ಅವಧಿಯಲ್ಲಿ ಆರೋಪಿ 30ರಿಂದ 40 ಸಾವಿರ ರೂ. ಹಣವನ್ನು ಸಂಗ್ರಹಿಸಿರುವುದು ಕಂಡು ಬಂದಿದೆ. ಈ ಕುರಿತು ಮತ್ತಷ್ಟು ತನಿಖೆ ಮುಂದುವರೆದಿದೆ ಎಂದು ವಿವರಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಇಂತಹ ಕೃತ್ಯಗಳು ಕಂಡು ಬಂದಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಸಮಾಜದ ಸ್ವಾಸ್ಥ್ಯ ಹಾಳು ಗೆಡಹುವ ಜಾಲತಾಣಗಳಲ್ಲಿ ಹಣ ಹೂಡಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗುತ್ತದೆ. ಇದೀಗ ಬಂಧಿತ ಆರೋಪಿಯ ವಿರುದ್ಧ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಾರ್ವಜನಿಕರು ಈ ಕುರಿತು ಎಚ್ಚರಿಕೆ ವಹಿಸಬೇಕು ಎಂದು ಎಸ್.ಪಿ. ರಾಮರಾಜನ್ ತಿಳಿಸಿದರು.

ಕುಶಾಲನಗರದಲ್ಲಿ 101 ಗಣಪತಿಗಳಿಗೆ ರಂಗಪೂಜೆ



ಮಡಿಕೇರಿ,ಆ.30– ಗಣೇಶೋತ್ಸವದ ಅಂಗವಾಗಿ ಕುಶಾಲನಗರದ ರಥ ಬೀದಿಯ ಕನ್ನಿಕಾ ಪರಮೇಶ್ವರಿ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವ 101 ಗಣಪತಿ ಮೂರ್ತಿಗಳಿಗೆ ಶ್ರದ್ಧಾಭಕ್ತಿಯಿಂದ ರಂಗಪೂಜೆ ನಡೆಯಿತು. ಕುಶಾಲನಗರ ವಾಸವಿ ಯುವಕ ಸಂಘದ ವತಿಯಿಂದ ಆರ್ಯವೈಶ್ಯ ಮಂಡಳಿಯ ಸಹಯೋಗದೊಂದಿಗೆ 101 ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಭಕ್ತರ ಗಮನ ಸೆಳೆಯುತ್ತಿದೆ. ಪ್ರತಿದಿನ ವಿಶೇಷ ಪೂಜಾ ಕೈಂಕರ್ಯಗಳು ನಡೆಯುತ್ತಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆ.31ರಂದು 101 ಗಣಪತಿ ಮೂರ್ತಿಗಳನ್ನು ಭವ್ಯ ಮೆರವಣಿಗೆಯ ಮೂಲಕ ಕೊಂಡೊಯ್ದು ವಿಸರ್ಜಿಸಲಾಗುವುದು ಎಂದು ಆರ್ಯವೈಶ್ಯ ಮಂಡಳಿ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಅಕ್ರಮ ಸಂಬಂಧ; ಕಾರ್ಮಿಕನ ಕೊಲೆ

ಕುಶಾಲನಗರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ದುರಂತ

ಮಡಿಕೇರಿ,ಆ.30– ಪತ್ನಿಯೊಂದಿಗೆ ಅನೈತಿಕ ಸಂಪರ್ಕ ಹೊಂದಿರುವ ಶಂಕೆ ಹಿನ್ನೆಲೆಯಲ್ಲಿ ಶುಂಠಿ ಕೆಲಸಕ್ಕೆ ಕೇರಳದಿಂದ ಕುಶಾಲನಗರದ ಬಸವನಹಳ್ಳಿಗೆ ಬಂದಿದ್ದ ಕಾರ್ಮಿಕನನ್ನು ಕೊಲೆಗೈದ ಘಟನೆ ಕುಶಾಲನಗರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೇರಳ ಕೊಟ್ಟಾಯಂ ನಿವಾಸಿ ಮುರಳಿ (48) ಎಂಬಾತನೇ ಕೊಲೆಯಾದ ವ್ಯಕ್ತಿಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಥ(25) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣಾ ವ್ಯಾಪ್ತಿಯ ಬಸವನಹಳ್ಳಿಯಲ್ಲಿ ಮಣಿಕಂಠ ಎಂಬುವರು ಶುಂಠಿ ಕೃಷಿ ನಡೆಸುತ್ತಿದ್ದು, ಕೊಟ್ಟಾಯಂನ ಮುರಳಿ ಎಂಬುವರನ್ನು ಮೇಲ್ವಿಚಾರಣೆ ಕೆಲಸಕ್ಕೆಂದು ಇಲ್ಲಿ ನೇಮಿಸಿಕೊಂಡಿದ್ದರು. ಇವರ ಜಮೀನಿನ ಪಕ್ಕದಲ್ಲೇ ದಂಪತಿ ವಾಸವಾಗಿದ್ದು, ಮುರಳಿ ತನ್ನ ಪತ್ನಿ ಜೊತೆ ಅಕ್ರಮ ಸಂಬಂಧ ಹೊಂದಿರುವ ಕುರಿತು ಆತ ಸಂಶಯ ವ್ಯಕ್ತಪಡಿಸಿದ್ದ. ಶುಕ್ರವಾರ ರಾತ್ರಿ ಇದೇ ವಿಚಾರವಾಗಿ ಹೆಂಡತಿ ಜೊತೆ ಗಲಾಟೆ ಮಾಡಿದ್ದ. ಆಕೆಯ ಕಾಲುಗಳಿಗೆ ರಾಡ್‌ನಿಂದ ಬಲವಾಗಿ ಹೊಡೆದು ಗಂಭೀರವಾಗಿ ಗಾಯಗೊಳಿಸಿದ್ದ. ಮಾತ್ರವಲ್ಲದೇ ಮುರಳಿ ಮೇಲೂ ದೊಣ್ಣೆಯಿಂದ ತೀವ್ರ ಹಲ್ಲೆ ನಡೆಸಿ ಕೊಲೆ ಮಾಡಿದ್ದ.



ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಕೊಲೆ ಆರೋಪದಲ್ಲಿ ತೀರ್ಥ ಎಂಬಾತನನ್ನು ಬಂಧಿಸಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿಗಳು ಮತ್ತು ಸಿಬ್ಬಂದಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ. ಗಾಯಾಳು ಜ್ಯೋತಿ ಎಂಬಾಕೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ನಾಳೆ ಸಿಎನ್‌ಸಿಯಿಂದ 30ನೇ ವರ್ಷದ ಕೈಲ್ ಪೊವ್ದ್ ಹಬ್ಬ ಆಚರಣೆ

ಮಡಿಕೇರಿ,ಆ.30– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಸೆ.1 ರಂದು ಮಡಿಕೇರಿ ಹೊರ ವಲಯದ ಕ್ಯಾಪಿಟಲ್ ವಿಲೇಜ್ ಮಂದ್‌ನಲ್ಲಿ 30ನೇ ವರ್ಷದ ಕೈಲ್ ಪೊವ್ದ್ ಹಬ್ಬವನ್ನು ಸಾರ್ವತ್ರಿಕವಾಗಿ ಆಚರಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಅವರು ತಿಳಿಸಿದ್ದಾರೆ.


ಎನ್.ಯು.ನಾಚಪ್ಪ

ಭಾನುವಾರ ಬೆಳಿಗ್ಗೆ 10 ಗಂಟೆಗೆ ಮಂದ್‌ನಲ್ಲಿ ಕೊಡವರಿಗೆ ಪ್ರಕೃತಿ ವರವಾಗಿ ನೀಡಿರುವ ತೋಕ್‌ಪೂವ್‌ನಿಂದ ಬಂದೂಕುಗಳನ್ನು ಸಿಂಗರಿಸಿ ಪ್ರಾರ್ಥಿಸಲಾಗುವುದು. ನಂತರ ಪೂಜ್ಯ ಸ್ಥಾನದಲ್ಲಿರುವ ಗುರುಕಾರೋಣರಿಗೆ ಮೀದಿ ಅರ್ಪಿಸಿ ಸಿಎನ್‌ಸಿಯ 35 ವರ್ಷದ ಹೋರಾಟಕ್ಕೆ ಕೃಪಾಶೀರ್ವಾದ ಕೋರಲಾಗುವುದು ಎಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಹೆಸರಾಂತ ವೈದ್ಯರು ಹಾಗೂ ಸಮಾಜ ಸೇವಕರೂ ಆದ ಡಾ.ಮಾತಂಡ ಅಯ್ಯಪ್ಪ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಹಬ್ಬದ ಪ್ರಯುಕ್ತ ಕೊಡವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಕೊಡವ ಕೈಲ್ ಪೊವ್ದ್ ಖಾದ್ಯದೊಂದಿಗೆ ಹಬ್ಬದ ಸಂಭ್ರಮಾಚರಣೆ ನಡೆಯಲಿದೆ. ಕೊಡವ ಕೊಡವತಿಯರು ಕೈಲ್ ಪೊವ್ದ್ ಸಾಮೂಹಿಕ ಆರಾಧನೆಯಲ್ಲಿ ಪಾಲ್ಗೊಳ್ಳಲು ಬಂದೂಕು ಮತ್ತು ಒಡಿಕತ್ತಿಯೊಂದಿಗೆ ಆಗಮಿಸುವಂತೆ ನಾಚಪ್ಪ ಕೋರಿದ್ದಾರೆ.

ನಾಳೆ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ

ವಿರಾಜಪೇಟೆ, ಆ.30– ವಿರಾಜಪೇಟೆಯಲ್ಲಿ ಕೈಲ್‌ಪೊಳ್ದ್ ಪ್ರಯುಕ್ತ ಕೂರ್ಗ್ ಮ್ಯಾರ್ಕ್ಸ್‌ಮೆನ್ ವತಿಯಿಂದ ವರ್ಷಂಪ್ರತಿ ನಡೆಯುವ ತೆಂಗಿನಕಾಯಿಗೆ ಗುಂಡು ಹೊಡೆಯುವ 10ನೇ ವರ್ಷದ ಸ್ಪರ್ಧೆ ಸೆ.3 ರಂದು ಮಧ್ಯಾಹ್ನ 1–30 ಗಂಟೆಯಿಂದ ವಿರಾಜಪೇಟೆ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಮುಕ್ಕಾಟೀರ ಕಾರ್ಯಪ್ಪ ತಿಳಿಸಿದರು.

ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನ 15 ಸಾವಿರ ರೂ. ಮತ್ತು ಟ್ರೋಫಿ ದ್ವಿತೀಯ ಬಹುಮಾನ 10 ಸಾವಿರ ರೂ, ಟ್ರೋಫಿ ಹಾಗೂ ಮೂರನೇ ಬಹುಮಾನ 5 ಸಾವಿರ ರೂ. ಮತ್ತು ಟ್ರೋಫಿಯನ್ನು ನೀಡಲಾಗುತ್ತದೆ.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ವಿರಾಜಪೇಟೆಯ ಆಶೀರ್ವಾದ್ ಆಸ್ಪತ್ರೆಯ ಮುಖ್ಯಸ್ಥರಾದ ಡಾ, ಮಾತಂಡ ಅಯ್ಯಪ್ಪ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ 8317397184 ಮೂಲಕ ಸಂಪರ್ಕಿಸುವಂತೆ ಕೋರಲಾಗಿದೆ.

ಗೋಷ್ಠಿಯಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಕಂಡ್ರತಂಡ ಪ್ರವೀಣ್ ಪೂವಯ್ಯ, ಕಾರ್ಯ ದರ್ಶಿ ಮಾದೆಯಂಡ ಸಂಪಿಪೂಣಚ್ಚ, ಜಂಟಿ ಕಾರ್ಯದರ್ಶಿ ನಾಯಡ ಶ್ಯಾಮ್‌ಸೋಮಣ್ಣ, ಖಜಾಂಚಿ ಕೊಂಗಂಡ ಧರ್ಮಜ ದೇವಯ್ಯ ಉಪಸ್ಥಿತರಿದ್ದರು.

ನಾಳೆ ಕರಿಕೆಯಲ್ಲಿ ಆದಿವಾಸಿ ಬುಡಕಟ್ಟು ವಸತಿ ಶಾಲೆ ನೂತನ ಕಟ್ಟಡ ಉದ್ಘಾಟನೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಕರಿಕೆ ಇಲ್ಲಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಸೆ.1 ರಂದು ಬೆಳಗ್ಗೆ 9.30 ಗಂಟೆಗೆ ಮಡಿಕೇರಿ ತಾಲೂಕು ಕರಿಕೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂತರ್ ಗೌಡ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯ ಅಜಯ್ ಮಾಕನ್, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಡಾ. ಧನಂಜಯ ಸರ್ಜಿ, ಕರಿಕೆ ಗ್ರಾ.ಪಂ.ಅಧ್ಯಕ್ಷ ಎನ್.ಬಾಲಚಂದ್ರನ್ ಪಾಲ್ಗೊಳ್ಳಲಿದ್ದಾರೆ.

ಗದ್ದೆಗೆ ಇಳಿದು ಭತ್ತದ ನಾಟಿ ಮಾಡಿದ ವಿದ್ಯಾರ್ಥಿಗಳು

ನಾಪೋಕ್ಲು: ಇಲ್ಲಿಗೆ ಸಮೀಪದ ಹಳೆ ತಾಲೂಕು ಅಂಕುರ್ ಪಬ್ಲಿಕ್ ಶಾಲೆಯ ಸೈನ್ಸ್ ಕ್ಲಬ್ ವತಿಯಿಂದ ಭತ್ತದ ನಾಟಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಅಂಕುರ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಕೊಳಕೇರಿ ಗ್ರಾಮದ ಕೆಟೋಳಿರ ರಾಜಾ ಚರ್ಮಣ ಅವರ ಗದ್ದೆಯಲ್ಲಿ 9ನೇ ತರಗತಿಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳು ಕೆಸರು ಗದ್ದೆಯಲ್ಲಿ ಇಳಿದು ನಾಟಿ ನೆಡುವುದರ ಮೂಲಕ ಭತ್ತದ ಬೇಸಾಯದ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ತಮ್ಮ ಹೊಸ ಅನುಭವವನ್ನು ಹಂಚಿಕೊಂಡರು.


ಗದ್ದೆಯಲ್ಲಿ ನಾಟಿ ಮಾಡುತ್ತಿರುವ ವಿದ್ಯಾರ್ಥಿಗಳು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯ ದರ್ಶಿ ರತ್ನಾ ಚರ್ಮಣ ಮಕ್ಕಳ ಜೊತೆಗೆ ಪಾಲ್ಗೊಂಡು ಹೇಗೆ ಭತ್ತದ ಸಸಿ (ಅಗೆ) ತೆಗೆಯುವುದು ನಾಟಿ ಮಾಡುವುದು. ಕಳೆ ಕೀಳುವುದು, ಭತ್ತ ಬೆಳೆಯುವುದು, ಎಂಬು ದರ ಬಗ್ಗೆ ಗದ್ದೆಯಲ್ಲಿ ಪ್ರಾತ್ಯಕ್ಷತೆಯನ್ನು ಮಾಡಿ ವಿದ್ಯಾರ್ಥಿಗಳಲ್ಲಿ ಭತ್ತದ ಬೇಸಾ ಯದ ಬಗ್ಗೆ ಆಸಕ್ತಿ ಮೂಡಿಸಿದರು, ಮತ್ತು ಭೂಮಿಯನ್ನು ಬೇಸಾಯ ಮಾಡದೆ ಬಂಜರು ಬಿಡಬಾರದು ಎಂದು ಮನ ಮುಟ್ಟುವಂತೆ ಸಮಗ್ರ ಮಾಹಿತಿಯನ್ನು ನೀಡಿದರು. ಶಿಕ್ಷಕಿಯರಾದ ಶೈಲಾ ನರೇಶ್ ಮತ್ತು ಶೃತಿ ಅವರು ಬತ್ತದ ನಾಟಿಯ ಬಗ್ಗೆ ಮಾರ್ಗದರ್ಶನ ಮಾಡಿ ಮಕ್ಕಳಿಗೆ ಕಿವಿ ಮಾತು ಹೇಳಿದರು.

ಸೆ.4 ರಂದು ನೇರ ಸಂದರ್ಶನ

ಮಡಿಕೇರಿ: ಕೊಡಗು ಜಿಲ್ಲಾ ಆಯುಷ್ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಖಾಲಿ ಇರುವ ಸ್ತ್ರೀರೋಗ ಅಟೆಂಡರ್–01 ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಸೆ.4 ರಂದು ಬೆಳಗ್ಗೆ 11.30 ಗಂಟೆಗೆ ನೇರ ಸಂದರ್ಶನವು ಜಿಲ್ಲಾ ಆಯುಷ್ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ನಡೆಯಲಿದೆ.

ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ನಿಗದಿತ ಸಮಯಕ್ಕೆ ಜಿಲ್ಲಾಧಿಕಾರಿಗಳ ಸಭಾಂಗಣ, ಜಿಲ್ಲಾಧಿಕಾರಿಗಳ ಕಚೇರಿ, ಮಡಿಕೇರಿ ಇಲ್ಲಿ ಹಾಜರಾಗುವಂತೆ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಆಯುಷ್ ಅಧಿಕಾರಿ ತಿಳಿಸಿದ್ದಾರೆ.

ತ್ಯಾಗ ಮನೋಭಾವದ ಕೆಲಸದಿಂದ ಸಹಕಾರ ಕ್ಷೇತ್ರ ಅಭಿವೃದ್ಧಿ

ಸಹಕಾರ ಸಂಘಗಳ ಸಿಇಓಗಳ ತರಬೇತಿಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಸಲಹೆ

ಗುಂಡ್ಲುಪೇಟೆ, ಆ.30– ಅಧಿಕಾರಿಗಳು ದೇವರ ಕೆಲಸ ಎಂದು ತಿಳಿದು ಸಹಕಾರ ಕ್ಷೇತ್ರದಲ್ಲಿ ತ್ಯಾಗ ಮನೋಭಾವನೆಯಿಂದ ಕೆಲಸ ಮಾಡಿದರೆ ಮಾತ್ರ ರೈತರಿಗೆ ಅನುಕೂಲವಾಗಿ ಸಹಕಾರ ಕ್ಷೇತ್ರ ಅಭಿವೃದ್ಧಿಯಾಗುತ್ತದೆ ಎಂದು ಶಾಸಕ ಹಾಗೂ ಮಹಾ ಮಂಡಳದ ಅಧ್ಯಕ್ಷರೂ ಆದ ಜಿ.ಟಿ. ದೇವೇಗೌಡರು ಸಲಹೆ ನೀಡಿದರು.


ಅಧಿಕಾರಿಗಳ ತರಬೇತಿ ಕಾರ್ಯಕ್ರಮವನ್ನು ಸಹಕಾರಿ ಧುರೀಣರೂ ಆದ ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು.

ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಕರ್ನಾಟಕ ರಾಜ್ಯ ಮಹಾ ಮಂಡಳ ಬೆಂಗಳೂರು, ಚಾಮರಾಜನಗರ ಜಿಲ್ಲಾ ಸಹಕಾರ ಸಂಘಗಳ ಒಕ್ಕೂಟ, ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ಒಕ್ಕೂಟ, ಸಹಕಾರ ಇಲಾಖೆ ಚಾಮರಾಜ ನಗರ ಸಂಯುಕ್ತಾಶ್ರಯದಲ್ಲಿ ಗುಂಡ್ಲುಪೇಟೆ ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಏರ್ಪಡಿಸಲಾಗಿದ್ದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾಡಿದ ಅವರು, ಹಾಲನ್ನು ಪ್ರತಿ ದಿನ ಶಾಲಾ ಮಕ್ಕಳಿಗೆ ಹಾಗೂ ರೋಗಿಗಳಿಗೆ ನೀಡುತ್ತಿದ್ದು, ಆ ಹಾಲಿಗೆ ನೀರು ಮಿಶ್ರಣ ಮಾಡಿ ಸರಬರಾಜು ಮಾಡಿದರೆ ದ್ರೋಹ ಮಾಡಿದಂತೆ ಎಂದು ತಿಳಿಸಿದರು.

ರಾಷ್ಟ್ರದಲ್ಲಿ ಸುಮಾರು 1 ಕೋಟಿ 77 ಲಕ್ಷ ಹಾಲು ಉತ್ಪಾದಕರಿದ್ದು, ಪ್ರತಿದಿನ ಸುಮಾರು 4.5 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ರಾಜ್ಯದಲ್ಲಿ ಸುಮಾರು 26 ಲಕ್ಷ ಹಾಲು ಉತ್ಪಾದಕರಿದ್ದು, 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ, ಪ್ರತಿದಿನ ರೈತರಿಗೆ 32 ಕೋಟಿ ರೂ. ಹಣ ಸಂದಾಯವಾಗುತ್ತಿದೆ. ತಿಂಗಳಿಗೆ 1000 ಕೋಟಿ ಹಣ ಸಂದಾಯ ವಾಗುತ್ತಿರುವುದು ಸಂತೋಷದ ವಿಚಾರ ಎಂದರು.

ಜಿಲ್ಲೆಯಲ್ಲಿ ಹೈನುಗಾರಿಕೆ, ಕುರಿ ಸಾಕಾಣಿಕೆ ಮಾಡಲು ವಿಪುಲ ಅವಕಾಶಗಳಿದ್ದು, ತಾವೆಲ್ಲರೂ ಕೂಡ ರೈತರಿಗೆ, ಕಾರ್ಮಿಕರಿಗೆ ಹೆಚ್ಚು ಹೆಚ್ಚು ಹಸುಗಳನ್ನು ಕೊಡಿಸಿ, ಹಸುಗಳಿಗೆ ವಿಮೆ ಮಾಡಿಸಿ ಹೆಚ್ಚು ಹಾಲು ಉತ್ಪಾದನೆ ಮಾಡಿ ರೈತರ ಆರ್ಥಿಕತೆ ಹೆಚ್ಚಿಸಲು ಒತ್ತು ನೀಡುವಂತೆ ಸಲಹೆ ನೀಡಿದರು.

ಕುವೆಂಪುರವರ ಮಂತ್ರ ಮಾಂಗಲ್ಯ ಮೂಲಕ ಸರಳ ವಿವಾಹ ಮಾಡಬೇಕು ಎಂದ ಅವರು, ಅದರಂತೆ ನಾನು ತಿರುಪತಿ, ಧರ್ಮಸ್ಥಳದಲ್ಲಿ ನನ್ನ ಮಕ್ಕಳು, ತಮ್ಮನ ಮಗನ ಸರಳ ವಿವಾಹ ಮಾಡಿದ್ದೇನೆ, ರೈತರು ದುಂದುವೆಚ್ಚ ಮಾಡಿ ಜಮೀನು ಮಾರಿ ಮದುವೆ ಮತ್ತಿತರ ಸಮಾರಂಭ ಮಾಡುತ್ತಾರೆ. ನಂತರ ಜಮೀನಿನ ಬೆಲೆ ಕೇಳಿ ಪಶ್ಚಾತಾಪ ಪಡುತ್ತಿದ್ದಾರೆ. ಹಾಗಾಗಿ ಸರಳ ಮದುವೆ ಮಾಡುವಂತೆ ಸಲಹೆ ನೀಡಿದರು.

ಚಾಮರಾಜನಗರ ಜಿಲ್ಲೆ ಐತಿಹಾಸಿಕ ಜಿಲ್ಲೆ ಕ್ರೀಡೆ, ಸಾಹಿತ್ಯ, ಜನಪದ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆ ನೀಡಿರುವ ಜಿಲ್ಲೆ ಹರೀಶ್ ಗೌಡರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ, ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾಗಿ, ಸುನಿಲ್ ಅವರು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾಗಿದ್ದರಿಂದ ಹೆಚ್ಚಿನ ಸಾಲ ಸೌಲಭ್ಯ ತಂದು ರೈತರಿಗೆ ನೀಡಿ ಅನುಕೂಲ ಮಾಡಿಕೊಡಲಾಗಿತ್ತು, ನಾನು ಅಧ್ಯಕ್ಷ ನಾಗಲು ಅವಕಾಶವಿದ್ದರೂ ಅಂದಿನ ಕಾಲದಲ್ಲಿ ಬೇರೆಯವರನ್ನು ಅಧ್ಯಕ್ಷರುಗಳನ್ನಾಗಿ ಮಾಡುತಿದ್ದೆ, ಸಹಕಾರ ಕ್ಷೇತ್ರದ ಅಭಿವೃದ್ಧಿ ಅಷ್ಟೆ ಮುಖ್ಯವಾಗಿತ್ತು. ಅಧಿಕಾರದ ಆಸೆ ಇರಲಿಲ್ಲ ಎಂದರು.

ನಂತರ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ನಂಜುಂಡ ಪ್ರಸಾದ್ ಮಾತನಾಡಿ, ಸಹಕಾರ ಕ್ಷೇತ್ರದ ಅಗ್ರಗಣ್ಯ ನಾಯಕರು, ಸರ್ವ ಜನಾಂಗವನ್ನೂ ಸಮಾನವಾಗಿ ಒಗ್ಗೂಡಿಸಿಕೊಂಡು ಸಹಕಾರ ಕ್ಷೇತ್ರ ಕಟ್ಟಿದ ನಮ್ಮ ಜಿ.ಟಿ.ದೇವೇಗೌಡರ ಶ್ರಮ ಅನನ್ಯವಾದದ್ದು, ಸಹಕಾರ ಕ್ಷೇತ್ರದ ಮೇಲೆ ಅಪಾರವಾದ ಕಾಳಜಿ ಇರುವ ಕಾರಣ ಒತ್ತಡದ ನಡುವೆಯೂ ನಮಗೆಲ್ಲರಿಗೂ ಮಾರ್ಗ ದರ್ಶನ ನೀಡಲು ಭಾಗಿಯಾಗಿದ್ದಾರೆ. ಇತ್ತೀಚಿಗೆ ವಿಧಾನಸಭೆ ಅಧಿವೇಶನದಲ್ಲಿ ಸಹಕಾರ ಕಾಯ್ದೆ ತಿದ್ದುಪಡಿ ಚರ್ಚೆಯಲ್ಲಿ ಪಾಲ್ಗೊಂಡು ಮಾತಾಡಿದ ರೀತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಗಣೇಶ್ ಪ್ರಸಾದ್ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ನಂಜುಂಡಪ್ರಸಾದ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಚಾಮುಲ್ ನಿರ್ದೇಶಕರಾದ ಎಂಪಿ ಸುನೀಲ್, ಶೀಲಾ ಪುಟ್ಟರಂಗಶೆಟ್ಟಿ, ಮಡಿವಾಳಪ್ಪ, ಸಹಕಾರಿ ಯುನಿಯನ್ ನಿರ್ದೇಶಕ ನಾಗರಾಜು, ಮುದ್ದಯ್ಯ, ಬಸವಣ್ಣ, ಆಲತ್ತೂರು ಜಯರಾಮ್, ಚಾಮುಲ್ ಎಂಡಿ ರಾಜಕುಮಾರ್, ಮಹದೇವಪ್ರಭು, ಮತ್ತಿತರರಿದ್ದರು.

ಸೆ.6ರಂದು ಹನೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

ಚಾಮರಾಜನಗರ, ಆ.30– ಹನೂರು ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.6ರಂದು ಬೆಳಿಗ್ಗೆ 9 ಗಂಟೆಗೆ ಹನೂರಿನ ಶ್ರೀ ಮಲೈಮಹದೇಶ್ವರ ತಾಲೂಕು ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ ಪುರುಷರಿಗೆ 100 ಮೀ, 200ಮೀ, 400ಮೀ, 800ಮೀ, 1500ಮೀ, 5000ಮೀ, 10000ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಎಸೆತ, ಡಿಸ್ಕಸ್ ಎಸೆತ, 4x100 ಮೀ.ರಿಲೇ, 4x400 ಮೀ. ರಿಲೇ, 110ಮೀ ಹರ್ಡಲ್ಸ್, ವಾಲಿಬಾಲ್, ಕಬ್ಬಡಿ, ಖೋಖೋ, ಫುಟ್‌ಬಾಲ್, ಥ್ರೋ ಬಾಲ್, ಯೋಗಾಸನ (ವೀರಭದ್ರಾಸನ, ಜಾನು ಶಿರ್ಶಾಸನ, ಹಲಾಸನ ಹಾಗೂ ಧನುರಾಸನ) ಸ್ಪರ್ಧೆಗಳು ವೈಯಕ್ತಿಕ ಹಾಗೂ ಗುಂಪು ವಿಭಾಗದಲ್ಲಿ ನಡೆಯಲಿವೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ ಮಹಿಳೆಯರಿಗೆ 100ಮೀ, 200ಮೀ, 400ಮೀ, 800ಮೀ, 1500ಮೀ, 3000ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಜಾವಲಿನ್ ಎಸೆತ, ಡಿಸ್ಕಸ್ ಎಸೆತ, ಟ್ರಿಪಲ್ ಜಂಪ್, 4x100 ಮೀ.ರಿಲೇ, 4x400 ಮೀ.ರಿಲೇ, 100ಮೀ ಹರ್ಡಲ್ಸ್, ವಾಲಿಬಾಲ್, ಕಬ್ಬಡಿ, ಖೋಖೋ, ಥ್ರೋಬಾಲ್, ಯೋಗಾಸನ (ವೀರಭದ್ರಾಸನ, ಜಾನು ಶಿರ್ಶಾಸನ, ಹಲಾಸನ ಹಾಗೂ ಧನುರಾಸನ) ಸ್ಪರ್ಧೆಗಳು ವೈಯಕ್ತಿಕ ಹಾಗೂ ಗುಂಪು ವಿಭಾಗದಲ್ಲಿ ನಡೆಯಲಿವೆ.

ತಾಲ್ಲೂಕು ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ಯಾವುದೇ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ನೀಡಲಾಗುವುದಿಲ್ಲ. ಸ್ಪರ್ಧಿಗಳು ಕ್ರೀಡಾಕೂಟದಂದು ಬೆಳಿಗ್ಗೆ 9 ಗಂಟೆಗೆ ಹಾಜರಾಗಿ ವರದಿ ಮಾಡಿಕೊಳ್ಳಬೇಕು.

ತಾಲೂಕು ಮಟ್ಟದಲ್ಲಿ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರು ಮತ್ತು ಗುಂಪು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟ ನಡೆಯುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಪ್ರಸಕ್ತ ಸಾಲಿನಿಂದ ದಸರಾ ಕ್ರೀಡಾಕೂಟದಲ್ಲಿ ವೈಯಕ್ತಿಕ ಮತ್ತು ಗುಂಪು ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತಾಲೂಕು, ಜಿಲ್ಲೆ ಮತ್ತು ವಿಭಾಗ ಮಟ್ಟದವರೆಗೆ ಅಧಿಕೃತ ಮೊಬೈಲ್ ಆಪ್ ಅಥವಾ ವೆಬ್‌ಸೈಟ್ https://dasaracmcup-2025.etrpindia.com/KA-sports ಮೂಲಕ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಬೇಕು. ಮಾಹಿತಿಗಾಗಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ದೂ.ಸಂ.08226–224932, 9845004610, 9945615695, 9880211027, 9916466659 ಸಂಪರ್ಕಿಸುವಂತೆ ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಚಾಮರಾಜನಗರ: ಮುರುಗೇಶ ಎಂಬುವವರು ಕಾಣೆಯಾಗಿರುವ ಬಗ್ಗೆ ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ.



50 ವರ್ಷದ ಮುರುಗೇಶ 5.5 ಅಡಿ ಎತ್ತರ, ದೃಢಕಾಯ ಶರೀರ, ಕಪ್ಪು ಮೈ ಬಣ್ಣ, ಕೋಲು ಮುಖ ಹೊಂದಿದ್ದು, ಬಿಳಿ ಮೀಸೆ ಮತ್ತು ಗಡ್ಡ ಬಿಟ್ಟಿರುತ್ತಾರೆ. ಕತ್ತಿನ ಹಿಂಭಾಗ ಸ್ವಲ್ಪ ಬಿಳಿ ಚಿಪ್ಪು ಇರುತ್ತದೆ. ಕನ್ನಡ, ತೆಲುಗು ಮತ್ತು ತಮಿಳು ಭಾಷೆ ಮಾತನಾಡುತ್ತಾರೆ.

ಇವರ ಸುಳಿವು ದೊರೆತಲ್ಲಿ ಪೊಲೀಸ್ ಕಂಟ್ರೋಲ್ ರೂಂ ದೂ.ಸಂ 08226–222383, ಪಟ್ಟಣ ಪೊಲೀಸ್ ಠಾಣೆ ದೂ.ಸಂ. 08226–222047 ಸಂಪರ್ಕಿಸುವಂತೆ ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರದ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹಲವು ಯೋಜನೆ

ಯಳಂದೂರು, ಆ.30– ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ನೀಡಿದ್ದು ಕೋಟ್ಯಾಂತರ ರೂ. ಅನುದಾನವನ್ನು ಇದಕ್ಕೆ ನೀಡಲಾಗಿದೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಮಾಹಿತಿ ನೀಡಿದರು.

ಶುಕ್ರವಾರ ಪಟ್ಟಣದ ಬಳೇಪೇಟೆಯ ಸೈಯದ್ ಮುರ್ತುಜಾ ಷಾಖಾದ್ರಿ ದರ್ಗಾದ ಬಳಿ ಶಾದಿ ಮಹಲ್ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಜಕ್ಕಹಳ್ಳಿಯಲ್ಲಿ ಚರ್ಚ್ ಹಾಗೂ ಇಲ್ಲಿನ ಕ್ರಿಶ್ಚಿಯನ್ನರು ವಾಸ ಮಾಡುವ ಕಾಲೋನಿಗಳ ರಸ್ತೆ ಅಭಿವೃದ್ಧಿ, ಕೊಳ್ಳೇಗಾಲದ ಅಲ್ಪಸಂಖ್ಯಾತರ ವಾರ್ಡ್‌ಗಳ ರಸ್ತೆ ಅಭಿವೃದ್ಧಿ, ಮಾಂಬಳ್ಳಿ ಗ್ರಾಮದ ರಸ್ತೆ ಚರಂಡಿ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ.

ಕೊಳ್ಳೇಗಾಲದಲ್ಲಿ 1 ಕೋಟಿ ರೂ. ಮುಸ್ಲಿಮರ ಶಾದಿ ಮಹಲ್ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನ ನೀಡಲಾಗಿದೆ. ಯಳಂದೂರು ಪಟ್ಟಣದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಶಾದಿಮಹಲ್ ಕಟ್ಟಡಕ್ಕೆ ಅನುದಾನ ನೀಡಲಾಗಿದ್ದು ಇದಕ್ಕೆ ಭೂಮಿಪೂಜೆ ನೆರವೇರಿಸುತ್ತಿರುವುದು ನನಗೆ ಅತೀವ ಸಂತಸ ತಂದಿದೆ. ಕೊಳ್ಳೇಗಾಲದಲ್ಲಿ ಅಲ್ಪಸಂಖ್ಯಾತರಿಗೆ ಮೊರಾರ್ಜಿದೇಸಾಯಿ ವಸತಿ ಶಾಲೆಯನ್ನು ನಿರ್ಮಾಣ ಮಾಡಲು ಅನುದಾನ ಲಭಿಸಿದೆ. ಇದಕ್ಕೆ ಈಗಾಗಲೇ 15 ಎಕರೆ ಜಮೀನನ್ನು ಗುರುತಿಸಲಾಗಿದೆ.


ಯಳಂದೂರು ಪಟ್ಟಣದ ಬಳೇ ಪೇಟೆಯಲ್ಲಿ ಮುಸ್ಲಿಂ ಜನಾಂಗದ ಶಾದಿ ಮಹಲ್ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು. ಪಪಂ ಅಧ್ಯಕ್ಷೆ ಲಕ್ಷ್ಮಿಮಲ್ಲು, ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು ಸೇರಿದಂತೆ ಅನೇಕರು ಇದ್ದರು.

ಅಹಿಂದ ಪರಿಕಲ್ಪನೆಯಲ್ಲಿ ನಮ್ಮ ಸರ್ಕಾರ ಆಡಳಿತ ನಡೆಸುತ್ತಿದೆ. ಈ ಹಿಂದಿನ ಶಾಸಕರ ಅನುದಾನದಲ್ಲಿ ನಾನು ದಲಿತ, ನಾಯಕ, ಉಪ್ಪಾರ, ಲಿಂಗಾಯಿತ, ಸವಿತಾ ಸಮಾಜ, ಕುಂಬಾರ, ಪೌರ ಕಾರ್ಮಿಕರು ಸೇರಿದಂತೆ ಎಲ್ಲಾ ಸಮುದಾಯ ಭವನಗಳಿಗೂ ಅನುದಾನವನ್ನು ಯಾವ ಕೋಮನ್ನು ಬಿಡದೆ ನೀಡಿದ್ದೇನೆ. ಈ ಬಾರಿ 50 ಕೋಟಿ ರೂ. ಅನುದಾನವನ್ನು ನೀಡಲಾಗಿದ್ದು ಇದರಲ್ಲಿ 32.5 ಕೋಟಿ ರೂ. ಲೋಕೋಪಯೋಗಿ ಹಾಗೂ ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ರಸ್ತೆಗಳ ನಿರ್ಮಾಣ ಹಾಗೂ 12.5 ಕೋಟಿ ರೂ.ಗಳನ್ನು ಗ್ರಾಮೀಣ ರಸ್ತೆ ಇತರೆ ಕಾಮಗಾರಿಗಳಿಗೆ ಬಳಸಿಕೊಳ್ಳಲು ತೀರ್ಮಾನ ಮಾಡಲಾಗಿದೆ. ನೀರಾವರಿ ಯೋಜನೆಗೆ 120 ಕೋಟಿ ರೂ. ಅನುದಾನ ಲಭಿಸಿದೆ. ಇಡೀ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಾನು ಕಂಕಣಬದ್ಧನಾಗಿದ್ದೇನೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಮುಸ್ಲಿಂ ಜನಾಂಗದ ಮುಖಂಡ ನಯಾಜ್ ಖಾನ್, ಮಾಂಬಳ್ಳಿ ಮುಜ್ಜು ನಗರಸಭಾ ಸದಸ್ಯ ಅನ್ಸರ್ ಬೇಗ್ ಮಾತನಾಡಿದರು. ಪಪಂ ಅಧ್ಯಕ್ಷೆ ಲಕ್ಷ್ಮಿ ಮಲ್ಲು, ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು, ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ಬಿ.ರವಿ, ಸುಶೀಲಾ ಪ್ರಕಾಶ್ ನಾಮನಿರ್ದೇಶಿತ ಸದಸ್ಯರಾದ ಲಿಂಗರಾಜ ಮೂರ್ತಿ, ಶ್ರೀಕಂಠಸ್ವಾಮಿ, ಮುನವ್ವರ್‌ಬೇಗ್, ಮುಖ್ಯಾಧಿಕಾರಿ ಎಂ.ಪಿ.ಮಹೇಶ್‌ಕುಮಾರ್, ಕೆಆರ್‌ಐಡಿಎಲ್‌ನ ಚಿಕ್ಕಲಿಂಗಯ್ಯ, ಚಾಮುಲ್ ನಿರ್ದೇಶಕ ಕಮರವಾಡಿರೇವಣ್ಣ, ಕಂದಹಳ್ಳಿ ನಂಜುಂಡಸ್ವಾಮಿ, ಜೆ. ಶ್ರೀನಿವಾಸ್, ಕಿನಕಹಳ್ಳಿ ಪ್ರಭುಪ್ರಸಾದ್ ಸೇರಿದಂತೆ ಅನೇಕರು ಇದ್ದರು.

ದೀಕ್ಷಾಭೂಮಿ ಯಾತ್ರೆಗೆ ತೆರಳಲು ಅರ್ಜಿ ಆಹ್ವಾನ

ಚಾಮರಾಜನಗರ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2025–26ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿರುವ ದೀಕ್ಷಾಭೂಮಿ ಯಾತ್ರೆಗೆ ತೆರಳಲು ಡಾ. ಬಿ.ಆರ್. ಅಂಬೇಡ್ಕರ್ ಅನುಯಾಯಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಸೆ.9ರೊಳಗೆ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://scsptsp.karnataka.gov.in/dbmy / deekshabhoomiyathra/yathra/yathraMainHome.aspx <https://scsptsp.karnataka.gov.in/dbmy%20/deekshabhoomiyathra/yathra/yathraMainHome.aspx>

ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೊಳ್ಳೇಗಾಲ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಇಂದಿನಿಂದ ಸಿಎಂ ಮೈಸೂರು ಪ್ರವಾಸ



ಸಂದೇಶ್ ನಾಗರಾಜ್ ಹುಟ್ಟುಹಬ್ಬ, ರಾಷ್ಟ್ರಪತಿ ದ್ರೌಪದಿ ಮುರ್ಮು ಕಾರ್ಯಕ್ರಮದಲ್ಲಿ ಭಾಗಿ

ಮೈಸೂರು, ಆ.30 (ಬಿಎಲ್‌ಯು)– ಮೂರು ದಿನಗಳ ಮೈಸೂರು ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಆ.31) ಆಗಮಿಸಲಿದ್ದಾರೆ. ನಾಳೆ ಬೆಳಿಗ್ಗೆ 10.30 ಗಂಟೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೊರಡುವ ಸಿದ್ದರಾಮಯ್ಯ ಅವರು 10.55 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ನಗರದ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಆಯೋಜಿಸಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ 80ನೇ ವರ್ಷದ ಜನ್ಮದಿನ ಆಚರಣೆಯಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 3 ಗಂಟೆಗೆ ರಸ್ತೆ ಮೂಲಕ ನಂಜನಗೂಡಿಗೆ ಭೇಟಿ ನೀಡುವ ಸಿದ್ದರಾಮಯ್ಯ ಅವರು, ಶ್ರೀ ಶ್ರೀಕಂಠೇಶ್ವರ ದೇವಸ್ಥಾನದ ದಾಸೋಹ ಭವನದಲ್ಲಿ ಜಿಲ್ಲಾಡಳಿತ ಆಯೋಜಿಸಿರುವ ಶ್ರೀ ಭಗೀರಥ ಜಯಂತೋತ್ಸವ ಹಾಗೂ ಉಪ್ಪಾರ ಸಮುದಾಯ ಭವನದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ನಂತರ ನಂಜನಗೂಡಿಂದ ರಸ್ತೆ ಮೂಲಕ ಮೈಸೂರಿಗೆ ಆಗಮಿಸುವ ಸಿದ್ದರಾಮಯ್ಯ ಅವರು ಅಂದು ನಗರದಲ್ಲೆ ವಾಸ್ತವ್ಯ ಹೂಡುವರು. ಸೆ.1 ರಂದು ರಸ್ತೆ ಮೂಲಕ ತಮ್ಮ ಸ್ವಗ್ರಾಮ ಸಿದ್ದರಾಮನಹುಂಡಿಗೆ ಭೇಟಿ ನೀಡುವ ಮುಖ್ಯಮಂತ್ರಿಗಳು, ಪಿ.ಎಂ.ಶ್ರೀ–ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾ ಕಟ್ಟಡವನ್ನು ಉದ್ಘಾಟಿಸುವರು.

ರಸ್ತೆ ಮೂಲಕ ಮೈಸೂರಿಗೆ ಆಗಮಿಸುವ ಸಿದ್ದರಾಮಯ್ಯ ಅವರು ಮಧ್ಯಾಹ್ನ 3.10 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಬರಮಾಡಿಕೊಳ್ಳುವರು. ತರುವಾಯ ಮಧ್ಯಾಹ್ನ 3.45 ಗಂಟೆಗೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವ ಸಮಾರಂಭದಲ್ಲಿ ದ್ರೌಪದಿ ಮುರ್ಮು ಅವರೊಂದಿಗೆ ಭಾಗಿಯಾಗುವರು. ಈ ಕಾರ್ಯಕ್ರಮದ ನಂತರ ಸಿದ್ದರಾಮಯ್ಯ ನಗರದಲ್ಲೆ ವಾಸ್ತವ್ಯ ಹೂಡುವರು. ಸೆ.2ರಂದು ಮೈಸೂರು ವಿಮಾನ ನಿಲ್ದಾಣಕ್ಕೆ ತೆರಳಿ ಬೆಳಿಗ್ಗೆ 10.20 ಗಂಟೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಬೀಳ್ಕೊಡುವರು. ಮೈಸೂರಿನಲ್ಲಿ ಮೂರು ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಸಿದ್ದರಾಮಯ್ಯ ಅವರು ಮಧ್ಯಾಹ್ನ 2 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ಕಲೆ, ಸಾಹಿತ್ಯ, ಸಂಸ್ಕೃತಿಗೆ ಎಲ್ಲಿ ಗೌರವ ಸಿಗುವುದೋ ಆ ದೇಶದ ಘನತೆ ಹೆಚ್ಚುತ್ತದೆ

● ಖ್ಯಾತ ವಯೊಲಿನ್ ವಾದಕ ಡಾ.ಮೈಸೂರು ಮಂಜುನಾಥ್ ಅಭಿಮತ ● ಸಂಗೀತ ವಿವಿ ವಿಶೇಷ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಮೈಸೂರು, ಆ.30(ಎಂಟಿವೈ)–ಕಲೆ, ಸಾಹಿತ್ಯ, ಸಂಸ್ಕೃತಿಗೆ ಯಾವ ದೇಶದಲ್ಲಿ ಗೌರವ ಸಿಗುತ್ತದೋ, ಆ ದೇಶದ ವೈಭವ, ಘನತೆ, ಗೌರವ ಹೆಚ್ಚಾಗುವುದರೊಂದಿಗೆ ಸಾಮಾಜಿಕ ಸ್ಥಿತಿಗತಿಯೂ ಉತ್ತಮವಾಗಿರುತ್ತದೆ ಎಂದು ಖ್ಯಾತ ವಯೊಲಿನ್ ವಾದಕ ಡಾ.ಮೈಸೂರು ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಲಕ್ಷ್ಮೀಪುರಂ ಜೆಎಲ್‌ಬಿ ರಸ್ತೆಯಲ್ಲಿರುವ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ನಡೆದ ವಿಶೇಷ ಪರೀಕ್ಷೆಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಗೀತ ಹಾಗೂ ನೃತ್ಯ ಕಲೆಗಳು ಎಲ್ಲರನ್ನು ಪ್ರೀತಿಸುವುದನ್ನು ಕಲಿಸುತ್ತದೆ. ಎಲ್ಲರೂ ಒಂದೇ ಎಂಬ ಭಾವನೆ ಮೂಡಿಸುತ್ತದೆ. ನಾವೆಲ್ಲರೂ ಒಟ್ಟಿಗೆ ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ದುಡಿಯೋಣ ಎಂಬ ಸಂದೇಶವನ್ನು ನೀಡುತ್ತದೆ. ವಿದ್ಯಾರ್ಥಿಗಳು ದೇಶದ ಹಿತಕ್ಕಾಗಿ ತಮ್ಮ ಬದುಕನ್ನು ಮುಡುಪಾಗಿಡಬೇಕು. ಸಂಗೀತ ವಿವಿಯು ಈ ಬಾರಿ 12 ಸಾವಿರ ವಿದ್ಯಾರ್ಥಿಗಳಿಗೆ ಸಂಗೀತ ನೃತ್ಯ ಪರೀಕ್ಷೆ ನಡೆಸಿರುವುದು ಶ್ಲಾಘನೀಯ. ಅಷ್ಟು ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿರುವುದು ಸಾಧನೆಯೇ ಸರಿ. ಈ ಪರೀಕ್ಷೆಯಲ್ಲಿ ರ‍್ಯಾಂಕ್ ವಿಜೇತರಿಗೆ ಪ್ರಮಾಣ ಪತ್ರ ನೀಡುತ್ತಿರುವುದು ಸಂತಸದ ವಿಚಾರ ಎಂದು ಹೇಳಿದರು.

ಮಾಧ್ಯಮಗಳ ಅಬ್ಬರದ ನಡುವೆಯೂ ಮಕ್ಕಳು ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಸಂತಸದ ವಿಚಾರ. ಕಲಿತಿರುವ ಈ ಕಲೆಯನ್ನು ಮುಂದುವರೆಸಿಕೊಂಡು ಹೋಗಬೇಕು. ಶಾಲೆಗಳ ಪರೀಕ್ಷೆಯನ್ನು ಯಾರು ಬೇಕಾದರೂ ಎದುರಿಸಬಹುದು. ಆದರೆ, ಸಂಗೀತದ ಪರೀಕ್ಷೆ ಎದುರಿಸಲು ವಿಶೇಷವಾದ ಕೌಶಲದ ಅವಶ್ಯಕತೆ ಇದೆ ಎಂದರು.

ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಮಾತನಾಡಿ, 2009ರಲ್ಲಿ ಸ್ಥಾಪನೆಯಾದ ಸಂಗೀತ ವಿಶ್ವವಿದ್ಯಾಲಯ ಹಲವು ಸವಾಲು ಹಿಮ್ಮೆಟ್ಟಿ ನಿಂತು ಕಳೆದ ಎರಡು ವರ್ಷಗಳಿಂದ ಸಾಧನೆಯತ್ತ ಸಾಗುತ್ತಿದೆ. ವಿಶ್ವ ವಿದ್ಯಾಲಯದಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ಕೊರತೆ ನಡುವೆಯೂ ಸಾಧನೆಯತ್ತ ದಾಪುಗಾಲಿರಿಸುತ್ತಿದೆ. ಸಿಬ್ಬಂದಿ ಕೊರತೆಯಿಂದ ಸಂಗೀತ, ನೃತ್ಯಕ್ಕೆ ಸಂಬಂಧಿಸಿದ ವಿಶೇಷ ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಸರ್ಕಾರ ಸಂಗೀತ ವಿಶ್ವವಿದ್ಯಾಲಯಕ್ಕೆ ನೀಡಿರಲಿಲ್ಲ. ಆದರೆ, ಕಳೆದ ಬಾರಿ ಜವಾಬ್ದಾರಿ ನೀಡಿದಾಗ 18 ಸಾವಿರ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿತ್ತು. ಈ ಬಾರಿ 12 ಸಾವಿರ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿದ್ದೇವೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 67 ವರ್ಷಗಳಿಂದ ಈ ಪರೀಕ್ಷೆ ನಡೆಸುತಿತ್ತು. 2 ವರ್ಷದಿಂದ ನಾವು ಜವಾಬ್ದಾರಿ ತೆಗೆದುಕೊಂಡಿದ್ದೇವೆ ಎಂದರು.

ಸಂಗೀತ ವಿವಿಯಲ್ಲಿ ಈಗಾಗಲೇ ದೇಶದ 106 ಪ್ರಖ್ಯಾತ ಸಂಗೀತ ವಿದ್ವಾಂಸರು, ನೃತ್ಯ ಕಲಾವಿದರು, ರಂಗಭೂಮಿ, ಜನಪದ ತಜ್ಞರು ನಮ್ಮಲ್ಲಿ ಡಿ.ಲಿಟ್ ಮಾಡುತ್ತಿದ್ದಾರೆ. 87 ಸಂಗೀತ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಂಡು ಸಂಗೀತ ಬೆಳೆಸುವ ಕಾರ್ಯ ಮಾಡುತ್ತಿವೆ. ಕೇವಲ ರಾಜ್ಯ ಮಾತ್ರವಲ್ಲದೆ ದೇಶ–ವಿದೇಶದಿಂದಲೂ ಈ ಒಡಂಬಡಿಕೆಗೆ ಬೇಡಿಕೆ ವ್ಯಕ್ತವಾಗುತ್ತಿದೆ. ಆದರೆ, ಯುಜಿಸಿಯಲ್ಲಿ ಅದಕ್ಕೆ ಅವಕಾಶ ಇಲ್ಲದ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಸೀಮಿತವಾಗಿ ಒಡಂಬಡಿಕೆ ಮಾಡಿಕೊಳ್ಳುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ವಿಶ್ವ ವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ. ಮಂಜುನಾಥ, ಹಣಕಾಸು ಅಧಿಕಾರಿ ಕೆ.ಎಸ್. ರೇಖಾ ಉಪಸ್ಥಿತರಿದ್ದರು.



ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ನಡೆದ ವಿಶೇಷ ಪರೀಕ್ಷೆಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಸನ್ಮಾನ...



ಮೈಸೂರಿನ ರಾಮಕೃಷ್ಣನಗರದ ಐ–ಬ್ಲಾಕ್‌ನಲ್ಲಿರುವ ಆದ್ಯ ಸೌಹಾರ್ದ ಸಹಕಾರಿ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಡಾ.ವಿಶ್ವನಾಥಯ್ಯ, ಬ್ಯಾಂಕ್‌ನ ಸಿಇಓ ಭಗೀರಥ ಹಾಗೂ ನಿರ್ದೇಶಕರು ಹಾಜರಿದ್ದರು.

ಪೌರಕಾರ್ಮಿಕರಿಗೆ ಬಾಗಿನ...



ಗೌರಿ ಗಣೇಶ ಹಬ್ಬದ ಪ್ರಯುಕ್ತ ವಾರ್ಡ್ ನಂ.4 ಲೋಕನಾಯಕನಗರ ಬಸವನಗುಡಿ ದೇವಸ್ಥಾನದ ಬಳಿ ಪೌರಕಾರ್ಮಿಕರಿಗೆ ಬಟ್ಟೆ, ಸೀರೆ, ಸಿಹಿ ವಿತರಿಸಿ ಬಾಗಿನ ನೀಡಲಾಯಿತು. ಈ ವೇಳೆ ಮುಖಂಡರಾದ ದಿನೇಶ್‌ಗೌಡ, ರಾಮೇಗೌಡ, ಅರುಣ್, ದಿನೇಶ್, ಪ್ರಶಾಂತ್, ಅಖಿಲೇಶ್, ರವಿ ಗುಡ್ಡಯ್ಯ, ಮಹಾದೇವಣ್ಣ, ಶಂಕರ್, ನಾರಾಯಣ್, ಉಮಾ ರಾಕೇಶ್, ಕಿಶೋರ್, ಸಂಜೀವಿನಿ, ಶಿವಕುಮಾರ್, ರಮೇಶ್, ಕೃಷ್ಣ, ಬಲರಾಮ್, ಕರಿಬಸಪ್ಪ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಮಾರ್ಗದರ್ಶನ, ತರಬೇತಿ ಶಿಬಿರ

ಮೈಸೂರು: ಸಿವಿಲ್ ನ್ಯಾಯಾಧೀಶರ ನೇಮಕಾತಿಯ ಪೂರ್ವಭಾವಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡಿರುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಅಖಿಲ ಭಾರತೀಯ ಅಧಿವಕ್ತ ಪರಿಷದ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ ನುರಿತ ಜ್ಞಾನಿಗಳ ಸಹಕಾರದಿಂದ 6 ದಿನಗಳ ವಿಶೇಷ ಮಾಹಿತಿ, ಮಾರ್ಗದರ್ಶನ ಮತ್ತು ತರಬೇತಿ ಕಾರ್ಯಕ್ರಮವನ್ನು ಸಿವಿಲ್ ನ್ಯಾಯಾಧೀಶರ ನೇಮಕಾತಿಯ ಪೂರ್ವಭಾವಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡಿರುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೆಪ್ಟೆಂಬರ್ 1ರಿಂದ 6ರವರೆಗೆ ಆಯೋಜಿಸಲಾಗಿದೆ. ಆಸಕ್ತರು ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಸಿಎ 122, ಹೊಸ ನ್ಯಾಯಾಲಯದ ಎದುರು, ಜಯನಗರ, ಕೆ.ಜಿ.ಕೊಪ್ಪಲು, ಮೈಸೂರಿನಲ್ಲಿ ಇರುವ ಕಚೇರಿಗೆ ಭೇಟಿ ನೀಡುವುದು ಅಥವಾ ದೂ.ಸಂಖ್ಯೆ: 9448945477, 9972948415, 9916002477, 9164799099 ಸಂಪರ್ಕಿಸಲು ಕೋರಲಾಗಿದೆ.

ಗಣೇಶಮೂರ್ತಿ ಪ್ರತಿಷ್ಠಾಪನೆ...



ಮೈಸೂರು ತಾಲೂಕು ಜಯಪುರ ಹೋಬಳಿಯ ಉದ್ಬೂರಿನ ಅಂಬೇಡ್ಕರ್ ಕಾಲೋನಿಯಲ್ಲಿ ವಿನಾಯಕ ಗೆಳೆಯರ ಬಳಗದಿಂದ ಗಣೇಶಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸಿದರು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಬಳಗದವರು ಸನ್ಮಾನಿಸಿದರು.

ಮಾಜಿ ಸಂಸದ ಪ್ರತಾಪ್‌ಸಿಂಹ, ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಬಂಧನಕ್ಕೆ ಆಗ್ರಹ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದ ನಿಯೋಗದಿಂದ ಪೊಲೀಸ್ ಆಯುಕ್ತರಿಗೆ ದೂರು



ಕೋಮು ಗಲಭೆ ಸೃಷ್ಟಿಸುವ ಹೇಳಿಕೆ ನೀಡುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಅವರನ್ನು ಕೂಡಲೇ ಬಂಧಿಸುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗ ಶನಿವಾರ ಮೈಸೂರು ನಗರ ಡಿಸಿಪಿ ಬಿಂದುಮಣಿ ಅವರಿಗೆ ದೂರು ಸಲ್ಲಿಸಿದರು.

ಮೈಸೂರು, ಆ.30(ಬಿಎಲ್‌ಯು)– ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ಕೋಮು ಗಲಭೆಗೆ ಪ್ರಚೋದನೆ ನೀಡುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಅವರನ್ನು ಕೂಡಲೇ ಬಂಧಿಸುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮೈಸೂರು ನಗರ ಡಿಸಿಪಿ ಬಿಂದುಮಣಿ ಅವರಿಗೆ ದೂರು ಸಲ್ಲಿಸಿದರು.

ನಗರ ಪೊಲೀಸ್ ಆಯುಕ್ತರ ಕಚೇರಿಗೆ ಭೇಟಿ ನೀಡಿದ ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗ, ಈ ಇಬ್ಬರು ನಾಯಕರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ತೀವ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ತರುವಾಯ ಪತ್ರಕರ್ತರೊಂದಿಗೆ ಮಾತನಾಡಿದ ಲಕ್ಷ್ಮಣ್, ಕವಿ ನಿಸಾರ್ ಅಹಮ್ಮದ್ ಅವರು ಮೈಸೂರು ದಸರಾ ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಇದೇ ಪ್ರತಾಪ್ ಸಿಂಹ ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದ ಲಕ್ಷ್ಮಣ್ ಅವರು, ಈಗ ರಾಜಕೀಯ ಕಾರಣಕ್ಕಾಗಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಲು ವಿರೋಧ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸುವ ವಿಚಾರ ಕುರಿತಂತೆ 24 ಗಂಟೆಯೊಳಗೆ ಸ್ಪಷ್ಟೀಕರಣ ನೀಡುವಂತೆ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರಿಗೆ ಗಡುವು ನೀಡಿ ಧಮ್ಕಿ ಹಾಕಿದ್ದಾರೆ. ಕೋಮುಗಲಭೆ ಸೃಷ್ಟಿಗೆ ಪ್ರಚೋದನೆ ನೀಡುತ್ತಿರುವ ಪ್ರತಾಪ್ ಸಿಂಹ ಹಾಗೂ ಎಂ.ಜಿ. ಮಹೇಶ್ ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಬಾನು ಮುಷ್ತಾಕ್ ಅವರು ಹಸುವಿನ ಮಾಂಸ ತಿನ್ನುತ್ತಾರೆ. ಇವರಿಂದ ದಸರಾ ಉದ್ಘಾಟನೆ ಮಾಡಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಬಿಜೆಪಿ ನಾಯಕರು ಪ್ರಶ್ನೆ ಮಾಡಿದ್ದಾರೆ. ಆದರೆ ಬಿಜೆಪಿ ಪ್ರಭಾವಿ ನಾಯಕರು ಹಸುಗಳ ಮಾಂಸವನ್ನೇ ವಿದೇಶಕ್ಕೆ ರಫ್ತು ಮಾಡುತ್ತಿದ್ದಾರೆ. ಇಂತಹವರು ಯಾವ ನೈತಿಕತೆ ಇಟ್ಟುಕೊಂಡು ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಟೀಕಿಸುತ್ತಾರೆ ಎಂದು ಪ್ರಶ್ನಿಸಿದರು.

ಬೆಂಗಳೂರಿನ ಕೆಂಗೇರಿಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಅರ್ಚಕರೊಬ್ಬರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದು, ಇವರ ವಿರುದ್ಧ ಕೂಡ ಕ್ರಮ ಕೈಗೊಳ್ಳಬೇಕೆಂದು ಲಕ್ಷ್ಮಣ್ ಆಗ್ರಹಿಸಿದರು.

ಹೋಟೆಲ್ ಮಾಲೀಕರು, ಕುಟುಂಬಸ್ಥರಿಂದ ಸೆ.6ಕ್ಕೆ ಧರ್ಮಸ್ಥಳ ಚಲೋ

ಮೈಸೂರು, ಆ.30(ಬಿಎಲ್‌ಯು)– ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ವಿರೋಧಿಸಿ ಹೋಟೆಲ್ ಮಾಲೀಕರು ಹಾಗೂ ಕುಟುಂಬಸ್ಥರು ಸೆಪ್ಟೆಂಬರ್ 6ರಂದು ಧರ್ಮಸ್ಥಳ ಚಲೋ ನಡೆಸಲಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು, ಅಂದು ಬೆಳಿಗ್ಗೆ 5.30 ಗಂಟೆಗೆ ನಗರದ ನಜರ್‌ಬಾದ್‌ನ ಹೋಟೆಲ್ ದಕ್ಷಿಣ ಪಾಕದಿಂದ ಧರ್ಮಸ್ಥಳಕ್ಕೆ ಪ್ರಯಾಣ ಬೆಳೆಸಲಾಗುವುದು ಎಂದು ತಿಳಿಸಿದ್ದಾರೆ.



ನಾರಾಯಣಗೌಡ

ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರನ್ನು ಭೇಟಿ ಮಾಡಿ ಧರ್ಮಸ್ಥಳದ ಜೊತೆಗೆ ನಾವಿದ್ದೇವೆ ಎಂಬ ಬೆಂಬಲ ಪತ್ರ ನೀಡಲಾಗುವುದು. ತರುವಾಯ ಡಾ.ವೀರೇಂದ್ರ ಹೆಗ್ಗಡೆ ಅವರೊಂದಿಗೆ ಸಮಾಲೋಚನೆ ನಡೆಸಲಾಗುವುದು. ನಂತರ ಮಂಜುನಾಥ ಸ್ವಾಮಿ ದರ್ಶನ ಪಡೆದು ಅದೇ ದಿನ ಹಿಂತಿರುಗುತ್ತೇವೆ.

ಸಂಘದ ಭಕ್ತಾದಿಗಳು, ಹೋಟೆಲ್, ವಸತಿ ಗೃಹ, ರೆಸ್ಟೋರೆಂಟ್, ಸ್ವೀಟ್ಸ್ ಮತ್ತು ಬೇಕರಿ ಮಾಲೀಕರು ಹಾಗೂ ಕುಟುಂಬಸ್ಥರು ಅಂದಿನ ಧರ್ಮಸ್ಥಳ ಚಲೋನಲ್ಲಿ ಪಾಲ್ಗೊಳ್ಳುವರು ಎಂದು ನಾರಾಯಣಗೌಡ ತಿಳಿಸಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗ ಮೇಳ

2 ಸಾವಿರಕ್ಕೂ ಹೆಚ್ಚು ಮಂದಿ ಆಯ್ಕೆ; ಸ್ಥಳದಲ್ಲೇ ನೇಮಕಾತಿ ಪತ್ರ

ಮೈಸೂರು, ಆ.30(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಇಂದು ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ 2 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಸ್ಥಳದಲ್ಲೇ ಆಯ್ಕೆ ಮಾಡಿ, ಕೆಲವರಿಗೆ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು.

ನಗರದ ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಂತರಿಕ ಗುಣಮಟ್ಟ ಆಶ್ವಾಸನಾ ಕೇಂದ್ರ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಸಂಯುಕ್ತವಾಗಿ ಆಯೋಜಿಸಿದ್ದ ಉದ್ಯೋಗ ಮೇಳವನ್ನು ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಉದ್ಘಾಟಿಸಿದರು.

ವಿಶ್ವವಿದ್ಯಾನಿಲಯ ಸೈನ್ಸ್ ಬಿಲ್ಡಿಂಗ್‌ನಲ್ಲಿ ಇಂದು ನಡೆದ ಉದ್ಯೋಗ ಮೇಳದಲ್ಲಿ ಉದ್ಯೋಗಕ್ಕಾಗಿ ಆಯ್ಕೆ ಮಾಡಲು 79 ಖಾಸಗಿ ಕಂಪನಿಗಳು ಪಾಲ್ಗೊಂಡಿದ್ದವು. ಉದ್ಯೋಗ ಅರಸಿ ಬಂದ ಅಭ್ಯರ್ಥಿಗಳು ಆನ್‌ಲೈನ್ ಹಾಗೂ ಸ್ಥಳದಲ್ಲಿ ನೋಂದಣಿ ಮಾಡಿಕೊಂಡಿದ್ದರು. ನೋಂದಣಿ ನಂತರ ಕಂಪನಿಗಳ ಸಂದರ್ಶನದಲ್ಲಿ ಭಾಗಿಯಾಗಿದ್ದರು.

ಉದ್ಯೋಗ ಮೇಳದಲ್ಲಿ ಒಟ್ಟು 3,240 ಅಭ್ಯರ್ಥಿಗಳು ಭಾಗಿಯಾಗಿದ್ದರು. ಇವರಲ್ಲಿ 2,068 ಅಭ್ಯರ್ಥಿಗಳು ಆಯ್ಕೆಗೊಂಡರು. ಆಯ್ಕೆಯಾದವರಲ್ಲಿ 1,187 ಪುರುಷ ಅಭ್ಯರ್ಥಿಗಳಾದರೆ, 881 ಮಹಿಳಾ ಅಭ್ಯರ್ಥಿಗಳಾಗಿದ್ದರು.

ಇದಲ್ಲದೆ ವಿವಿಧ ಕಂಪನಿಗಳಿಗೆ 439 ಅಭ್ಯರ್ಥಿಗಳು ತರಬೇತಿಗೆ ಆಯ್ಕೆಯಾದರು. ಇವರಲ್ಲಿ 331 ಪುರುಷರಾದರೆ, 108 ಮಹಿಳಾ ಅಭ್ಯರ್ಥಿಗಳಾಗಿದ್ದಾರೆ.

ಉದ್ಯೋಗ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು ಕೆಲಸಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಾಂಕೇತಿಕವಾಗಿ ನೇಮಕಾತಿ ಪತ್ರ ವಿತರಣೆ ಮಾಡಿದರು.

ಇಂದಿನ ಕಾರ್ಯಕ್ರಮದ ವೇದಿಕೆಯಲ್ಲಿ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಡೀನ್‌ಗಳಾದ ಪ್ರೊ.ರಾಮನಾಥಂ ನಾಯ್ಡು, ಡಾ.ಎನ್.ಆರ್.ಚಂದ್ರೇಗೌಡ, ಉದ್ಯೋಗಾಧಿಕಾರಿ ಪ್ರೊ.ಆರ್.ಎಚ್. ಪವಿತ್ರ ಹಾಗೂ ಆಂತರಿಕ ಗುಣಮಟ್ಟ ಆಶ್ವಾಸನಾ ಕೇಂದ್ರದ ನಿರ್ದೇಶಕ ಪ್ರೊ. ಎಸ್.ನಿರಂಜನ್‌ರಾಜ್ ಉಪಸ್ಥಿತರಿದ್ದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸೈನ್ಸ್ ಬಿಲ್ಡಿಂಗ್‌ನಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಸಂದರ್ಶನದಲ್ಲಿ ಭಾಗಿಯಾಗಿದ್ದ ಅಭ್ಯರ್ಥಿಗಳು.

ಆಯ್ಕೆಯಾಗದ 1,172 ಅಭ್ಯರ್ಥಿಗಳಲ್ಲಿ ನಿರಾಸೆ

ಉದ್ಯೋಗ ಮೇಳದಲ್ಲಿ ಭಾಗಿಯಾಗಿದ್ದ 1,172 ಅಭ್ಯರ್ಥಿಗಳಿಗೆ ಉದ್ಯೋಗ ದೊರಕದೆ ನಿರಾಸೆಗೊಂಡರು. ಯಾವ ಕಾರಣದಿಂದ ಆಯ್ಕೆಗೊಂಡಿಲ್ಲ ಎಂದು ಖಾಸಗಿ ಕಂಪನಿಗಳು ಅಭ್ಯರ್ಥಿಗಳಿಗೆ ಸ್ಪಷ್ಟನೆ ಕೂಡ ನೀಡಿದವು.

ಇದಕ್ಕೂ ಮೊದಲು ನಡೆದ ಉದ್ಯೋಗ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ವಾಸ್ತವವಾಗಿ ನಿರುದ್ಯೋಗ ಸಮಸ್ಯೆ ಇಲ್ಲ. ಪದವಿ ಮತ್ತು ಕೌಶಲ್ಯವಿರುವ ಅಭ್ಯರ್ಥಿಗಳಿಗಾಗಿ ಖಾಸಗಿ ಕಂಪನಿಗಳು ಹುಡುಕಾಟ ನಡೆಸುತ್ತಿವೆ. ಈ ಹಿನ್ನೆಲೆಯಲ್ಲಿ ಪದವಿ ಮತ್ತು ಕೌಶಲ್ಯ ಇದ್ದರೆ ಸುಲಭವಾಗಿ ಉದ್ಯೋಗ ದೊರೆಯಲಿದೆ. ಕೌಶಲವಿದ್ದರೆ ಪಿಯುಸಿಯಿಂದ ಪದವಿ ಪಡೆದಿರುವವರಿಗೆ ಉದ್ಯೋಗ ದೊರೆಯುತ್ತದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣದಲ್ಲಿ ಪದವಿ ಪಡೆದ ಬಹಳಷ್ಟು ವಿದ್ಯಾರ್ಥಿಗಳು ಐಎಎಸ್, ಐಪಿಎಸ್ ಸೇರಿದಂತೆ ಹಲವು ಉನ್ನತ ಹುದ್ದೆಗಳಿಗೆ ನೇಮಕಾತಿಯಾಗಿದ್ದಾರೆ ಎಂದು ಹೇಳಿದರು.

ದೇಶ – ವಿದೇಶ

ನಾವು ಯುದ್ಧ ಬಯಸುವುದಿಲ್ಲ; ಅಮೆರಿಕ, ಇಸ್ರೇಲ್ ವಿನಾಶಕ್ಕೆ ಯತ್ನಿಸುತ್ತಿವೆ: ಇರಾನ್



ಟೆಹರಾನ್: ನಾವು ಯುದ್ಧವನ್ನು ಬಯಸುವುದಿಲ್ಲ. ಒಂದು ವೇಳೆ, ಇಸ್ರೇಲ್ ಮತ್ತು ಅಮೆರಿಕ ಆಕ್ರಮಣ ಮಾಡಿದರೆ ಅವರ ವಿರುದ್ಧ ನಿಲ್ಲುತ್ತೇವೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಸ್ಪಷ್ಟಪಡಿಸಿದ್ದಾರೆ. ಇರಾನ್ ಅನ್ನು ವಿಭಜಿಸಲು ಮತ್ತು ನಾಶ ಮಾಡಲು ಅಮೆರಿಕ, ಇಸ್ರೇಲ್ ಯತ್ನಿಸುತ್ತಿವೆ. ಆದರೆ, ಇರಾನ್‌ನ ಯಾವೊಬ್ಬ ವ್ಯಕ್ತಿಯೂ ದೇಶದ ವಿಭಜನೆಯನ್ನು ಬಯಸುವುದಿಲ್ಲ ಎಂದು ಇತ್ತೀಚೆಗೆ ನೀಡಿರುವ ಸಂದರ್ಶನ ದಲ್ಲಿ ಹೇಳಿದ್ದಾರೆ. ಇಸ್ರೇಲ್, ಅಮೆರಿಕ ಹಾಗೂ ಇರಾನ್ ನಡುವೆ ಇತ್ತೀಚೆಗೆ ಸಂಘರ್ಷ ನಡೆದಿತ್ತು. ಇಸ್ರೇಲ್ ಪಡೆಗಳು ಇರಾನ್ ಮೇಲೆ ಜೂನ್ 13ರಂದು ದಾಳಿ ಮಾಡಿದ್ದವು. ಇದರೊಂದಿಗೆ, ಉಭಯ ರಾಷ್ಟ್ರಗಳ ನಡುವೆ ಸಂಘರ್ಷ ಆರಂಭವಾಗಿತ್ತು. ಈ ಯುದ್ಧದಲ್ಲಿ ಅಮೆರಿಕವೂ ಮಧ್ಯಪ್ರವೇಶಿಸಿತ್ತು. ಇರಾನ್‌ನ ಮೂರು ಪ್ರಮುಖ ಪರಮಾಣು ಮೂಲಸೌಕರ್ಯಗಳ ಮೇಲೆ ಜೂನ್ 22ರಂದು ದಾಳಿ ಮಾಡಿತ್ತು. ಇದರೊಂದಿಗೆ ಸಂಘರ್ಷ ಮತ್ತಷ್ಟು ಉದ್ವಿಗ್ನಗೊಂಡಿತ್ತು. ಅಮೆರಿಕದ ದಾಳಿಯಿಂದ ಕೆರಳಿದ್ದ ಇರಾನ್, ಕತಾರ್ ಹಾಗೂ ಇರಾಕ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸಿ ತಿರುಗೇಟು ನೀಡಿತ್ತು.


ಭೂಕುಸಿತ: ಒಂದೇ ಕುಟುಂಬದ ಏಳು ಮಂದಿ ಸೇರಿ 11 ಸಾವು



ಶ್ರೀನಗರ: ಜಮ್ಮು–ಕಾಶ್ಮೀರದ ರಿಯಾಸಿ ಜಿಲ್ಲೆಯ ಮಹೋರ್‌ನ ಬದ್ದರ್ ಗ್ರಾಮದಲ್ಲಿ ಭಾರಿ ಮಳೆಯಿಂದಾಗಿ ಭೂಕುಸಿತ ಸಂಭವಿಸಿದ ಪರಿಣಾಮ ಒಂದೇ ಕುಟುಂಬದ ಏಳು ಮಂದಿ ಸೇರಿದಂತೆ ಕನಿಷ್ಠ 11 ಜನರು ಮೃತಪಟ್ಟಿದ್ದಾರೆ. ಭಾರಿ ಮಳೆಯಿಂದಾಗಿ ಭೂಕುಸಿತ ಸಂಭವಿಸಿದ್ದು, ಏಳು ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಮೃತರನ್ನು ನಜೀರ್ ಅಹ್ಮದ್ (38), ಅವರ ಪತ್ನಿ ವಜೀರಾ ಬೇಗಂ (35) ಮತ್ತು ಅವರ ಮಕ್ಕಳಾದ ಬಿಲಾಲ್ ಅಹ್ಮದ್ (13), ಮೊಹಮ್ಮದ್ ಮುಸ್ತಫಾ (11), ಮೊಹಮ್ಮದ್ ಆದಿಲ್ (8), ಮೊಹಮ್ಮದ್ ಮುಬಾರಕ್ (6) ಮತ್ತು ಮೊಹಮ್ಮದ್ ವಾಸಿಂ (5) ಎಂದು ಗುರುತಿಸಲಾಗಿದೆ. ಬೆಟ್ಟದ ಇಳಿಜಾರಿನಲ್ಲಿದ್ದ ಮನೆಯಲ್ಲಿ ನಜೀರ್ ಕುಟುಂಬಸ್ಥರು ನಿದ್ರಿಸುತ್ತಿದ್ದಾಗಲೇ ಭೂಕುಸಿತ ಸಂಭವಿಸಿದೆ. ಅವಶೇಷಗಳಡಿಯಲ್ಲಿ ಸಿಲುಕಿದ್ದ ಮೃತದೇಹಗಳನ್ನು ಹೊರತೆಗೆಯಲಾಗಿದೆ. ಅಲ್ಲದೆ, ರಂಬನ್ ಜಿಲ್ಲೆಯಲ್ಲಿ ಮೇಘಸ್ಫೋಟದಿಂದ ದಿಢೀರ್ ಪ್ರವಾಹ ಉಂಟಾದ ಪರಿಣಾಮ ನಾಲ್ವರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

7 ವರ್ಷಗಳ ನಂತರ ಚೀನಾಗೆ ಪ್ರಧಾನಿ ಮೋದಿ ಭೇಟಿ



ಬೀಜಿಂಗ್: ಜಪಾನ್ ಪ್ರವಾಸದ ಬಳಿಕ ಇದೀಗ ಪ್ರಧಾನಿ ಮೋದಿ ಚೀನಾ ಪ್ರವಾಸ ಕೈಗೊಂಡಿದ್ದು, ಟಿಯಾಂಜಿನ್‌ಗೆ ಬಂದಿಳಿದಿದ್ದಾರೆ. 7 ವರ್ಷಗಳ ನಂತರ ಪ್ರಧಾನಿ ಮೋದಿ ಚೀನಾಗೆ ಭೇಟಿ ನೀಡುತ್ತಿದ್ದು, ಸೆ.1ರವರೆಗೆ ಪ್ರವಾಸ ಕೈಗೊಳ್ಳಲಿದ್ದಾರೆ. ಶನಿವಾರ ಸಂಜೆ 5ರ ಸುಮಾರಿಗೆ ಟಿಯಾಂಜಿನ್‌ಗೆ ಬಂದಿಳಿದ ಮೋದಿಯನ್ನು ಅಲ್ಲಿನ ಭಾರತೀಯ ಸಮುದಾಯ ಪ್ರೀತಿಯಿಂದ ಬರಮಾಡಿಕೊಂಡಿತು. ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್‌ಅವರ ಆಹ್ವಾನದ ಮೇರೆಗೆ ಶಾಂಘೈ ಸಹಕಾರ ಮಂಡಳಿ ರಾಷ್ಟ್ರಗಳ ಮುಖ್ಯಸ್ಥರ ಮಂಡಳಿಯ 25ನೇ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಬಳಿಕ ಆ.31ರಂದು ಸಭೆಯ ಔತಣಕೂಟದಲ್ಲಿ ಭಾಗಿಯಾಗಲಿದ್ದು, ಸೆ.1ರಂದು ಮುಖ್ಯ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಮಯದಲ್ಲಿ ಪ್ರಧಾನಿ ಮೋದಿ ಕೆಲವು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ. ಭಾನುವಾರ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಲಿದ್ದಾರೆ. ಈ ವೇಳೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಹೆಚ್ಚುವರಿ ಆಮದು ಸುಂಕದ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಜೊತೆಗೆ ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭೇಟಿಯಾಗಲಿದ್ದಾರೆ.

ಪಿಂಚಣಿಗೆ ಅರ್ಜಿ ಸಲ್ಲಿಸಿದ ಜಗದೀಪ್ ಧನಕರ್



ಜೈಪುರ: ತಮಗೆ ಸಿಗಬೇಕಿರುವ ಮಾಜಿ ಶಾಸಕರ ಪಿಂಚಣಿಯನ್ನು ಪುನರಾರಂಭಿಸುವಂತೆ ಕೋರಿ ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ರಾಜಸ್ಥಾನ ವಿಧಾನಸಭೆಯ ಕಾರ್ಯದರ್ಶಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


1993ರಿಂದ 1998ರವರೆಗೆ ಕಿಶನ್‌ಗಢ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದ ಧನಕರ್ ಅವರು, 2019ರ ಜುಲೈವರೆಗೆ ಪಿಂಚಣಿ ಪಡೆಯುತ್ತಿದ್ದರು. ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ನೇಮಕಗೊಂಡ ಬಳಿಕ ಪಿಂಚಣಿಯನ್ನು ಸ್ಥಗಿತಗೊಳಿಸಲಾಗಿತ್ತು. ಆರೋಗ್ಯ ಸಮಸ್ಯೆಗಳ ಕಾರಣ ನೀಡಿ ಜುಲೈ 21ರಂದು ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಅವರ ರಾಜೀನಾಮೆಯನ್ನು ಅಂಗೀಕರಿಸಿದ ದಿನದಿಂದ ಪಿಂಚಣಿ ಸೌಲಭ್ಯ ಅನ್ವಯವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಜಸ್ಥಾನದಲ್ಲಿ ಮೊದಲ ಬಾರಿಗೆ ಶಾಸಕರಾಗಿದ್ದವರಿಗೆ ಪ್ರತಿ ತಿಂಗಳು 35 ಸಾವಿರ ಪಿಂಚಣಿ ನೀಡಲಾಗುತ್ತದೆ. ಹೆಚ್ಚಿನ ಅವಧಿ ಹಾಗೂ ವಯಸ್ಸನ್ನು ಪರಿಗಣಿಸಿ ಪಿಂಚಣಿ ಮೊತ್ತವನ್ನು ಹೆಚ್ಚಿಸಲಾಗುತ್ತದೆ. 70 ವರ್ಷ ಮೇಲ್ಪಟ್ಟವರು ಶೇ.20ರಷ್ಟು ಹೆಚ್ಚು ಪಡೆಯುತ್ತಾರೆ. ಧನಕರ್ ಅವರಿಗೆ 74 ವರ್ಷವಾಗಿದ್ದು, ಪ್ರತಿ ತಿಂಗಳು 42 ಸಾವಿರ ಸಿಗಲಿದೆ ಎಂದು ಹೇಳಿದ್ದಾರೆ.

ಟ್ರಂಪ್ ಆಡಳಿತದ ಹೆಚ್ಚುವರಿ ಸುಂಕ ಕಾನೂನುಬಾಹಿರ: ಯುಎಸ್ ಕೋರ್ಟ್

ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ವಿಧಿಸುತ್ತಿರುವ ಹೆಚ್ಚುವರಿ ಸುಂಕಗಳು ಜಾಗತಿಕ ವಾಣಿಜ್ಯ ಪಾಲುದಾರರ ಮೇಲೆ ಪರಿಣಾಮ ಬೀರುತ್ತಿದ್ದು, ಅವು ಕಾನೂನು ಬಾಹಿರವಾಗಿವೆ ಎಂದು ಅಮೆರಿಕದ ಫೆಡರಲ್ ನ್ಯಾಯಾಲಯ ತೀರ್ಪು ನೀಡಿದೆ. ಆದಾಗ್ಯೂ ಅವೆಲ್ಲಾ ಜಾರಿಯಲ್ಲಿವೆ.

ಫೆಡರಲ್ ಸರ್ಕ್ಯೂಟ್‌ಗಾಗಿನ ಮೇಲ್ಮನವಿ ನ್ಯಾಯಾಲಯವು, ಟ್ರಂಪ್ ಅವರು ವ್ಯಾಪಕ ಶ್ರೇಣಿಯ ಸುಂಕಗಳನ್ನು ವಿಧಿಸಲು ತುರ್ತು ಆರ್ಥಿಕ ಅಧಿಕಾರ ಬಳಸಿಕೊಳ್ಳುವಲ್ಲಿ ಮಿತಿಯನ್ನು ಮೀರಿದ್ದಾರೆ ಎಂದು ಒತ್ತಿ ಹೇಳಿದೆ. ಆದಾಗ್ಯೂ, ಹೆಚ್ಚುವರಿ ಸುಂಕಗಳು ಅಕ್ಟೋಬರ್ ಮಧ್ಯದವರೆಗೆ ಮುಂದುವರಿಯಲು ಮತ್ತು ಪ್ರಕರಣವನ್ನು ಸುಪ್ರೀಂಕೋರ್ಟ್‌ಗೆ ಕೊಂಡೊಯ್ಯಲು ಅವಕಾಶ ನೀಡಿದೆ. ಯುರೋಪಿಯನ್ ಒಕ್ಕೂಟದಂತಹ ಪ್ರಮುಖ ಪಾಲುದಾರರೊಂದಿಗೆ ಅಮೆರಿಕ ಮಾಡಿಕೊಂಡಿರುವ ಒಪ್ಪಂದಗಳ ಬಗ್ಗೆಯೂ ಅನುಮಾನ ಮೂಡುವಂತೆ ಮಾಡಿದೆ. ಅಮೆರಿಕದ ಅಧ್ಯಕ್ಷರಾಗಿ 2ನೇ ಅವಧಿಗೆ ಅಧಿಕಾರ ವಹಿಸಿಕೊಂಡ ಟ್ರಂಪ್, ವಾಣಿಜ್ಯ ಪಾಲುದಾರ ರಾಷ್ಟ್ರಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಲು ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ ಬಳಸಿಕೊಂಡಿದ್ದಾರೆ. ಘೋಷಿತ ರಾಷ್ಟ್ರೀಯ ತುರ್ತು ಪರಿಸ್ಥಿತಿ ವೇಳೆ ಹಲವು ಕ್ರಮಗಳನ್ನು ಕೈಗೊಳ್ಳಲು ಈ ಕಾಯ್ದೆಯು ಅಧ್ಯಕ್ಷರಿಗೆ ಮಹತ್ವದ ಅಧಿಕಾರ ನೀಡುತ್ತದೆ. ಆದರೆ, ಸುಂಕ ಹೇರಿಕೆ ಅಧಿಕಾರ ಒಳಗೊಂಡಿಲ್ಲ ಎಂದು ತೀರ್ಪಿನಲ್ಲಿ ಒತ್ತಿ ಹೇಳಿದೆ.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಪುಟ VII
ಮೈಸೂರು ಮಿತ್ರ
ಭಾನುವಾರ 31-08-2025



ಶತಮಾನದ ಬೆಳಕಲ್ಲಿ ಮೈಸೂರು

ಶ್ರೀ ರಾಮಕೃಷ್ಣ ಆಶ್ರಮ

ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ತನ್ನದೇ ಆದ ಮಹತ್ವಪೂರ್ಣವಾದ ಇತಿಹಾಸವನ್ನು ಶ್ರೀ ರಾಮಕೃಷ್ಣ ಮಹಾಸಂಘವು ಪಡೆದಿದೆ. ಸ್ವಾಮಿ ವಿವೇಕಾನಂದರಿಂದ 1897ರಲ್ಲಿ ಆರಂಭಗೊಂಡ ಶ್ರೀರಾಮಕೃಷ್ಣ ಆಶ್ರಮವು ಪ್ರಮುಖವಾಗಿ ಶ್ರೀರಾಮಕೃಷ್ಣ ಸ್ವಾಮಿ ವಿವೇಕಾನಂದರ ವಿಚಾರ ಧಾರೆಗಳನ್ನು, ಬದುಕಿಗೆ ಅಗತ್ಯವಾದ ಸನ್ಮಾರ್ಗಗಳನ್ನು ಬೋಧಿಸುವ ಉಪದೇಶಗಳನ್ನು, ಜನತೆಯಲ್ಲಿ ಆಧ್ಯಾತ್ಮಿಕ ಮೌಲ್ಯಗಳೊಂದಿಗೆ ಮಾನವೀಯತೆಯ ಆದರ್ಶಗಳನ್ನು ಪ್ರತಿಪಾದಿಸುವ ಗುರಿಯನ್ನಿಟ್ಟುಕೊಂಡಿದೆ.

ಮೈಸೂರಿಗೆ ಭೇಟಿ ನೀಡಿದ್ದ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು 1892ರ ಅಕ್ಟೋಬರ್ ತಿಂಗಳಲ್ಲಿ ಕರ್ನಾಟಕದ ಬೆಳಗಾವಿಯನ್ನು ತಲುಪಿದ್ದರು. ನಂತರ ಬೆಂಗಳೂರಿಗೆ ಬಂದು ನೆಲೆಸಿದ್ದರು. ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಶ್ರೀ ಕೆ. ಶೇಷಾದ್ರಿ ಅಯ್ಯರ್ ಅವರ ಪರಿಚಯದ ಫಲವಾಗಿ, ದಿವಾನರ ಆಹ್ವಾನದ ಮೇರೆಗೆ ಸ್ವಾಮಿ ವಿವೇಕಾನಂದರು 1892ರ ನವೆಂಬರ್‌ನಲ್ಲಿ ಮೈಸೂರಿಗೆ ಬಂದು ಎರಡು, ಮೂರು ವಾರಗಳ ಕಾಲ ಉಳಿದುಕೊಂಡಿದ್ದರು. ದಿವಾನರ ವಾಸಸ್ಥಳದ ಪಕ್ಕದಲ್ಲಿಯೇ ಇದ್ದ ನಿರಂಜನ ಮಠದಲ್ಲಿ ಸ್ವಾಮಿ ವಿವೇಕಾನಂದರು ವಾಸವಾಗಿದ್ದರು. ಈ ಸಮಯದಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರನ್ನು ಸ್ವಾಮಿ ವಿವೇಕಾನಂದರು ಭೇಟಿ ಮಾಡಿದ್ದರು.

ಸ್ವಾಮಿ ವಿವೇಕಾನುದು ಮೈಸೂರಿನಲ್ಲಿ ಉಳಿದುಕೊಂಡಿದ್ದಾಗ ಹಲವು ಭಕ್ತರ ಕೋರಿಕೆಯ ಮೇರೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಸಂಸ್ಕೃತದಲ್ಲಿ ವೇದಾಂತದ ಬಗ್ಗೆ ಪ್ರವಚನವನ್ನು ನೀಡುತ್ತಿದ್ದರು. ದಿವಾನರ ಬೀಗರಾದ ಅಂಬಳೆ ಅಣ್ಣಯ್ಯ ಪಂಡಿತರು ಸ್ವಾಮೀಜಿಯವರ ಪ್ರವಚನವನ್ನು ಅನುವಾದಿಸಿ ಜನತೆಗೆ ತಿಳಿಸುತ್ತಿದ್ದಂತೆ.

ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿ, ವಾಸಿಸಿದ್ದ ಜಾಗದಲ್ಲಿ ಬಹುಕೋಟಿ ವೆಚ್ಚದಲ್ಲಿ ಈಗ ವಿವೇಕ ಸ್ಮಾರಕ ನಿರ್ಮಾಣಗೊಂಡು ಉದ್ಘಾಟನೆಯಾಗಲಿದೆ. ಇದು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಶತಮಾನದ ಸಂಭ್ರಮಕ್ಕೆ ಕಲಶಪ್ರಾಯವಾಗಿದೆ.ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ಯುವಜನತೆಗೆ ಪ್ರಚಾರಪಡಿಸುವುದರೊಂದಿಗೆ ಮೌಲ್ಯಗಳನ್ನು ಬೆಳೆಸುವ ಉನ್ನತ ಆದರ್ಶದೊಂದಿಗೆ, ವಿವೇಕಾನಂದರು ಭೇಟಿ ಇತ್ತ ಸ್ಥಳವನ್ನು ಇತಿಹಾಸದ ಪುಟಗಳಲ್ಲಿ ಅಮರವಾಗಿಡಲು ಸಿದ್ಧತೆ ನಡೆಸಲಾಗಿದೆ.

ಮೈಸೂರಿನಲ್ಲಿ ಸ್ಥಾಪಿತವಾದ ಶ್ರೀರಾಮಕೃಷ್ಣ ಆಶ್ರಮ

ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದು ಹೋದ ನಂತರ 1903 ರಲ್ಲಿ ಸ್ವಾಮಿ ರಾಮಕೃಷ್ಣಾನಂದರು, 1906ರಲ್ಲಿ ಸ್ವಾಮಿ ಅಭೇದಾನಂದರು ಮೈಸೂರು ನಗರಕ್ಕೆ ಭೇಟಿ ನೀಡಿದ್ದರ ಪರಿಣಾಮವಾಗಿ, ಮುಂದೆ ಜನರ ಉತ್ಸಾಹ ಮತ್ತು ಹಂಬಲದ ಪರಿಣಾಮದಿಂದಾಗಿ ಮೈಸೂರಿನಲ್ಲಿ ಜೂನ್ 11, 1925ರಲ್ಲಿ ದಿವಾನ್ಸ್ ರಸ್ತೆಯಲ್ಲಿ ಬಾಡಿಗೆ ಮನೆಯನ್ನು ತೆಗೆದುಕೊಂಡು ಅಲ್ಲಿ ಶ್ರೀರಾಮಕೃಷ್ಣ ಆಶ್ರಮವನ್ನು ಆರಂಭಿಸಲಾಯಿತು. ಸ್ವಾಮಿ ಸಿದ್ಧೇಶ್ವರಾನಂದಜೀ ಅವರು ಮೈಸೂರು ಆಶ್ರಮದ ಮೊದಲ ಅಧ್ಯಕ್ಷರಾಗಿದ್ದರು.

ಆಶ್ರಮದ ಪ್ರಗತಿಗೆ ಕಾರಣರಾದ ಮೈಸೂರು ಅರಸರು

ಸ್ವಾಮಿ ಸಿದ್ಧೇಶ್ವರಾನಂದರ ಕೋರಿಕೆಯನ್ನು ಮನ್ನಿಸಿ ಆಗಿನ ಮೈಸೂರು ರಾಜರಾಗಿದ್ದ ನಾಲ್ವಡಿ ಕೃಷ್ಣರಾಜರ ಇಚ್ಛೆಯಂತೆ 1931 ರಲ್ಲಿ ಆಶ್ರಮಕ್ಕೆ ವಾಣಿವಿಲಾಸ ಮೊಹಲ್ಲಾದಲ್ಲಿ ಎರಡು ಎಕರೆ ಭೂಮಿಯನ್ನು ಆಶ್ರಮದ ಸ್ಥಿರಾಸ್ತಿಯನ್ನಾಗಿ ದಾನ ಮಾಡಿದ್ದರ ಪರಿಣಾಮವಾಗಿ, ಪ್ರಸ್ತುತ ಇರುವ ಶ್ರೀರಾಮಕೃಷ್ಣ ಆಶ್ರಮ ನಿರ್ಮಾಣವಾಯಿತು. ಅಷ್ಟೇ ಅಲ್ಲ, ನಂತರದ ದಿನಗಳಲ್ಲಿ ಸ್ವಾಮಿ ಶಾಂಭವಾನಂದಜೀ ಅವರು ನೂತನ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವ ಆಸೆಯನ್ನು ವ್ಯಕ್ತಪಡಿಸಿದ್ದು ಅದಕ್ಕಾಗಿ ಆಗಿನ ಕಾಲಕ್ಕೆ ಸುಮಾರು 2,39,000 ರೂಪಾಯಿಗಳು ಬೇಕಾಗಬಹುದೆಂಬ ಆಲೋಚನೆಯಲ್ಲಿದ್ದಾಗ ಮಹಾರಾಜರ ಸರ್ಕಾರವು ವಿಶಾಲವಾದ ಖಾಲಿ ಜಾಗವನ್ನು ನೀಡಿದ್ದಲ್ಲದೇ, ಅಂದಾಜು ಖರ್ಚಿನಲ್ಲಿದ್ದ ಅರ್ಧಭಾಗ ಹಣವನ್ನು ಅನುದಾನವಾಗಿ ಆಶ್ರಮಕ್ಕೆ ನೀಡಿತು.

ಮೈಸೂರು ಆಶ್ರಮದ ವಿಶೇಷತೆ

ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ ಎಂಬ ಮೂಲ ಉದ್ದೇಶವನ್ನು ಇಟ್ಟುಕೊಂಡು ಸ್ಥಾಪಿತವಾಗಿರುವ ಶ್ರೀರಾಮಕೃಷ್ಣ ಮಿಷನ್ ಮತ್ತು ಮಠದ ಪ್ರಮುಖ ಶಾಖೆಗಳಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವೂ ಒಂದಾಗಿದೆ. ಆಧ್ಯಾತ್ಮಿಕ ಪ್ರಚಾರ, ಶಿಕ್ಷಣ, ನೈತಿಕ ಮೌಲ್ಯಗಳ ಜನರಲ್ಲಿ ಬೆಳೆಸುವ ಸದುದ್ದೇಶಗಳ ಜೊತೆಗೆ ಸೇವಾ ಮನೋಭಾವದಿಂದ ಆರಂಭದಿಂದಲೂ ನೆರವೇರಿಸುತ್ತಾ ಬಂದಿದೆ.

ಸರ್ವಧರ್ಮ ಸಮನ್ವಯ

ಧರ್ಮ, ಜಾತಿಗಳೆಂಬ ಭೇದಭಾವವಿಲ್ಲದೇ ಪ್ರತಿಯೊಂದು ಧರ್ಮವನ್ನು ಸಮಾನವಾಗಿ ಕಾಣಬೇಕೆಂಬ ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯ ತತ್ವವನ್ನು ಅಳವಡಿಸಿಕೊಂಡು ಆಧ್ಯಾತ್ಮಿಕ ಚಟುವಟಿಕೆಗಳ ಮೂಲಕ,ವಿಶೇಷ ಉಪನ್ಯಾಸಗಳನ್ನು ನೀಡಿ ಭಜನೆ, ದಿವ್ಯತ್ರಯರ ಜಯಂತಿಗಳ ಆಚರಣೆಗಳ ಮೂಲಕ ಭಕ್ತರಲ್ಲಿ ಆಧ್ಯಾತ್ಮಿಕ ತಿಳಿವಳಿಕೆಯನ್ನು ಮೂಡಿಸುವ ಕಾರ್ಯವನ್ನು ಆಶ್ರಮ ಮಾಡುತ್ತಾ ಬಂದಿದೆ.



ಸ್ವಾಮಿ ಸಿದ್ಧೇಶರಾನಂದರು ಹಾಗೂ ಆಶ್ರಮದಲ್ಲಿ ಅವರ ಸಂಪರ್ಕಕ್ಕೆ ಬಂದ ಕೆಲ ಸ್ವಾಮೀಜಿಗಳ ನೈಜ ವ್ಯಕ್ತಿತ್ವ, ಸರಳ ಬದುಕು ಮತ್ತು ಉತ್ಕೃಷ್ಟ ಚಿಂತನ ಶೈಲಿ ಕುವೆಂಪು ಅವರ ಬೌದ್ಧಿಕ ಪ್ರಗತಿಯಲ್ಲೂ ಹಾಗೂ ಸಾಹಿತ್ಯದ ಗಂಭೀರತೆಯಲ್ಲೂ ಪ್ರೇರಣೆಯಾಗಿ ಕಾರ್ಯನಿರ್ವಹಿಸಿದವು. ಸ್ವಾಮಿ ವಿವೇಕಾನಂದರ 'ಕೃತಿಶ್ರೇಣಿ' ಮತ್ತು 'ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ'ಗಳು ಅವರಿಗೆ ಅತ್ಯಂತ ಪ್ರಿಯವಾಗಿದ್ದು, ಈ ಕೃತಿಗಳ ಮೂಲಕ ಅವರು ವೇದಾಂತ, ಅಧ್ಯಾತ್ಮ, ಮಾನವೀಯತೆ, ಧರ್ಮ, ಮತ್ತು ಸಮಾಜ ಸೇವೆಯ ಮಹತ್ವವನ್ನು ಉತ್ತಮವಾಗಿ ಗ್ರಹಿಸಿದರು. ಶ್ರೀ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಆದರ್ಶಗಳನ್ನು ತಮ್ಮ ಬದುಕಿನ ಮಾರ್ಗದರ್ಶನವಾಗಿಸಿಕೊಂಡಿದ್ದು, ಭಾರತೀಯ ಸಂಸ್ಕೃತಿಯ ಆಳವನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸಿದರು.

ಶಿಕ್ಷಣ ಸಂಸ್ಥೆಗಳ ಮೂಲಕ ನೈತಿಕ ಮೌಲ್ಯಗಳ ಬೆಳೆಸುವಿಕೆ

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಶ್ರೀರಾಮಕೃಷ್ಣ ವಿದ್ಯಾಶಾಲೆಯನ್ನು ಸುಮಾರು 69 ಎಕರೆಯ ಸುಂದರವಾದ ಪರಿಸರದಲ್ಲಿ 1953ರಲ್ಲಿ ಸ್ಥಾಪಿಸಿತು. ಎಂಟನೇ ತರಗತಿಯಿಂದ ಪಿಯುಸಿವರೆಗೆ ವಿದ್ಯಾಭ್ಯಾಸಕ್ಕೆ (ಆರಂಭದಲ್ಲಿದದ್ದು ಆರನೇ ತರಗತಿಯಿಂದ ಹತ್ತನೇ ತರಗತಿವರೆಗೆ) ಅನುವು ಮಾಡಿಕೊಟ್ಟು ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ಆಧ್ಯಾತ್ಮ, ಭಕ್ತಿ, ಪ್ರಾರ್ಥನೆ, ನೈತಿಕ ಮೌಲ್ಯ, ಕ್ರೀಡೆ, ಈಜು, ಪಠ್ಯೇತರ ಚಟುವಟಿಕೆಗಳಿಗೂ ಮಹತ್ವವನ್ನು ಕೊಡುವುದರೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವುದರೊಂದಿಗೆ ಇತರೆ ಶಾಲೆಗಳಿಗಿಂತ ಭಿನ್ನವಾಗಿ ಕಾರ್ಯನಿರ್ವಹಿಸುತ್ತಿದೆ. ಮೈಸೂರಿನಲ್ಲಿ ಮಾದರಿ ವಸತಿ ಶಾಲೆಯಾಗಿ ಸತತ 73 ವರ್ಷಗಳಿಂದಲೂ ಬೇಡಿಕೆಯನ್ನು ಉಳಿಸಿಕೊಂಡು ಬಂದಿರುವುದು ಹೆಗ್ಗಳಿಕೆಯ ವಿಷಯವಾಗಿದೆ.

ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (ರಿಂಸೆ)

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಮತ್ತೊಂದು ಶೈಕ್ಷಣಿಕ ಸಂಸ್ಥೆ ಇದಾಗಿದ್ದು 50 ವರ್ಷಗಳನ್ನು ಪೂರೈಸಿದೆ. ಐದಾರು ವರ್ಷಗಳ ಹಿಂದೆ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿಯನ್ನು ನೀಡುವ ಬಿ.ಇಡಿ ಪದವಿಯನ್ನು ಇಲ್ಲಿ ಪಡೆಯಬಹುದಾಗಿತ್ತು ಉಳಿದ ಕಡೆಗಿಂತ ವಿಭಿನ್ನವಾಗಿ ನೈತಿಕ ಮೌಲ್ಯಗಳೊಂದಿಗೆ ಮಾದರಿ ಶಿಕ್ಷಕರನ್ನು ರೂಪಿಸುವ ಸಂಸ್ಥೆಯಾಗಿ ಪ್ರಸಿದ್ಧವಾಗಿತ್ತು.

ಇತ್ತೀಚೆಗೆ ಸರ್ಕಾರ ಎರಡು ವರ್ಷಗಳ ಬಿ.ಇಡಿ ಯನ್ನು ಆರಂಭಿಸಿದ ನಂತರ ಕೆಲವು ಅನಿವಾರ್ಯ ಕಾರಣಗಳಿಂದ ಬಿ.ಇಡಿ ಪದವಿಯ ತರಬೇತಿಯನ್ನು ಸ್ಥಗಿತಿಗೊಳಿಸಿದರೂ ಕೂಡ ಇಂದಿಗೂ ವಿವಿಧ ಶಾಲೆಯ ವಿದ್ಯಾರ್ಥಿಗಳಿಗೆ, ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ, ವಿವಿಧ ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ, ಮಹಿಳೆಯರಿಗೆ, ಪುರುಷರಿಗೆ ಆಧ್ಯಾತ್ಮಿಕ ಶಿಬಿರಗಳನ್ನು ನಡೆಸುತ್ತಾ ಬಂದಿದ್ದು ಒತ್ತಡದ ಜೀವನದಲ್ಲಿ ಕಣ್ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳೊಂದಿಗೆ ಆಧ್ಯಾತ್ಮಿಕ ವಿಚಾರಗಳನ್ನು, ಯೋಗಾಸನ, ಪ್ರಾರ್ಥನೆ, ಧ್ಯಾನ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ವರ್ಷದ ಎಲ್ಲಾ ಕಾಲದಲ್ಲಿಯೂ ಎಲ್ಲರ ಗಮನ ಸೆಳೆಯುವ ಕೆಲಸವನ್ನು ಮಾಡುತ್ತಿದೆ.

ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ ಆಶ್ರಮ

ಶ್ರೀ ರಾಮಕೃಷ್ಣ ಆಶ್ರಮದ ಮತ್ತೊಂದು ಹೆಗ್ಗಳಿಕೆಯ ವಿಚಾರವೆಂದರೆ ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತ ಇನ್ನೂ ಮೊದಲಾದ ಕೃತಿಗಳ ಜೊತೆಗೆ, ಆಧ್ಯಾತ್ಮಿಕ ವಿಕಸನಕ್ಕೆ ಅಗತ್ಯವಾದ ವಿಚಾರಗಳನ್ನು ಒಳಗೊಂಡಂತಹ ಸುಮಾರು 488 ಕೃತಿಗಳನ್ನು ಪ್ರಕಟಪಡಿಸಿ, ಅತೀ ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ಕನ್ನಡ ಸಾಹಿತ್ಯಕ್ಕೆ ತನ್ನ ವಿಶಿಷ್ಟ ಕೊಡುಗೆಯನ್ನು ನೀಡಿದೆ.

ಕುವೆಂಪು ಅವರ ಜೀವನಕ್ಕೆ ಮಹತ್ತರ ತಿರುವು ಕೊಟ್ಟ ಆಶ್ರಮ

ರಾಷ್ಟ್ರಕವಿ, ಕನ್ನಡಕ್ಕೆ ಮೊದಲ ಜ್ಞಾನಪೀಠ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ತಂದು ಕೊಟ್ಟ ಕವಿ, ಸಾಹಿತಿ, ಮೇರುಪ್ರತಿಭೆ ಕುವೆಂಪು ಅವರ ಜೀವನಕ್ಕೆ ಮಹತ್ತರ ತಿರುವನ್ನು ಕೊಟ್ಟ ಕೀರ್ತಿ ಶ್ರೀರಾಮಕೃಷ್ಣ ಆಶ್ರಮಕ್ಕೆ ಸಲ್ಲುತ್ತದೆ.

ಕುವೆಂಪು ಅವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಒಡನಾಟ ಇಟ್ಟುಕೊಂಡಿದ್ದ ದಿನಗಳಲ್ಲಿ ಒಮ್ಮೆ ಮಲೇರಿಯಾ ರೋಗಕ್ಕೆ ತುತ್ತಾಗಿದ್ದ ಸಂದರ್ಭದಲ್ಲಿ ಅವರು ತಂಗಿದ್ದ ಕೊಠಡಿಗೆ ಸ್ವತಃ ಸ್ವಾಮಿ ಸಿದ್ಧೇಶ್ವರಾನಂದಜೀ ಅವರು ನಾ.ಕಸ್ತೂರಿ ಅವರೊಡನೆ ತೆರಳಿ ಪುಟ್ಟಪ್ಪ ಅವರನ್ನು ಆಸ್ಪತ್ರೆಗೆ ಸೇರಿಸಿದರು. ಅವರು ಗುಣಮುಖರಾದ ಮೇಲೆ ಅವರನ್ನು ಆಶ್ರಮಕ್ಕೆ ಬರುವಂತೆ ಒತ್ತಾಯಿಸಿ, ತಮ್ಮೊಂದಿಗೆ ಇರುವಂತೆ ನೋಡಿಕೊಂಡಿದ್ದರು.ಸ್ವಾಮೀಜಿ ಅವರ ಮಾತಿಗೆ ಕಟ್ಟುಬಿದ್ದು ಹತ್ತು ವರ್ಷಗಳ ಕಾಲ ಅಂದರೆ 1926 ರಿಂದ 1936 ರ ತನಕ ಶ್ರೀರಾಮಕೃಷ್ಣ ಆಶ್ರಮದಲ್ಲಿದ್ದರು. ಈ ಅವಧಿಯಲ್ಲಿ ಕುವೆಂಪು ಅವರು ಅನೇಕ ಕೃತಿಗಳನ್ನು ರಚಿಸಿದ್ದರು. ಕೊಳಲು, ಬೊಮ್ಮನಹಳ್ಳಿಯ ಕಿಂದರಿಜೋಗಿ, ಯಮನ ಸೋಲು, ಜಲಗಾರ, ಮಹಾರಾತ್ರಿ ನಾಟಕಗಳನ್ನು ಸೇರಿದಂತೆ ಒಂಬತ್ತು ನಾಟಕಗಳನ್ನು, ಎರಡು ಕಥಾಸಂಕಲನಗಳನ್ನು, ಕಾದಂಬರಿಯಾದ ಕಾನೂರು ಹೆಗ್ಗಡತಿ, ಮಲೆನಾಡಿನ ಚಿತ್ರಗಳು ಗದ್ಯ ಚಿತ್ರವನ್ನು, ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿರಾಜಮಾನರಾಗಿ ಬೆಳಗಿದರು.

ಸ್ವಾಮಿ ಸಿದ್ಧೇಶರಾನಂದರು ಹಾಗೂ ಆಶ್ರಮದಲ್ಲಿ ಅವರ ಸಂಪರ್ಕಕ್ಕೆ ಬಂದ ಕೆಲ ಸ್ವಾಮೀಜಿಗಳ ನೈಜ ವ್ಯಕ್ತಿತ್ವ, ಸರಳ ಬದುಕು ಮತ್ತು ಉತ್ಕೃಷ್ಟ ಚಿಂತನ ಶೈಲಿ ಕುವೆಂಪು ಅವರ ಬೌದ್ಧಿಕ ಪ್ರಗತಿಯಲ್ಲೂ ಹಾಗೂ ಸಾಹಿತ್ಯದ ಗಂಭೀರತೆಯಲ್ಲೂ ಪ್ರೇರಣೆಯಾಗಿ ಕಾರ್ಯನಿರ್ವಹಿಸಿದವು. ಸ್ವಾಮಿ ವಿವೇಕಾನಂದರ 'ಕೃತಿಶ್ರೇಣಿ' ಮತ್ತು 'ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ'ಗಳು ಅವರಿಗೆ ಅತ್ಯಂತ ಪ್ರಿಯವಾಗಿದ್ದು, ಈ ಕೃತಿಗಳ ಮೂಲಕ ಅವರು ವೇದಾಂತ, ಅಧ್ಯಾತ್ಮ, ಮಾನವೀಯತೆ, ಧರ್ಮ ಮತ್ತು ಸಮಾಜ ಸೇವೆಯ ಮಹತ್ವವನ್ನು ಉತ್ತಮವಾಗಿ ಗ್ರಹಿಸಿದರು. ಶ್ರೀರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಆದರ್ಶಗಳನ್ನು ತಮ್ಮ ಬದುಕಿನ ಮಾರ್ಗದರ್ಶನವಾಗಿಸಿಕೊಂಡಿದ್ದು, ಭಾರತೀಯ ಸಂಸ್ಕೃತಿಯ ಆಳವನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸಿದರು.

ಹೀಗೆ ಕುವೆಂಪು ಅವರ ಸಾಹಿತ್ಯದ ಜೀವನಕ್ಕೆ ಮಹತ್ತರ ತಿರುವನ್ನು ಕೊಟ್ಟ ಶ್ರೀರಾಮಕೃಷ್ಣ ಆಶ್ರಮ ಅವರ ಬದುಕಿನಲ್ಲಿ ಮಹತ್ತರ ಬದಲಾವಣೆಯನ್ನು ತಂದಿತು. ಅಷ್ಟೇ ಅಲ್ಲ, ತಮ್ಮ ಮೊದಲ ಕೃತಿ ಪ್ರಕಟವಾಗಲು ಕೂಡ ಸ್ವಾಮೀಜಿ ಅವರ ಪ್ರೇರಣೆ,ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಸಹಾಯ, ಇತ್ಯಾದಿ ಎಲ್ಲ ಮಾಹಿತಿಯನ್ನು ತಮ್ಮ ಆತ್ಮಕಥೆಯಾದ ನೆನಪಿನ ದೋಣಿಯಲ್ಲಿ ಸವಿವರವಾಗಿ ತಿಳಿಸಿದ್ದಾರೆ.

ತಮ್ಮ ಜೀವನದಲ್ಲಿ ಸ್ವಾಮಿ ವಿವೇಕಾನಂದರ ಪ್ರಭಾವ ಎಷ್ಟರ ಮಟ್ಟಿಗೆ ಇತ್ತು ಎಂಬುದಕ್ಕೆ ತಮ್ಮ ಆತ್ಮಕಥೆಯಲ್ಲಿ ಒಂದು ಕಡೆ ತಿಳಿಸಿದ್ದಾರೆ– ಅನಾರೋಗ್ಯಕ್ಕೆ ತುತ್ತಾಗಿದ್ದ ಕುವೆಂಪು ಅವರನ್ನು ಮನೆಯಿಂದ ದೂರವಿಟ್ಟು ಶುಶ್ರೂಷೆ ಮಾಡುತ್ತಿದ್ದ ಸಂದರ್ಭದಲ್ಲಿ ಪುಟ್ಟಪ್ಪ ಇನ್ನಿಲ್ಲ, ನಾನೇ ಸ್ವಾಮಿ ವಿವೇಕಾನಂದ ಎಂದು ಪದೇ ಪದೇ ಹೇಳುತ್ತಿದ್ದುದ್ದನ್ನು ಸ್ಮರಿಸುವ ಮೂಲಕ ತಮ್ಮ ಬದುಕಿನಲ್ಲಿ ದಿವ್ಯತ್ರಯರ ಪಾತ್ರ ಎಷ್ಟು ಗಹನವಾಗಿ ತಮ್ಮನ್ನು ಪ್ರಭಾವಿಸಿತ್ತು ಎಂಬುದನ್ನು ತಿಳಿಸಿದ್ದಾರೆ.

ಸಾಹಿತಿಗಳಿಗೂ ಆಶ್ರಮಕ್ಕೂ ಇರುವ ನಂಟು

ಕನ್ನಡ ಸಾಹಿತಿಗಳಲ್ಲಿ ಅನೇಕರು ಮೈಸೂರು ಶ್ರೀರಾಮಕೃಷ್ಣದ ಒಡನಾಟವನ್ನು ಇಟ್ಟುಕೊಂಡಿದ್ದಾರೆ. ನಾ.ಕಸ್ತೂರಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ಸಿ.ಪಿ.ಕೆ, ಎಸ್.ಎಲ್.ಭೈರಪ್ಪ ಡಾ.ಜಿ.ಎಸ್. ಶಿವರುದ್ರಪ್ಪ ಹಂಪನಾ, ಡಾ.ಪ್ರಭುಶಂಕರ, ಡಾ.ಪ್ರಭುಪ್ರಸಾದ್, ದೇ.ಜವರೇಗೌಡರು, ಪ್ರೊ.ಕೃಷ್ಣೇಗೌಡರು, ಜಿ.ಎಸ್.ಜಯದೇವ, ಕೆ.ಸಿ.ಶಿವಪ್ಪ ಹೀಗೆ ಹಲವಾರು ಸಾಹಿತಿಗಳು ಆಶ್ರಮದೊಂದಿಗೆ ಉತ್ತಮ ಬಾಂಧವ್ಯವನ್ನಿಟ್ಟುಕೊಂಡಿದ್ದಾರೆ.

ಆಶ್ರಮಕ್ಕೆ ಅಧ್ಯಕ್ಷರುಗಳ ಕೊಡುಗೆ

ನೂರು ವರ್ಷಗಳ ಇತಿಹಾಸವನ್ನು ಹೊಂದಿರುವ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಸ್ವಾಮಿ ಸಿದ್ಧೇಶ್ವರಾನಂದಜೀ, ಸ್ವಾಮಿ ದೇಶಿಕಾನಂದಜೀ, ಸ್ವಾಮಿ ಶಾಂಭವಾನಂದಜೀ, ಸ್ವಾಮಿ ಸೋಮನಾಥನಾಂದಜೀ, ಸ್ವಾಮಿ ಸುರೇಶಾನಂದಜೀ, ಸ್ವಾಮಿ ಆತ್ಮ ವಿದಾನಂದಜೀ, ಸ್ವಾಮಿ ನಿತ್ಯಸ್ಥಾನಂದಜೀ, ಸ್ವಾಮಿ ಮುಕ್ತಿದಾನಂದಜೀ, ಸ್ವಾಮಿ ಆತ್ಮಜ್ಞಾನಂದಜೀ, ಸ್ವಾಮಿ ಮುಕ್ತಿದಾನಂದಜೀ ಅವರುಗಳು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾ ಆಶ್ರಮದಲ್ಲಿ ವಿವಿಧ ಕಾರ್ಯಕ್ರಮಗಳ ಮೂಲಕ ಆಯೋಜಿಸಿ ಜನಮಾನಸದಲ್ಲಿ ದಿವ್ಯತ್ರಯರ ಸಂದೇಶಗಳನ್ನು ಗಟ್ಟಿಯಾಗಿ ನೆಲೆನಿಲ್ಲುವಂತೆ ಮಾಡಿದ್ದಾರೆ.

ಇದರ ಜೊತೆಗೆ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾಗಿ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾಗಿ ಹಾಗೂ ಶ್ರೀರಾಮಕೃಷ್ಣ ಆಶ್ರಮದಲ್ಲಿ ಅನೇಕ ಸ್ವಾಮೀಜಿಗಳು, ಬ್ರಹ್ಮಚಾರಿಗಳು ತಮ್ಮ ಅವಿರತ ಸೇವೆಯಿಂದ ಆಶ್ರಮದಲ್ಲಿದ್ದುಕೊಂಡು ನಿರಂತರವಾಗಿ ಜನರಲ್ಲಿ, ವಿದ್ಯಾರ್ಥಿಗಳಲ್ಲಿ ಆಧ್ಯಾತ್ಮಿಕತೆಯ ಅರಿವನ್ನು ಮೂಡಿಸುವ ಕೆಲಸದಲ್ಲಿ ತಲ್ಲೀನರಾಗಿದ್ದಾರೆ.

ಸ್ವಾಮಿ ಮುಕ್ತಿದಾನಂದಜೀ ಅವರ ಸತತ ಪರಿಶ್ರಮದ ಫಲವೇ ವಿವೇಕ ಸ್ಮಾರಕ

ಸ್ವಾಮಿ ಮುಕ್ತಿದಾನಂದಜೀ ಮಹರಾಜ್ ಅವರು ಏನೇ ಅಡೆತಡೆಗಳು ಬಂದರೂ ಶ್ರೀರಾಮಕೃಷ್ಣರ ಕೃಪೆಯಿಂದ, ಆಶ್ರಮದ ಭಕ್ತರು, ಸಾಹಿತಿಗಳು, ಹಿತೈಷಿಗಳ ನೆರವಿನಿಂದ ಇದೇ ಡಿಸೆಂಬರ್ 2025 ರಂದು ಆಶ್ರಮದ ಶತಮಾನೋತ್ಸವದ ಸಮಾರಂಭದ ಸಮಯದಲ್ಲಿ ವಿವೇಕ ಸ್ಮಾರಕದ ಉದ್ಘಾಟನೆಯು ಆಗಲಿದ್ದು, ಇದಕ್ಕೆ ಸ್ವಾಮಿ ಮುಕ್ತಿದಾನಂದಜೀ ಮಹರಾಜ್ ಅವರ ಅವಿರತ ಪ್ರಯತ್ನದಿಂದ ಕನಸು ನನಸಾಗಲಿದೆ.

ಸಡಗರದ ಸಂಭ್ರಮದಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಶತಮಾನದ ಕಾರ್ಯಕ್ರಮ ಡಿಸೆಂಬರ್‌ನಲ್ಲಿ ಜರುಗಲಿದ್ದು, ಅನೇಕ ಸಾಧು ಸಂತರು, ಸಾಹಿತಿಗಳು, ರಾಜಕೀಯ ಮುಖಂಡರುಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಭಕ್ತರು ಅಪಾರ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯ ಕ್ರಮವನ್ನು ಯಶಸ್ವಿಗೊಳಿಸಬೇಕೆಂಬ ಆಸೆ ನಮ್ಮೆಲ್ಲರದು.

ಬನ್ನಿರಿ..ಬನ್ನಿರಿ. ಭಕ್ತಾದಿಗಳೇ ಬನ್ನೀರಿ
ಶತಮಾನದ ಉತ್ಸವವ ನೋಡ ಬನ್ನಿರಿ.
ಇತಿಹಾಸದ ಪುಟಗಳಲ್ಲಿ ಕಣ್ಣು ಹರಿಸಿ,
ಶ್ರೀರಾಮಕೃಷ್ಣ ಆಶ್ರಮದ ಮಹಿಮೆ ಸಾರುವ ಬನ್ನಿರಿ.

ಅನಂತ ಸೇವೆಯಲ್ಲಿ ತೊಡಗಿದಂತ ಆಶ್ರಮ,
ಮಹಾತ್ಮರ ರೂಪ ಹೊತ್ತ ದೀಪದ ಧರ್ಮ,
ನಡೆ ನುಡಿಯಲಿ ಬೆಳೆದು ನಿಂತ ಜ್ಞಾನ–ಭಕ್ತಿ–ಕರ್ಮ
ಸಿದ್ಧೇಶ್ವರಾನಂದಜೀ ಪುಣ್ಯದಲಿ ಪವಿತ್ರ
ನೆಲೆಯಾಗಿಹುದು ಆಧ್ಯಾತ್ಮ,

ಶತಮಾನವು ಪೂರೈಸಿದ ಸಾಧನೆಯ ಪರಂಪರೆ,
ಅಳಿಯದ ನೆನಪುಗಳಲಿ ಕಂಗೊಳಿಸುವಳು ವಸುಂಧರೆ,
ಬನ್ನಿರಿ.. ಬನ್ನಿರಿ ಪೂಜೆಗೈಯ್ಯುವ
ಭಕ್ತಿ ಭಾವದಿಂದ ಸ್ಮರಿಸಿ ನಮನಗೈಯುವ.


ಕುವೆಂಪು ತವರಿನಂಥ ರಸಋಷಿಗಳ ಬೀಡು,
ಸಾಹಿತ್ಯ ಸಂಸ್ಕೃತಿಗೆ ಜೀವತಳೆದ ಗೂಡು,
ವಿದ್ಯಾರ್ಥಿಗಳ ಏಳಿಗೆಯಲಿ ನಿತ್ಯ ಶ್ರಮಿಸುವ ಆಶ್ರಮ,
ಮಾನವೀಯ ಮೌಲ್ಯಗಳ ಬಿತ್ತುವುದೇ ಆಶ್ರಮದ ಧರ್ಮ,
ಬನ್ನಿರಿ ಬನ್ನಿರಿ ಭಕ್ತಾದಿಗಳೇ ಬನ್ನಿರಿ,
ಸ್ಮರಣೆಯಲ್ಲಿ ನಮಿಸಿ ನಾವು ಧನ್ಯರಾಗುವ,

ಆಧ್ಯಾತ್ಮ ಆಳದಲಿ ಬದುಕು ರೂಪಿಸುವ ದೀಪ,
ಮಾನವತೆಯ ಬಸಿಯಲು ದೃಢ ಸಂಕಲ್ಪ,
ಕೊಲ್ಕತ್ತಾದಿಂದ ಮೈಸೂರಿಗೆ ಹರಿದು ಬಂದ ಬೆಳಕು,
ಆಶ್ರಮದ ಶಿಸ್ತಿನಲ್ಲಿ ಅರಳುವುದು ಬದುಕು,
ಸಂತರು ಬಿತ್ತಿದ ಮನುಜ ಧರ್ಮದ ಬೀಜ,

ಅಮೃತವೃಕ್ಷದಿ ಕಲಿತವರು ಬೆಳಗುವರು ಸಹಜ,
ಬನ್ನಿರಿ... ಬನ್ನಿರಿ ಭಕ್ತಾದಿಗಳೇ ಬನ್ನಿರಿ
ಶತಮಾನದ ಆಶ್ರಮವ ಸ್ಮರಣೆ ಮಾಡುವ,
ತಲೆಬಾಗಿ ನಮಿಸಿ ನಾವು ಧನ್ಯರಾಗುವ

ಭಕ್ತ ಸಮುದಾಯಗಳಿಗೆ ನಿತ್ಯ ಶಿಬಿರವು,
ಪ್ರತಿಯೊರ್ವರಿಗೂ ಉಂಟು ಇಲ್ಲಿ ಆಧ್ಯಾತ್ಮಿಕ ಔತಣವು
ವಿವೇಕಾನಂದರ ಸ್ಮರಣೆಯ ನಿರ್ಮಿತಿಯ ಸ್ಮಾರಕ
ಇದುವೇ ಸರ್ಕಾರ, ಹಳೆಯ ವಿದ್ಯಾರ್ಥಿಗಳ
ಸಹಕಾರದ ದ್ಯೋತಕ

ಸ್ವಾಮಿ ಮುಕ್ತಿದಾನಂದಜೀ ಮಹರಾಜ್‌ರ ಅವಿರತ
ಹೋರಾಟದ ಕಾಯಕ,
ನಾಳೆಗೆ ಇದುವೇ ಸ್ಫೂರ್ತಿ ಸೆಲೆಯ ರೂಪಕ,
ಪ್ರತಿ ಹೃದಯದಲ್ಲಿ ಹಬ್ಬಿನಿಲ್ಲುವುದು ದಿವ್ಯ ಆಧ್ಯಾತ್ಮಿಕ,
ಬನ್ನಿರಿ... ಬನ್ನಿರಿ.. ಭಕ್ತಾದಿಗಳೇ ಬನ್ನಿರಿ
ಮನದಿ ನಮಿಸಿ ಪುಣ್ಯದಲಿ ಸ್ಮರಣೆ ಮಾಡುವ
ನಾವುಗಳು ಧನ್ಯರಾಗುವ...


ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು, ರಾಮಕೃಷ್ಣ ವಿದ್ಯಶಾಲಾ, ಮೈಸೂರು
ಮೊ: 9036389640

ವಾರಭವಿಷ್ಯ

31.08.2025 ರಿಂದ 6.09.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಸಿಂಹ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಜ–ಕನ್ಯಾ, ಬುಧ–ಸಿಂಹ, ಗುರು–ಮಿಥುನ, ಶುಕ್ರ–ಕಟಕ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720


ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಜೀವನ ಕೆಲವೊಮ್ಮೆ ಕಟುವೂ, ಮಧುರವೂ ಅನಿಸೀತು. ಮಕ್ಕಳೊಂದಿಗೆ ತಾಳ್ಮೆಯಿಂದ ನಡೆದುಕೊಳ್ಳಿ. ಹಿತಶತ್ರುಗಳ ಕಾಟವೂ ಇರುತ್ತದೆ. ದೂರ ಪ್ರಯಾಣಗಳು ಸಂಭವಿಸೀತು. ಸರಾಫ್, ಫೈನಾನ್ಸ್ ವ್ಯವಹಾರಗಳಿಂದ ಹೆಚ್ಚಿನ ಆದಾಯ. ವಾಹನ ರಿಪೇರಿ ಕೆಲಸ ಮಾಡುವವರಿಗೆ ನಿರೀಕ್ಷೆ ಮೀರಿ ಧನಲಾಭ. ವಾರಾಂತ್ಯಕ್ಕೆ ಆರೋಗ್ಯ ಮರುಕಳಿಸುವುದು. ಮನೆ ದೇವರ ದರ್ಶನದಿಂದ ಮನಃಶಾಂತಿ.

ಶ್ರೀ ವಿಘ್ನೇಶ್ವರ ಪೂಜೆ. ಶುಭ ಸಂಖ್ಯೆ–3

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ವಾರದ ಆದಿಗೆ ದೇಹ ಸೌಖ್ಯ, ಮೈಗೆ ಆರಾಮ. ನಿತ್ಯ ಕೆಲಸಗಳನ್ನು ಲವಲವಿಕೆಯಿಂದ ನಿಭಾಯಿಸುವಿರಿ. ದೈವಾನುಗ್ರಹವಿದೆ. ಕೃಷಿ ಮಾಡುವುದರಿಂದ ದುರ್ಭಿಕ್ಷವಿಲ್ಲ, ಜಪ ಮಾಡುವುದರಿಂದ ಪಾಪವಿಲ್ಲ. ಆದಾಯ ಹೆಚ್ಚಾಗಿದೆ ಎಂದು ಸ್ವೇಚ್ಛೆಯಾಗಿ ದುಂದು ವೆಚ್ಚ ಮಾಡದಿರಿ. ಮನೆಯಲ್ಲಿ ಮಂಗಳ ಕಾರ್ಯ ಜರುಗುವುದು. ಮಗನಿಗೆ ಉದ್ಯೋಗ ಪ್ರಾಪ್ತಿ. ಕೇತು ಶುಭನಿಲ್ಲ. ಎಚ್ಚರಿಕೆಯಿಂದ ಓಡಾಡಿ.

ಶ್ರೀ ಗೌರಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಪ್ರಯತ್ನ ಪೂರ್ವಕವಾಗಿ ಮಾಡುವ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಇದಕ್ಕೆ ನಿಮ್ಮ ದ್ವಂದ್ವ ನೀತಿಯೇ ಕಾರಣ. ಉದ್ಯೋಗ ಸ್ಥಾನದಲ್ಲಿ ಬದಲಾವಣೆ ಆಗಬಹುದು. ಹೊಸ ಮಿತ್ರರ ಪರಿಚಯದಿಂದ ಕೆಲವು ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ನಿಮ್ಮ ಮೌಲ್ಯಯುತ ದಾಖಲೆ ದಸ್ತಾವೇಜುಗಳನ್ನು ಜೋಪಾನವಾಗಿಟ್ಟುಕೊಳ್ಳಿ. ಸ್ತ್ರೀಯರು ವಾಯುವಿಹಾರಕ್ಕೆ ಆಭರಣ ತೆಗೆದಿಟ್ಟು ಹೋಗಲಿ.

ಶ್ರೀ ಸತ್ಯ ನಾರಾಯಣ ವ್ರತ ಕಥೆ ಓದಿ. ಶುಭ ಸಂಖ್ಯೆ–4

ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದಾರಂಭಕ್ಕೆ ಸುಖ ಸಾಧನಗಳು ಮನೆಗೆ ಬರುವುದು. ಆಭರಣ ಪರಿಮಳ ದ್ರವ್ಯಗಳು ಲಭಿಸುತ್ತವೆ. ಮೃಷ್ಟಾನ್ನ ಭೋಜನ, ಶಯನ ಸುಖ. ಅಧಿಕಾರಿ ವರ್ಗದವರಿಂದ ಗೌರವ ಪ್ರಾಪ್ತಿ. ಮುತ್ತು, ಹವಳ ವ್ಯಾಪಾರಿಗಳಿಗೆ ಹೇರಳ ಧನಲಾಭ. ವ್ಯಯಸ್ಥ ಗುರುವಿಂದ ನ್ಯಾಯವಾದ ಕಾರ್ಯದಲ್ಲಿ ಅಸಫಲತೆ, ಅನವಶ್ಯಕ ವಿಘ್ನಗಳು ಉಂಟಾಗುತ್ತವೆ. ಸತ್ಪತ್ನಿಯ ಸಹವಾಸದಿಂದ ವಂಚಿತರಾಗುತ್ತಾರೆ.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ವಾರದ ಆದಿಗೆ ನಂಬಿಕಸ್ಥ ಹಿರಿಯ ವ್ಯಕ್ತಿಯಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವುದು. ಕೆಲವರಿಗೆ ವಿದೇಶಿ ಉದ್ಯೋಗ ದೊರೆಯುವ ಸಾಧ್ಯತೆ ಇರುತ್ತದೆ. ಸಾಧು–ಸಜ್ಜನರ ಭೇಟಿಯಿಂದ ಮಾನಸಿಕ ಒತ್ತಡ ನಿವಾರಣೆ ಆಗುತ್ತದೆ. ರಾಜಕಾರಣಿಗಳಿಗೆ ಸ್ಥಾನ ಭ್ರಂಶ, ಅಪವಾದಗಳಿಗೆ ಗುರಿಯಾಗುವರು. ವಾರದ ಕಡೆಗೆ ಯೋಜಿತ ಕೆಲಸಗಳಿಗೆ ಧನ ಚಿಂತೆ ಕಾಡುತ್ತದೆ.

ಶ್ರೀ ಚಾಮುಂಡೇಶ್ವರಿ ಉಪಾಸನೆ. ಶುಭ ಸಂಖ್ಯೆ–8

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ವಾರದ ಪೂರ್ವಾರ್ಧದಲ್ಲಿ ಕಾರ್ಯ ಕುಶಲಿಗಳೆನಿಸಿ ಕಾರ್ಯಗಳು ಯಶಸ್ವಿಯಾಗುವುದು. ಬಾಳ ಸಂಗಾತಿಯ ಅನ್ವೇಷಣೆ ಮುಂದುವರೆಯಲಿದೆ. ರೈತಾಪಿ ಜನರಿಗೆ ಶ್ರಮಕ್ಕೆ ತಕ್ಕ ಫಲ ದೊರೆಯುವುದು ಹಾಗೂ ಋಣಮುಕ್ತರಾಗುವರು. ಪಶು ಸಂಪತ್ತು ಲಭಿಸುವುದು. ಗುತ್ತಿಗೆದಾರರಿಗೆ ನೌಕರರ ಸಹಕಾರ ದೊರಕುವುದು. ಮನೆಯಲ್ಲಿ ಹಿರಿಯರ ಆರೋಗ್ಯವನ್ನು ಕಡೆಗಣಿಸಬೇಡಿ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–9

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ಗುರುಕೃಪೆಯಿಂದ ಪ್ರಮುಖ ಕೆಲಸಗಳು ಸಂಪನ್ನಗೊಳ್ಳುವುದು. ಭವಿಷ್ಯದ ಮುಖ್ಯ ಕೆಲಸಗಳಿಗೂ ಕಾಲಮಿತಿ ಹಾಕಿಕೊಂಡು ಮುಂದುವರೆಯಿರಿ. ಸಾಂಸಾರಿಕವಾಗಿ ತೃಪ್ತಿಕರ ಜೀವನ ಸಾಗುವುದು. ಗ್ರಹಗಳ ಕೃಪೆಯಿಂದ ಸಾಗಿರುವಾಗ ಎಲ್ಲರನ್ನೂ ನಂಬಿ ಮೋಸ ಹೋಗಬೇಡಿ. ರೇಸು, ಜೂಜುಗಳ ಲಾಭ ತಂದು ಕೊಡುವುದಿಲ್ಲ. ಸ್ನಾಯು ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–1

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಸಪ್ತಾಹದ ಆದಿಗೆ ಮನೆಗೆ ಆಪ್ತೇಷ್ಟರ ಆಗಮನದಿಂದ ಮನಸ್ಸಂತೋಷ ಹಾಗೂ ಅವರ ಆದರಾತಿಥ್ಯಕ್ಕೆ ಹಣ ವ್ಯಯ. ಆರೋಗ್ಯ ಸುಧಾರಿಸಿ ಮುಖದ ಮೇಲೆ ಕಳೆ ಮರುಕಳಿಸುವುದು. ಗುಪ್ತ ವಿದ್ಯೆ ಕಲಿಯಲು ಆಸಕ್ತಿ ತೋರುವಿರಿ. ರಾಹು ಗೃಹ ಕಲಹಕ್ಕೆ ಕಾರಣನಾಗುವನು. ಹೊಂದಿಕೊಂಡು ಹೋದರೆ ಬದುಕು ಹೊನ್ನಾರು. ಅಪರಿಚಿತರಿಗೆ ನಿಮ್ಮ ಬ್ಯಾಂಕ್ ವಿವರ ನೀಡಬೇಡಿ.

ಶ್ರೀ ನೃಸಿಂಹ ಪೂಜೆ. ಶುಭ ಸಂಖ್ಯೆ–5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದಾರಂಭಕ್ಕೆ ಪ್ರೀತಿ ಪಾತ್ರ ಜನರ ಒಡನಾಟದಿಂದ ಮಾನಸಿಕ ಹರಳೆ. ಅರಳೆ ವ್ಯಾಪಾರ ಹಾಗೂ ಸಿದ್ಧ ಉಡುಪು ಉದ್ಯಮಿಗಳಿಗೆ ದೊಡ್ಡ ರಫ್ತು ಆರ್ಡರ್ ದೊರೆಯುವುದು. ಸಾಫ್ಟ್‌ವೇರ್ ವ್ಯಕ್ತಿಗಳಿಗೆ ಬೇಡಿಕೆ ಹೆಚ್ಚುವುದು. ವ್ಯಾಪಾರ ಸಂಬಂಧ ಅಧಿಕ ತಿರುಗಾಟಗಳಿಂದ ದೇಹಾಯಾಸ. ವಾರದ ಕಡೆಗೆ ಆಕಸ್ಮಿಕ ಧನಲಾಭವಾಗುವುದು. ಫುಡ್ ಪಾಯ್ಸನ್ ಆಹಾರದಿಂದ ಎಚ್ಚರವಿರಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–7

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ಚಂದ್ರಗ್ರಹದ ಪ್ರಭಾವದಿಂದ ವಾರದ ಪೂರ್ವಾರ್ಧದಲ್ಲಿ ನೂತನ ಉದ್ಯೋಗ ಪ್ರಾರಂಭಿಸಬಹುದಾಗಿದೆ. ಭೋಜನ ಶಾಲಾ, ಕೇಟರಿಂಗ್ ವ್ಯಾಪಾರಗಳು ಧನಲಾಭವನ್ನು ತರುವುದು. ವ್ಯಾಪಾರ–ವಹಿವಾಟುಗಳು ಚುರುಕಾಗಿ ನಡೆಯುವುದು. ಜೊತೆಗೆ ಹಳೆಯ ಬಾಕಿಗಳು ವಸೂಲಾಗುವುದು. ಎಣ್ಣೆಕಾಳು ವ್ಯಾಪಾರಿಗಳಿಗೆ ಬಂಪರ್ ವ್ಯಾಪಾರ. ವಾರಾಂತ್ಯಕ್ಕೆ ಮಿತ್ರ ಮೂಲಕ ಸಂದೇಶ ಪ್ರಾಪ್ತಿ.

ಶ್ರೀ ಶನಿದೇವ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ವಾರದಾರಂಭಕ್ಕೆ ಯುವಕರಿಗೆ ಉನ್ನತ ಅಧ್ಯಯನದಿಂದ ಕೀರ್ತಿ, ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಮಹಿಳಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ಖರ್ಚು ಮಾಡುವರು. ಜೊತೆಗೆ ಅನಿರೀಕ್ಷಿತ ಖರ್ಚುಗಳೂ ಉಂಟಾಗುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. ಸಾರ್ವಜನಿಕರಲ್ಲಿ ತಾಳ್ಮೆಯಿಂದ ವರ್ತಿಸಿ. ಆತುರದ ವಾಹನ ಚಾಲನೆ ತೊಂದರೆಗೆ ಆಹ್ವಾನ.

ಶ್ರೀ ಆಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–6

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಹೊಸ ವ್ಯಾಪಾರ ಪ್ರಾರಂಭದ ಪ್ರಯತ್ನಗಳು ಫಲಿಸುವುದು. ಕಾನೂನು ತಜ್ಞರ ಸಲಹೆಯಂತೆ ಆಸ್ತಿ ವಿಲೇವಾರಿ. ವಧು–ವರಾನ್ವೇಷಣೆಗಳು ಮುಂದುವರೆಯಲಿ. ವಾರಮಧ್ಯೆ ವಾಹನ ರಿಪೇರಿ ಖರ್ಚುಗಳು ಎದುರಾಗುವುದು. 'ಮಾತೆ ಮುತ್ತು' ತೂಕವಾಗಿ ಮಾತನಾಡಿ, ವಿವಾದಗಳನ್ನು ಹುಟ್ಟುಹಾಕಿಕೊಳ್ಳಬೇಡಿ. ಪತ್ನಿ ಆರೋಗ್ಯದಲ್ಲಿ ವ್ಯತ್ಯಯವಾದೀತು. ದೂರ ಪ್ರಯಾಣಗಳನ್ನು ತಪ್ಪಿಸಿ.

ಶ್ರೀ ದತ್ತಸ್ತವ ಪಠಿಸಿ. ಶುಭ ಸಂಖ್ಯೆ–7

ದಸರಾ ಉದ್ಘಾಟನೆಗೆ ಬಾನು ಮುಷ್ತಾಕರಿಗೆ ಆಹ್ವಾನ ಹಿನ್ನೆಲೆ

ಮುಖ್ಯಮಂತ್ರಿಗಳ ಬಗ್ಗೆ ಅವಹೇಳನಕಾರಿ ಹೇಳಿಕೆ; ಪುರೋಹಿತನ ಬಂಧನಕ್ಕೆ ಆಗ್ರಹಿಸಿ ಕಾಂಗ್ರೆಸ್ ದೂರು



ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ದೂರು ಸಲ್ಲಿಸುತ್ತಿರುವುದು.

ಮೈಸೂರು, ಆ.30(ವಿವಿಹೆಚ್)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಖಾಸಗಿ ವಾಹಿನಿಯಲ್ಲಿ ಅವಾಚ್ಯ ಶಬ್ಧಗಳಿಂದ ನಿಂದಿಸಿ, ಅವಮಾನಿಸಿ ವೈಯಕ್ತಿಕ ತೇಜೋವಧೆ ಮಾಡಿ ರಾಜ್ಯದಲ್ಲಿ ಕೋಮು ಕಲಹಕ್ಕೆ ಕಾರಣವಾಗಿರುವ ಪುರೋಹಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಅಗ್ರಹಿಸಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಜಿಲ್ಲಾಧ್ಯಕ್ಷ ಎ.ಆರ್.ಕಾಂತರಾಜು, ನಗರ ಪೊಲೀಸ್ ಅಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ದೂರು ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು ಈ ಬಾರಿಯ ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತೆ ಭಾನು ಮುಷ್ತಾಕ್ ಅವರಿಗೆ ಆಹ್ವಾನ ನೀಡಿರುವ ವಿಚಾರವಾಗಿ ರಾಘವೇಂದ್ರಸ್ವಾಮಿ ಮಠದ ಪುರೋಹಿತರೊಬ್ಬರು ಖಾಸಗಿ ನ್ಯೂಸ್ ಚಾನಲ್ ಸಂದರ್ಶನದ ವೇಳೆ ದುರುದ್ದೇಶ ಪೂರ್ವಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರಿತು ಅವಹೇಳನ ಮಾಡಿದ್ದಾರೆ. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಯುಕ್ತರಿಗೆ ಮನವಿ ಸಲ್ಲಿಸಿದ್ದೇವೆ ಎಂದರು.

ಧಾರ್ಮಿಕ ಸ್ಥಳದಲ್ಲಿ ತಮ್ಮ ಜವಾಬ್ದಾರಿ ಮರೆತು, ಸಮಾಜದಲ್ಲಿ ಅಶಾಂತಿ, ಮತೀಯ ಕಲಹ ಉಂಟು ಮಾಡುವ ದುರುದ್ದೇಶದಿಂದ ಮಾತನಾಡಿರುವುದು ತಲೆತಗ್ಗಿಸುವ ವಿಚಾರ. ಇದು ಮುಖ್ಯ ಮಂತ್ರಿ ಸ್ಥಾನದ ಘನತೆಗೆ ಧಕ್ಕೆಯನ್ನು ಉಂಟು ಮಾಡುವ ಜೊತೆಗೆ, ನಾಡಿನಲ್ಲಿ ಜಾತಿ ಸಂಘರ್ಷ, ಧರ್ಮ–ಧರ್ಮದ ನಡುವೆ ಕಲಹವಾಗಲು ಕಾರಣವಾಗಬಹುದು . ಹಾಗಾಗಿ ಈ ಪುರೋಹಿತರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಾರ್ಯಾಧ್ಯಕ್ಷ ನಂದೀಶ್, ಕೆಪಿಸಿಸಿ ಕಾನೂನು ಘಟಕದ ಉಪಾಧ್ಯಕ್ಷ ಸುರೇಶ್ ಪಾಳ್ಯ, ರಾಜ್ಯ ಕಾರ್ಯದರ್ಶಿ ಟಿ.ಮಂಜುನಾಥ್, ಕೆಪಿಸಿಸಿ ಕಾರ್ಯದರ್ಶಿ ಅಕ್ಬರ್ ಅಲೀವ್, ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ನಗರ ಪ್ರಧಾನ ಕಾರ್ಯದರ್ಶಿ ಎಂ.ಸಂತೋಷ್, ಕಿಸಾನ್ ಸೆಲ್ ಅಧ್ಯಕ್ಷ ಜಿ.ಮಹದೇವ್, ಮಂಜುಳಾ, ಸುಶೀಲಾ, ತನುಜಾ ಮಹೇಶ್, ಪಿ.ಸೋಮರಾಜ್, ವಕೀಲ ಶ್ರೀನಿವಾಸ್, ಸಯ್ಯದ್ ಖಾಸಿಮ್, ಲಕ್ಕೇಗೌಡ, ಶಿವಣ್ಣ, ವಸಂತ್‌ಕುಮಾರ್ ಮತ್ತಿತರರಿದ್ದರು.

ಕೇಂದ್ರದ ಕಾರ್ಮಿಕ ವಿರೋಧಿ ನೀತಿ ವಿರುದ್ಧ

ಸೆ.4, ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ

ಮೈಸೂರು, ಆ.30(ಜಿಎ)–ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಮತ್ತು ಏಕಸ್ವಾಮ್ಯ ಬಂಡವಾಳಶಾಹಿ ಪರ ನೀತಿಗಳ ವಿರುದ್ಧ ಎಐಯುಟಿಯುಸಿ ವತಿಯಿಂದ ಸೆ.4ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ಅಖಿಲ ಭಾರತ ಕಾರ್ಮಿಕರ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ರಾಜ್ಯ ಉಪಾಧ್ಯಕ್ಷ ಕೆ.ವಿ.ಭಟ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆಯಲ್ಲಿ ಸುಮಾರು ಸಾವಿರ ಮಂದಿ ಕಾರ್ಮಿಕರು, ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ರಾಜ್ಯ ಹಾಗೂ ಮೈಸೂರು ನಗರದಿಂದಲೂ ಒಟ್ಟು 244 ಮಂದಿ ಭಾಗವಹಿಸಲಿದ್ದಾರೆ ಎಂದರು.

ಕೇಂದ್ರ ಸರ್ಕಾರ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವ 4 ಕಾರ್ಮಿಕ ಕೋಡ್‌ಗಳನ್ನು ತಕ್ಷಣ ರದ್ದುಗೊಳಿಸಬೇಕು. ವಿದ್ಯುತ್ ತಿದ್ದುಪಡಿ ಮಸೂದೆ 2023 ಮತ್ತು ಸ್ಮಾರ್ಟ್ ಮೀಟರ್ ಅಳವಡಿಕೆ ರದ್ದುಗೊಳಿಸಬೇಕು. ಕೆಲಸದ ಅವಧಿ ದಿನಕ್ಕೆ 8 ಗಂಟೆ, ವಾರಕ್ಕೆ 48 ಗಂಟೆ ಮೀರಬಾರದು, ಕಾಯಂ ನೌಕರರ ಸಂಖ್ಯೆ ಕಡಿತ ನಿಲ್ಲಿಸಬೇಕು, ರಾಷ್ಟ್ರೀಯ ಪಿಂಚಣಿ ಯೋಜನೆ ಮತ್ತು ಏಕೀಕೃತ ಪಿಂಚಣಿ ಯೋಜನೆ ರದ್ದುಗೊಳಿಸಿ, ಹಳೆಯ ಪಿಂಚಣಿ ಯೋಜನೆಯನ್ನು ಬೇಷರತ್ತಾಗಿ ಜಾರಿಗೊಳಿಸಬೇಕು, ಪಿಎಫ್ ಮತ್ತು ಇಎಸ್‌ಐ ಸೌಲಭ್ಯಗಳಿಗೆ ಅರ್ಹ ವೇತನ ಮಿತಿ ತೆಗೆದುಹಾಕಿ, ಎಲ್ಲ ಕಾರ್ಮಿಕರಿಗೂ ಈ ಸಾಮಾಜಿಕ ಭದ್ರತೆ ಸೌಲಭ್ಯ ಖಾತ್ರಿ ಪಡಿಸಬೇಕೆಂದು ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಸ್ಕೀಮ್ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ, ಅವರಿಗೆ ಎಲ್ಲಾ ಶಾಸನಬದ್ಧ ಸೌಲಭ್ಯ ಒದಗಿಸಬೇಕು, ಎಲ್ಲಾ ವಲಸೆ ಕಾರ್ಮಿಕರಿಗೆ ಸುರಕ್ಷತೆ, ಭದ್ರತೆ ಮತ್ತು ಶಾಶ್ವತ ಉದ್ಯೋಗ ಒದಗಿಸಬೇಕು, ಅಸಂಘಟಿತ ವಲಯದ ಎಲ್ಲ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಿ ಸಾಮಾಜಿಕ ಭದ್ರತೆ ಒದಗಿಸಬೇಕು, ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗ ಅಥವಾ ನಿರುದ್ಯೋಗ ಭತ್ಯೆ ಒದಗಿಸಿ, ಕೆಲಸದ ಹಕ್ಕನ್ನು ಸಂವಿಧಾನಿಕ ಹಕ್ಕಾಗಿ ಘೋಷಿಸಬೇಕೆಂದು ಸಹ ಒತ್ತಾಯಿಸಲಾಗುವುದೆಂದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷೆ ಎಂ.ಉಮಾದೇವಿ, ಜಿಲ್ಲಾಧ್ಯಕ್ಷೆ ವಿ.ಯಶೋಧರ, ಜಿಲ್ಲಾ ಸಮಿತಿ ಸದಸ್ಯರಾದ ಪಿ.ಎಸ್.ಸಂಧ್ಯಾ ಹಾಗೂ ಮುದ್ದುಕೃಷ್ಣ ಉಪಸ್ಥಿತರಿದ್ದರು.

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಇಂದು ಉಚಿತ ವೈದ್ಯಕೀಯ ತಪಾಸಣೆ

ಮೈಸೂರು, ಆ.30(ಜಿಎ)–ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ವಿಶ್ರಾಂತ ಉದ್ಯೋಗಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ಆ.31ರಂದು ರಾಮಕೃಷ್ಣ ನಗರದ ಸುಯೋಗ ಆಸ್ಪತ್ರೆ ಪಕ್ಕದ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಬಿ.ಆರ್.ಉಮಾಕಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 2ರವರೆಗೆ ಶಿಬಿರ ನಡೆಯಲಿದೆ. ಈ ವೇಳೆ ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯಿಂದ ನೇತ್ರ ತಪಾಸಣೆ, ಮಧುಮೇಹ ರೆಟೀನ್ ತಪಾಸಣೆ ಕೂಡ ನಡೆಯಲಿದೆ. ಭವಾನಿ ಆಸ್ಪತ್ರೆಯಿಂದ ಬಿಪಿ, ಇಸಿಜಿ ಮೊದಲಾದ ತಪಾಸಣೆ ನಡೆಯಲಿದೆ. ಆಯುರ್ವೇದ ವೈದ್ಯರೂ ಸಹ ಇದ್ದು, ಔಷಧಿ ನೀಡಲಿದ್ದಾರೆ. ಹೀಗಾಗಿ ಸದಸ್ಯರು ಹಾಗೂ ನಾಗರೀಕರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಆದಿತ್ಯ ಕಶ್ಯಪ್, ಅನ್ನಪೂರ್ಣ ಆಸ್ಪತ್ರೆ ಅಧಿಕಾರಿ ಅಶ್ವತ್, ಎಂ.ತಂಗವೇಲು, ಎಸ್.ವಿ.ಗೋವಿಂದ ರಾಜು, ಕಾರ್ತಿಕ್ ಉಪಸ್ಥಿತರಿದ್ದರು.

ಸೆ.1ರಿಂದ ಉಚಿತ ಯೋಗ ಶಿಬಿರ

ಮೈಸೂರು,ಆ.30–ಮೈಸೂರಿನ ರಾಮಾನುಜ ರಸ್ತೆಯ ಅಕ್ಕಮ್ಮಣ್ಣಿ ಉದ್ಯಾನವನದಲ್ಲಿರುವ ಯೋಗ ಸಭಾಂಗಣದಲ್ಲಿ ಮೈಸೂರು ಯೋಗೀಶ್ ಟ್ರಸ್ಟ್ ವತಿಯಿಂದ ಸೆ.1ರಿಂದ 5ರವರೆಗೆ ಸಂಜೆ 5.45ರಿಂದ 6.45ರವರೆಗೆ ನುರಿತ ಯೋಗ ಶಿಕ್ಷಕರಿಂದ 5 ದಿನಗಳ ಉಚಿತ ಯೋಗ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಪ್ರಾಣಾಯಾಮ, ಧ್ಯಾನ, ಮುದ್ರೆಗಳು, ಆಹಾರಕ್ರಮ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ ನೀಡಲಾಗುವುದು. ಮಾಹಿತಿಗೆ ಯೋಗ ಪ್ರಕಾಶ್, ಮೊ. 9449886322 ಸಂಪರ್ಕಿಸಿ.

ನಿಧನ

ಎಂ.ಆರ್.ಆನಂದರಾವ್



ಮೈಸೂರು, ಆ. 30– ಮೈಸೂರಿನ ಚೆಲುವಾಂಬ ಅಗ್ರಹಾರದ ನಿವಾಸಿ ಎಂ.ಆರ್. ಆನಂದರಾವ್ (84) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಜಯಂತಿ, ಪುತ್ರರಾದ ಎಂ.ಎ. ವಿನಯ್ ಮತ್ತು ಎಂ.ಎ.ಕಾರ್ತಿಕ್, ಸೊಸೆ ರಶ್ಮಿ ರಾವ್, ಮೊಮ್ಮಗಳು ಸಿಂಚನಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಮೋದ್‌ರಾವ್



ಮೈಸೂರಿನ ನೆಕ್ಸ್‌ಶೋರ್ ಟೆಕ್ನಾಲಜೀಸ್‌ನ ಸಿಇಓ ಪ್ರಮೋದ್ ರಾವ್ (56) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಮಾಯಾರಾವ್, ಪುತ್ರ ವರುಣ್‌ರಾವ್, ಪುತ್ರಿ ವರ್ಷಾರಾವ್, ತಾಯಿ ಸೀತಾಬಾಯಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಬನಶಂಕರಿ ರುದ್ರ ಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಯುಜಿಸಿ ನಿಯಮ ಬಿಟ್ಟು ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳುವಂತೆ ಆಗ್ರಹಿಸಿ ಪ್ರತಿಭಟನೆ



ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿನ ಯುಜಿಸಿ ನಿಯಮವನ್ನು ಕೈಬಿಟ್ಟು, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕ ರಾಜ್ಯ ಸಮನ್ವಯ ಸಮಿತಿ ವತಿಯಿಂದ ವಿವಿಧ ಜಿಲ್ಲೆಯ ಅತಿಥಿ ಉಪನ್ಯಾಸಕರು ಸೇರಿ ರಾಜ್ಯಮಟ್ಟದ ಮೈಸೂರು ಚಲೋ ನಡೆಸಿದರು.

ಮೈಸೂರು,ಆ.30(ಜಿಎ)–ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಯುಜಿಸಿ ನಿಯಮವನ್ನು ಕೈಬಿಟ್ಟು, ಹತ್ತಾರು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಆದ್ಯತೆ ನೀಡಿ ನೇಮಕ ಮಾಡಿಕೊಳ್ಳಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕ ರಾಜ್ಯ ಸಮನ್ವಯ ಸಮಿತಿ ವತಿಯಿಂದ ವಿವಿಧ ಜಿಲ್ಲೆಯ ಅತಿಥಿ ಉಪನ್ಯಾಸಕರು ಸೇರಿ ರಾಜ್ಯ ಮಟ್ಟದ ಮೈಸೂರು ಚಲೋ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಆಯೋಜಿಸಿದ್ದ ಮೆರವಣಿಗೆಯಲ್ಲಿ ರಾಜ್ಯದ ವಿವಿಧೆಡೆಗಳಿಂದ ನೂರಾರು ಅತಿಥಿ ಉಪನ್ಯಾಸಕರು ಪಾಲ್ಗೊಂಡು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾಗಿ ಜಿಲ್ಲಾ ಕಮಿಷನರ್ ಕಚೇರಿ, ಡಯಟ್, ಗೋಪಾಲ ಗೌಡ ಆಸ್ಪತ್ರೆ ಮಾರ್ಗವಾಗಿ ಸಾಗಿ ಹಾಲಿನ ಡೈರಿ, ಜಿಲ್ಲಾಧಿಕಾರಿಗಳ ಕಚೇರಿ ತಲುಪಿ, ಡಿಸಿಗೆ ಮನವಿ ಸಲ್ಲಿಸಿದರು.


ಈ ವೇಳೆ ಸಮಿತಿಯ ರಾಜ್ಯಾಧ್ಯಕ್ಷ ಡಾ.ಸೋಮಶೇಖರ್ ಎಚ್.ಶಿವೊಗ್ಗಿ ಮಾತನಾಡಿ, ರಾಜ್ಯದಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 10, 976ಕ್ಕೂ ಹೆಚ್ಚಿನ ಅತಿಥಿ ಉಪನ್ಯಾಸಕರು ಹತ್ತಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬರುತಿದ್ದೇವೆ. ಇಲ್ಲಿಯವರೆಗೂ ಯಾವುದೇ ಸೇವಾ ವಿನಾಯಿತಿ, ಭದ್ರತೆ, ಗೌರವಧನ ನೀಡುವ ಹಾಗೂ ವಿಶಿಷ್ಟವಾದ ಸವಲತ್ತು ನೀಡುವ ಕೆಲಸವಾಗಿಲ್ಲ. ಅಲ್ಲದೇ ಈಗ ಅತಿಥಿ ಉಪನ್ಯಾಸಕ ನೇಮಕದಲ್ಲಿ ಯುಜಿಸಿ ಹಾಗೂ ಯುಜಿಸಿ –ಅಲ್ಲದ ಎಂಬ ಜಿಕ್ಕಟ್ಟನ್ನು ಜಾರಿಗೊಳಿಸಿ, ಹಿರಿಯ ಅತಿಥಿ ಉಪನ್ಯಾಸಕರ ಆಯ್ಕೆಯನ್ನು ಕೈಬಿಡಲಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದರು.

ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರ ಸೇವೆಯ ಅವಧಿ ಆಧರಿಸಿ, ಹಿರಿಯರಿಗೆ ಅವಕಾಶ ಕಲ್ಪಿಸಿಕೊಡಬೇಕು. ಅಲ್ಲದೆ, ಇದೀಗ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ಆರಂಭವಾಗಿದ್ದು, ಅವರ ಹಿತದೃಷ್ಟಿಯಿಂದ ಹಾಗೂ ಅತಿಥಿ ಉಪ ನ್ಯಾಸಕರ ಶೈಕ್ಷಣಿಕ ಪ್ರಗತಿಯ ಹಿತವನ್ನೂ ಗಮನದಲ್ಲಿಟ್ಟುಕೊಂಡು ಸಮಸ್ಯೆಯನ್ನು ಸಚಿವ ಸಂಪುಟ ಸಮಿತಿ ಮುಂದೆ ತಂದು ಇತ್ಯರ್ಥಗೊಳಿಸಬೇಕು ಎಂದು ಆಗ್ರಹಿಸಿದರು.

ಅತಿಥಿ ಉಪನ್ಯಾಸಕರಿಗೆ ಸರ್ಕಾರದಿಂದ ಯಾವುದೇ ಭದ್ರತೆಯಿಲ್ಲದ ಕಾರಣ ಸೇವಾನುಭವದ ಆಧಾರದ ಮೇಲೆ ಗೌರವಧನ ಹೆಚ್ಚಳ, ವಾರ್ಷಿಕ ಆರೋಗ್ಯ ವಿಮೆ, 60 ವರ್ಷ ಮೀರಿ ನಿವೃತ್ತಿ ಹೊಂದಿದ ಅತಿಥಿ ಉಪನ್ಯಾಸಕರಿಗೆ ನಿವೃತ್ತಿ ಭತ್ಯೆಯನ್ನು 5 ಲಕ್ಷ ರೂ.ಗಳಿಂದ 25 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕು. ಮಾಸಿಕ ವೇತನ ಸಹಿತ ಒಂದು ದಿನದ ರಜೆ, ಮಹಿಳೆಯರಿಗೆ ವೇತನ ಸಹಿತ 6 ತಿಂಗಳ ಪ್ರಸೂತಿ ರಜೆ, ಅತಿಥಿ ಉಪನ್ಯಾಸಕರಿಗೆ ನಿವೃತ್ತಿ ನಂತರ ಯಾವುದೇ ರೀತಿಯ ಭತ್ಯೆ ಇಲ್ಲದಿರುವುದರಿಂದ ಸೇವೆಯನ್ನು ಯುಜಿಸಿ ನಿಯಮಾವಳಿಯಲ್ಲಿ 70 ವರ್ಷಗಳಿಗೆ ಹೆಚ್ಚಿಸುವುದು ಎಂಬಿತ್ಯಾದಿ ಬೇಡಿಕೆಗಳನ್ನು ಸರ್ಕಾರ ಈಡೇರಿಸಲೇಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಕೆ.ಆರ್.ನಗರ ದಿವಾಕರ, ಖಜಾಂಚಿ ಕೆ.ರಾಜೇಶ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಬಿ.ಎಸ್.ನಾಗರಾಜು ಮದ್ದೂರು, ಮಾಧ್ಯಮ ವಕ್ತಾರ ಡಾ.ಜೆ.ಸಿ. ರವೀಂದ್ರ, ಜಂಟಿ ಕಾರ್ಯದರ್ಶಿ ಸುರೇಶ್ ಡಬ್ಬಿ ಬಿಜಾಪುರ, ಮಹಿಳಾ ಸಂಯೋಜಕರಾದ ಎನ್.ಕೆ.ದೀಪಾ, ಎಂ.ಆರ್.ರೂಪಾ, ಡಾ.ಬಿ.ಶಾಮಲಾ, ಹರ್ಷಿತ ಮೈಸೂರು, ಸಂಯೋಜಕರು ವಿಕಲಚೇತನ ವಿ.ಧನಂಜಯಪ್ಪ, ಜಂಟಿ ಕಾರ್ಯದರ್ಶಿಗಳಾದ ಮಹೇಶ್ ಮೈಸೂರು, ವಿನಯ್ ಮದ್ದೂರು, ಯತೀಶ್ ಕಬ್ಬಾಳ್ ಮತ್ತಿತರರು ಪಾಲ್ಗೊಂಡಿದ್ದರು.

ಗಣೇಶೋತ್ಸವದಲ್ಲಿ ಶಾಸಕ ಜಿ.ಟಿ.ದೇವೇಗೌಡರಿಗೆ ಸನ್ಮಾನ...



ಮೈಸೂರಿನ ಬೋಗಾದಿಯ ಎಸ್‌ಬಿಎಂ ಬಡಾವಣೆಯಲ್ಲಿ 6ನೇ ವರ್ಷದ ಗಣೇಶೋತ್ಸವದಲ್ಲಿ ಪಾಲ್ಗೊಂಡಿದ್ದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮುಖಂಡರಾದ ಹೊನ್ನೇಗೌಡ, ಚಂದ್ರು, ಆನಂದ್, ಭಾರತಿ ಹೊನ್ನೇಗೌಡ, ಉಷಾ ಬಲ್ಲಾಳ್, ಕವಿತಾ ನಾಗರಾಜ್, ಚಿತ್ರ ಕುಮಾರಸ್ವಾಮಿ, ಪವಿತ್ರ, ಮೀರಾ ರಮೇಶ್, ಶ್ರುತಿ ಸುಮಂತ್ ಇನ್ನಿತರರಿದ್ದರು.

ರಮೇಶ್ ರಾಯಪ್ಪರಿಗೆ ಅಭಿನಂದನೆ...



ಮೈಸೂರು, ಚಾಮರಾಜನಗರ ಜಿಲ್ಲಾ ಸಗಟು ಸಹಕಾರ ಸಂಘ ನಿಯಮಿತ (ಜನತಾ ಬಜಾರ್) ಅಧ್ಯಕ್ಷರಾಗಿ ಆಯ್ಕೆಗೊಂಡ ದೇವರಾಜ ಬ್ಲಾಕ್ ಅಧ್ಯಕ್ಷರೂ ಆದ ಯು.ಎಸ್.ರಮೇಶ್ ರಾಯಪ್ಪ ಅವರನ್ನು ಮೈಸೂರಿನ ಜಲದರ್ಶಿನಿ ಮುಂಭಾಗ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಹಾಗೂ ಎಲ್ಲಾ ವಾರ್ಡ್ ಅಧ್ಯಕ್ಷರು, ಮುಖಂಡರು ಉಪಸ್ಥಿತರಿದ್ದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಬೇಡ

ಅವರ ಆಯ್ಕೆ ಕೈ ಬಿಡದಿದ್ದರೆ ವಿಶ್ವ ಹಿಂದೂ ಪರಿಷದ್‌ನಿಂದ ಪ್ರತಿಭಟನೆ

ಮೈಸೂರು,ಆ.30(ಜಿಎ)–ಬಾನು ಮುಷ್ತಾಕ್ ಅವರಿಗೆ ಬೂಕರ್ ಪ್ರಶಸ್ತಿ ಬರಲು ಅವರ ಕೃತಿಯನ್ನು ಅನುವಾದ ಮಾಡಿದ ದೀಪಾ ಬಸ್ತಿ ಅವರೂ ಕಾರಣ. ಹೀಗಾಗಿ ದಸರಾ ಉದ್ಘಾಟನೆಗೆ ಅವರನ್ನು ಸಹ ಆಹ್ವಾನಿಸಬೇಕೆಂದು ವಿಶ್ವ ಹಿಂದೂ ಪರಿಷದ್ ನಗರ ಜಿಲ್ಲಾ ಘಟಕದ ಅಧ್ಯಕ್ಷ ಮಹೇಶ್ ಕಾಮತ್ ಸರ್ಕಾರವನ್ನು ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲನೆಯದಾಗಿ ಬಾನು ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದೇ ಸರಿಯಲ್ಲ. ಅವರು ಕನ್ನಡ ವಿರೋಧಿ ಹೇಳಿಕೆ ನೀಡಿದ್ದಾರೆ. ಹಿಂದೂ ಧರ್ಮದ ಆಚರಣೆ ವಿರೋಧಿಯಾದ ಇವರು ದಸರಾವನ್ನು ಹೇಗೆ ಉದ್ಘಾಟಿಸುತ್ತಾರೆ ಎಂದು ಪ್ರಶ್ನಿಸಿ, ಇವರ ಆಯ್ಕೆಯನ್ನು ಕೈಬಿಡಬೇಕು. ಇಲ್ಲದಿದ್ದರ ಪರಿಷದ್ ಹೋರಾಟ ನಡೆಸಲಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಮುಂಡಿಬೆಟ್ಟ ಹಿಂದೂಗಳದ್ದಲ್ಲ. ಎಂದಿರುವುದು ಸರಿಯಲ್ಲ. ಅವರ ಓಲೈಕೆ ರಾಜಕಾರಣ ಜನತೆಗೆ ಘಾಸಿಯುಂಟು ಮಾಡುತ್ತಿದೆ. ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿ ಇದ್ದಾಳೆ ಎಂದೇ ಎಲ್ಲರೂ ನಂಬಿದ್ದೇವೆ. ಹೀಗಿರುವಾಗ ಓರ್ವ ಹಿಂದೂ ಆಗಿ ಡಿ.ಕೆ.ಶಿವಕುಮಾರ್ ಈ ರೀತಿ ಹೇಳುವುದು ಸರಿಯಲ್ಲ. ಅವರು ಕೂಡಲೇ ಬಹಿರಂಗ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು.

ಧರ್ಮಸ್ಥಳದ ವಿಚಾರದಲ್ಲಿ ಸರ್ಕಾರ ಕೈಗೊಂಡ ಕೆಲ ನಿರ್ಧಾರ ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ. ಸಮಾಜ ಘಾತುಕ ಶಕ್ತಿಗಳು, ಎಡ ಪಂಥೀಯರು ಹಾಗೂ ಕೆಲ ಸ್ವಹಿತಾಸಕ್ತ ರಾಜಕಾರಣಿಗಳ ಓಲೈಕೆಗಾಗಿ ಬುರುಡೆ ಮನುಷ್ಯನನ್ನು ಸೃಷ್ಟಿಸಲಾಗಿದೆ. ಇಲ್ಲಿಯ ತನಕ ಗಿರೀಶ್ ಮಟ್ಟಣ್ಣನವರ್, ಸಮೀರ್ ಮೊದಲಾದವರನ್ನು ಏಕೆ ಬಂಧಿಸಿಲ್ಲ ಎಂದು ಪ್ರಶ್ನಿಸಿದ ಅವರು, ಇವರನ್ನು ಎನ್‌ಐಎ, ಇಡಿ ತನಿಖೆಗೊಳಪಡಿಸಬೇಕು. ಈ ಮೂಲಕ ಧರ್ಮಸ್ಥಳಕ್ಕೆ ಅಂಟಿರುವ ಕಳಂಕ ತೊಡೆದು ಹಾಕಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಮಧುಶಂಕರ್, ಅರುಣಾಚಲಂ, ಅಂಬಿಕಾ, ವಿಜೇಂದ್ರ, ಜಯಶ್ರೀ ಇದ್ದರು.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಖಂಡಿಸಿ ಸೆ.2ಕ್ಕೆ ಭಕ್ತರ ಧರ್ಮಸ್ಥಳ ಯಾತ್ರೆ

ಮೈಸೂರು, ಆ.30(ಜಿಎ)–ಶ್ರೀ ಕ್ಷೇತ್ರ ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಖಂಡಿಸಿ ಹಾಗೂ ಅಲ್ಲಿನ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸಿ ಸೆ.2ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಿಂದ ಸುಮಾರು 500ಕ್ಕೂ ಹೆಚ್ಚು ಭಕ್ತರು ಧರ್ಮಸ್ಥಳಕ್ಕೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಧರ್ಮಸ್ಥಳ ಭಕ್ತರ ಒಕ್ಕೂಟದ ಸಂಚಾಲಕ ನಾರಾಯಣ ವಿ.ಹೆಗಡೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 5 ಗಂಟೆಗೆ ಸುಮಾರು 10 ಬಸ್‌ಗಳಲ್ಲಿ ಇವರು ಪ್ರಯಾಣ ಬೆಳೆಸಲಿದ್ದಾರೆ. ಮಧ್ಯಾಹ್ನ 12ಕ್ಕೆ ಧರ್ಮಸ್ಥಳ ತಲುಪಿ, ಪಾದಯಾತ್ರೆ ಕೈಗೊಂಡು, ಪ್ರತಿಭಟನೆ ಮಾಡಿ ನಂತರ ಧರ್ಮಾಧಿಕಾರಿಗಳನ್ನು ಭೇಟಿ ಮಾಡಿ, 'ಹೆಗ್ಗಡೆಯವರೇ ನಿಮ್ಮೊಂದಿಗೆ ನಾವಿದ್ದೇವೆ' ಎಂದು ಅವರಿಗೆ ನೈತಿಕ ಸ್ಥೈರ್ಯ ತುಂಬಿ ಸಂಜೆ 4 ಗಂಟೆಗೆ ಅಲ್ಲಿಂದ ವಾಪಸ್ ಮೈಸೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಧರ್ಮಸ್ಥಳ ನಾಡಿನ ಅತ್ಯಂತ ಶ್ರದ್ಧಾ ಭಕ್ತಿಯ ಕೇಂದ್ರವಾಗಿದೆ. ಆದರೆ ಇದರ ಮೇಲೆ ಕೆಲ ದುಷ್ಟ ವ್ಯಕ್ತಿಗಳು ಕಣ್ಣು ಹಾಕಿ, ವೀರೇಂದ್ರ ಹೆಗ್ಗಡೆ ಅವರ ಹೆಸರಿಗೆ ಕಳಂಕ ತರುವ ಯತ್ನ ಮಾಡಿ, ಧರ್ಮಸ್ಥಳ ಮುಜರಾಯಿ ಇಲಾಖೆಗೆ ಒಳಪಡುವಂತೆ ನೋಡಿಕೊಳ್ಳಲು ಸಂಚು ರೂಪಿಸಿದ್ದಾರೆಂದು ಆರೋಪಿಸಿದರು.

ಮಹೇಶ್ ತಿಮರೋಡಿ, ಗಿರೀಶ್ ಮಟ್ಟಣ್ಣನವರ್ ಹಾಗೂ ಸುಜಾತ ಭಟ್ ಅವರೊಡನೆ ಕೆಲವರು ಕೈಜೋಡಿಸಿದ್ದು, ಅವರೆಲ್ಲರ ಉದ್ದೇಶ ಕ್ಷೇತ್ರಕ್ಕೆ ಕಳಂಕ ತರುವುದೇ ಆಗಿದೆ. ಹೀಗಾಗಿ ವೀರೇಂದ್ರ ಹೆಗ್ಗಡೆ ಅವರಿಗೆ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಸಂದೇಶ ತಲುಪಿಸಲು ಈ ಯಾತ್ರೆ ಕೈಗೊಳ್ಳಲಾಗುತ್ತಿದೆ. ಭಾಗವಹಿಸುತ್ತಿರುವವರೆಲ್ಲ ಭಕ್ತರೇ ಆಗಿದ್ದಾರೆ. ಇವರೆಲ್ಲರಿಗೂ ಉಚಿತ ಪ್ರಯಾಣ, ಊಟ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್ ಬೋರೆ, ಹೇಮಂತ್, ಮಹಾವೀರ್ ಜೈನ್, ಹೆಚ್.ವಿ.ಚಂದ್ರ ಉಪಸ್ಥಿತರಿದ್ದರು.

ದೇವರ ಹಾಡುಗಳ ಗಾಯನ



ಮೈಸೂರಿನ ಸೋಮನಾಥನಗರದ ಆದಿತ್ಯ ಸರ್ಕಲ್‌ನಲ್ಲಿ ಪ್ರತಿಷ್ಠಾಪಿಸಿರುವ ಗಣಪತಿ ಸನ್ನಿಧಾನದಲ್ಲಿ ಶ್ರೀ ಸೋಮೇಶ್ವರ ಸತ್ಸಂಗ ಗ್ರೂಪ್ ವತಿಯಿಂದ ಗಣೇಶ ಮತ್ತು ದೇವರ ಹಾಡುಗಳ ಗಾಯನ ನಡೆಸಿಕೊಡಲಾಯಿತು.

ಭಾನು ಮುಷ್ತಾಕ್ ಆಯ್ಕೆಗೆ ಬೆಂಬಲ...



ಈ ಬಾರಿಯ ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಆಯ್ಕೆ ಮಾಡಿದ್ದನ್ನು ಸ್ವಾಗತಿಸಿ, ಚಾಮುಂಡೇಶ್ವರಿ ಯುವ ಬಳಗದಿಂದ ಮೈಸೂರು ಅರಮನೆ ಮುಂಭಾಗ ಸಿಹಿ ವಿತರಿಸಿ ಸಂಭ್ರಮಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ನಜರ್‌ಬಾದ್ ನಟರಾಜ್, ಕಾಂಗ್ರೆಸ್ ಮುಖಂಡರಾದ ರಮೇಶ್ ರಾಮಪ್ಪ, ಮೈಸೂರು ನಗರ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಅಭಿ, ದಿನೇಶ್, ಮಹೇಶ್, ಶ್ರೀನಿವಾಸ್, ರಾಜೇಶ್, ರಾಘವೇಂದ್ರ, ಹರೀಶ ನಾಯ್ಡು ಮತ್ತಿತರರು ಉಪಸ್ಥಿತರಿದ್ದರು.

ವೀರೇಂದ್ರ ಹೆಗ್ಗಡೆಯವರಿಗೆ ಬೆಂಬಲ ಸೂಚಿಸಿದ ಜೈನ ಮಠಗಳ ಸ್ವಾಮೀಜಿಗಳು



ಧರ್ಮಸ್ಥಳದಲ್ಲಿ ನಡೆದ ಮಹತ್ವದ ಕಾರ್ಯಕ್ರಮದಲ್ಲಿ ನಾಡಿನ ಸಮಸ್ತ ಜೈನ ಮಠಗಳ ಭಟ್ಟಾರಕ ಸ್ವಾಮೀಜಿಗಳು ಒಗ್ಗಟ್ಟಿನಿಂದ ಭಾಗವಹಿಸಿ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸಿದರು.

ಧರ್ಮಸ್ಥಳ, ಆ.30– ಧರ್ಮಸ್ಥಳದಲ್ಲಿ ನಡೆದ ಮಹತ್ವದ ಕಾರ್ಯಕ್ರಮದಲ್ಲಿ ನಾಡಿನ ಸಮಸ್ತ ಜೈನ ಮಠಗಳ ಭಟ್ಟಾರಕ ಸ್ವಾಮೀಜಿಗಳು ಒಗ್ಗಟ್ಟಿನಿಂದ ಭಾಗವಹಿಸಿ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸಿದರು.

ಧರ್ಮಸ್ಥಳದ ಮಹಾದ್ವಾರದಲ್ಲಿ ಸೇರಿದ್ದ ಜೈನ ಸಮುದಾಯದ ನಾಯಕರು ನಂತರ ಜಾಥಾವಾಗಿ ಮುಂದೆ ಸಾಗಿದರು. ಈ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಪಾಲ್ಗೊಂಡು ಧರ್ಮಸ್ಥಳದ ಧಾರ್ಮಿಕ ಪರಂಪರೆಯೊಂದಿಗೆ ನಿಂತಿದ್ದಾರೆಂಬುದನ್ನು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು, ಭಟ್ಟಾರಕ ಸ್ವಾಮೀಜಿಗಳ ಆಗಮನವನ್ನು ಮಹತ್ವದ ಬೆಳವಣಿಗೆಯೆಂದು ವರ್ಣಿಸಿದರು. ಇವತ್ತು ಕ್ಷೇತ್ರಕ್ಕೆ ಹೊಸ ಕಳೆ ಬಂದಿದೆ. ಎಲ್ಲಾ ಜೈನ ಸ್ವಾಮಿಗಳು ನಮ್ಮೊಂದಿಗಿದ್ದಾರೆಂಬುದು ನನಗೆ ದೊಡ್ಡ ಧೈರ್ಯ. ಪ್ರಸ್ತುತ ಪ್ರಕರಣದ ಕುರಿತು ಎಸ್‌ಐಟಿ ತನಿಖೆ ನಡೆಯುತ್ತಿದೆ. ಆದ್ದರಿಂದ ಹೆಚ್ಚು ಮಾತನಾಡಬಾರದು ಎಂಬ ಸೂಚನೆ ಇದೆ. ಆದರೆ ಭಕ್ತರಲ್ಲಿ ಅಶಾಂತಿ ಮನೆ ಮಾಡಿದೆ. ಮಹಿಳೆಯರು ಕಣ್ಣೀರಿಟ್ಟು ನೋವು ವ್ಯಕ್ತಪಡಿಸುತ್ತಿದ್ದಾರೆ. ಪ್ರತಿಭಟನೆಗೆ ಸಿದ್ಧರಾಗಿದ್ದಾರೆ. ಆದರೂ ನಾನು ಎಲ್ಲರನ್ನು ಸಂಯಮದಿಂದ ಇರಲು ವಿನಂತಿಸುತ್ತೇನೆ. ಸತ್ಯವನ್ನು ಬಿಟ್ಟು ನಾನು ಎಂದಿಗೂ ಹೋಗಿಲ್ಲ, ಹೋಗುವುದಿಲ್ಲ. ಶಾಂತತೆ ಹಾಗೂ ತಾಳ್ಮೆ ಎಲ್ಲರೂ ಕಾಪಾಡಬೇಕು. ಸಂಯಮವೇ ಅತ್ಯಂತ ಶ್ರೇಷ್ಠ ಎಂದರು.

ವಿವೇಕಾನಂದರು ದಶ ಲಕ್ಷಣಗಳ ಎಲ್ಲಾ ಗುಣಗಳನ್ನು ಪಾಲಿಸಿದರು, ಆದರೆ ಅವರು ಜೈನ ಧರ್ಮದ ಬಗ್ಗೆ ಹೇಳಿಲ್ಲ. ಸತ್ಯ ಒಂದೇ. ಎಲ್ಲರೂ ದಶ ಧರ್ಮಗಳನ್ನು ಪಾಲಿಸಲೇಬೇಕು ಎಂದು ಕರೆ ನೀಡಿದರು. ತಮಿಳುನಾಡು ಸೇರಿದಂತೆ ವಿವಿಧೆಡೆಯಿಂದ ಬಂದಿರುವ ಸ್ವಾಮೀಜಿಗಳ ಸಾನ್ನಿಧ್ಯವು ಧರ್ಮಸ್ಥಳದ ಭಕ್ತರಿಗೆ ಮತ್ತಷ್ಟು ಭರವಸೆ ತುಂಬಿದೆ. ಪೂಜ್ಯರು ಬಂದಿರುವುದು ವಿಶ್ವಾಸ ಮೂಡಿಸಿದೆ ತಮಿಳುನಾಡಿನಿಂದ ಸ್ವಾಮೀಜಿಗಳು ಬಂದಿದ್ದಾರೆ. ಅವರು ಸನ್ನೆ ಮಾಡಿದರೆ ಸಾಕು ಸಾವಿರಾರು ಜನ ಸೇರುತ್ತಾರೆ. ಎಲ್ಲರಿಗೂ ನನ್ನ ಧನ್ಯವಾದಗಳು. ಸಂಯಮ ಅತ್ಯಂತ ಶ್ರೇಷ್ಠವಾದದ್ದು ಎಂದು ಅಭಿಪ್ರಾಯಪಟ್ಟರು.

ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಆಕ್ರಮಣಗಳು ನಡೆಯುತ್ತವೆ ಎಂದರೆ ಅಲ್ಲಿ ಏನೋ ಶ್ರೇಷ್ಠ, ಒಳ್ಳೆಯದೇ ಇದೆ ಎಂಬ ಅರ್ಥ. ಧರ್ಮಸ್ಥಳದ ಮೇಲಿನ ಟೀಕೆಗಳೂ ಆ ಪರಂಪರೆಯ ಶ್ರೇಷ್ಠತೆಯ ಪ್ರತೀಕವೇ. ವೀರೇಂದ್ರ ಹೆಗ್ಗಡೆ ಅವರ ಮನಸ್ಸು ಶುದ್ಧವಾಗಿದೆ. ಅವರು ಜೈನರು ಎಂಬ ಕಾರಣಕ್ಕೇ ಷಡ್ಯಂತ್ರ ನಡೆದಿದೆ. ದೇವಾಲಯದ ಅಧಿಕಾರ ಕಸಿಯಲು ಹೋರಾಟ ನಡೆಯುತ್ತಿದೆ. ಹೆಗ್ಗಡೆ ಅವರು ಹಿಂದೂ ಮತ್ತು ಜೈನ ಸಮುದಾಯದ ಸೇತುವೆ. ಈ ಸೇತುವೆಯನ್ನು ಮುರಿಯಲು ಷಡ್ಯಂತ್ರ ನಡೆಯುತ್ತಿದೆ. ಆದರೆ ಹಿಂದೂ ಮತ್ತು ಜೈನರನ್ನು ಬೇರ್ಪಡಿಸಲು ಸಾಧ್ಯವಿಲ್ಲ ಎಂದು ಘೋಷಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಲವಾರು ಭಕ್ತರು ಧರ್ಮಸ್ಥಳದ ಗೌರವವನ್ನು ಕಾಪಾಡಲು ತಾವೆಲ್ಲರೂ ಸಜ್ಜಾಗಿದ್ದೇವೆ ಎಂದರು.